ಸಂಪುಟ: 13 Volume | ಸಂಚಿಕೆ: 348 Issue | ಪುಟಗಳು 08 Pages | ಗುರುವಾರ 12 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 7204184576

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ವಿವೇಕಿಯಾದವನು ಬೇರೆಯವರ ತಪ್ಪನ್ನು ಕಂಡು ತನ್ನಲ್ಲಿರುವ ತಪ್ಪನ್ನು ತಿದ್ದಿಕೊಳ್ಳುತ್ತಾನೆ.

–ಸ್ವಾಮಿ ವಿವೇಕಾನಂದ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಡಾ.ಎಂ.ಮಹ್ಮದ್ ಬಾಷ ಗೂಳ್ಯಂ

ಸ್ಥಳೀಯ ಇತಿಹಾಸ ಅರಿವು ಅತ್ಯಗತ್ಯ 6

ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಬಂದ್ ಯಶಸ್ವಿ 7

ಸರ್ಕಾರದ ಕೆಲಸ: ಕೂಲಿಕಾರ್ಮಿಕರು ಮಾದರಿ 8

**ಮಲ್ಲಮ್ಮ ನುಡಿ**

**ಯುಗಾದಿ ವಿಶೇಷಾಂಕ- 2026**

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026


► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com

## ಅಡುಗೆ ಅನಿಲ ಸಮಸ್ಯೆಗೆ ಯುದ್ಧ ಕಾರಣ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಅಡುಗೆ ಅನಿಲ ಸಿಲಿಂಡರ್ ಪೂರೈಕೆಗೆ ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುತ್ತಿದೆ. ದಿಢೀರ್ ಯುದ್ಧದ ಪರಿಣಾಮ ಪೂರೈಕೆಯಲ್ಲಿ ವ್ಯತ್ಯಯವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.



ವಿಧಾನಸೌದ ಬಳಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿ, ಯುದ್ಧ ಆರಂಭವಾಗುತ್ತೆ ಎಂದು ಯಾರಿಗೂ ಮೊದಲೇ ಗೊತ್ತಿರಲಿಲ್ಲ. ದಿಢೀರ್ ಆರಂಭವಾಗಿದ್ದರಿಂದ ಇಂತಹ ಸಮಸ್ಯೆಗಳು ಶುರುವಾಗಿವೆ. ಇಂತಹ ಕನಿಷ್ಠ ತಿಳಿವಳಿಕೆ ಸಹ ಕಾಂಗ್ರೆಸ್ನವರಿಗೆ ಇಲ್ಲವಾಗಿದೆ. ಅಡುಗೆ ಅನಿಲ ಸಮಸ್ಯೆಗೆ ಮುಂದಿನ ದಿನಗಳಲ್ಲಿ ಪರಿಹಾರ ಸಿಗಲಿದೆ ಎಂದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ದಾಖಲೆಯ ಬಜೆಟ್ ಮಂಡಿಸಿದ್ದರು. ಆದರೆ ರಾಜ್ಯದ ಪರಿಸ್ಥಿತಿ ಎಲ್ಲಿಗೆ ಬಂದು ಮುಟ್ಟಿದೆ ಎಂದರೆ ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಗೆ ವೇತನ ಕೊಡಲೂ ಸಾಧ್ಯವಾಗಿಲ್ಲ. ಫೆಬ್ರುವರಿ ತಿಂಗಳ ವೇತನವನ್ನೇ ನೀಡಲಾಗದ ಸ್ಥಿತಿಗೆ ರಾಜ್ಯ ಸರ್ಕಾರ ಬಂದಿದೆ. ರಾಜ್ಯ ದಿವಾಳಿಯತ್ತ ಸಾಗುತ್ತಿದೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕೇ ಎಂದು ಪ್ರಶ್ನಿಸಿದ್ದಾರೆ.

## ತಮಿಳುನಾಡಿಗೆ ಬೆಣ್ಣೆ, ನಮಗೆ ಸುಣ್ಣ..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ತಮಿಳುನಾಡಿನ ಮಧುರೈ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ನಿಲ್ದಾಣವಾಗಿ ಘೋಷಿಸಿರುವ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರಕಾರವು, ರಾಜ್ಯದ ಹುಬ್ಬಳ್ಳಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳ ಬಗ್ಗೆ ಇಂತಹ ನಿರ್ಧಾರ ಘೋಷಿಸದೇ ಇರುವುದು ತಾರತಮ್ಯ ಧೋರಣೆಗೆ ಸಾಕ್ಷಿ ಅವರಿಗೆ ಬೆಣ್ಣೆ, ನಮಗೆ ಸುಣ್ಣ ಎಂದರೆ ಹೇಗೆ ಎಂದು ಸಚಿವ ಎಂ ಬಿ ಪಾಟೀಲ ಬುಧವಾರ ಪ್ರಶ್ನಿಸಿದ್ದಾರೆ.



ಈ ಬಗ್ಗೆ ಮಾತನಾಡಿರುವ ಅವರು, ಕೇಂದ್ರ ಸರಕಾರವು ಹತ್ತಿರದಲ್ಲೇ ಇರುವ ತಮಿಳುನಾಡು ಚುನಾವಣೆಯ ಮೇಲೆ ಕಣ್ಣಿಟ್ಟುಕೊಂಡು ಹೀಗೆ ಮಾಡಿರಬಹುದು. ಆದರೆ ನಮ್ಮ ರಾಜ್ಯದ ಬೇಡಿಕೆ ಬಗ್ಗೆ ಅದು ಉದಾಸೀನ ಮನೋಭಾವ ಪ್ರದರ್ಶಿಸಿರುವುದು ಪ್ರಶ್ನಾರ್ಹ ಎಂದಿದ್ದಾರೆ.

ಹುಬ್ಬಳ್ಳಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸಬೇಕು. ಇದರಿಂದ ಉತ್ತರ ಕರ್ನಾಟಕ ಭಾಗಕ್ಕೆ ಅನುಕೂಲ ಆಗುತ್ತದೆ ಎಂದು ಕಳೆದ ವರ್ಷ (2025ರ ಜೂನ್ 24ರಂದು) ಕೇಂದ್ರ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಅವರಿಗೆ ಪತ್ರ ಬರೆಯಲಾಗಿತ್ತು. ಈಗ ನೋಡಿದರೆ ಹೀಗಾಗಿದೆ ಎಂದು ನುಡಿದಿದ್ದಾರೆ.

## ಬಿಜೆಪಿ ಶಿಸ್ತು ಸಮಿತಿ ಅಧ್ಯಕ್ಷ ರಿಸೈನ್

ಹುಬ್ಬಳ್ಳಿ: ಕರ್ನಾಟಕ ಪಶ್ಚಿಮ ಪದವೀಧರರ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ನೀಡದ ಕಾರಣ ಬೇಸರವಾಗಿದೆ. ಹೀಗಾಗಿ ಬಿಜೆಪಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ಲಿಂಗರಾಜ ಪಾಟೀಲ ಹೇಳಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 37 ವರ್ಷಗಳಿಂದ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಕೆಲಸ ಮಾಡಿರುವೆ. ಪಕ್ಷ ನೀಡಿದ ಹಲವು ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿದ್ದೇನೆ. ಈಗ ಟಿಕೆಟ್ ನೀಡದ ಕಾರಣ ನೋವಾಗಿದೆ ಎಂದು ಭಾವುಕರಾಗಿದ್ದಾರೆ. ಎಸ್.ವಿ.ಸಂಕನೂರ ಅವರಿಗೆ ಟಿಕೆಟ್ ನೀಡಲಾಗಿದೆ. ಅದನ್ನು ಬದಲಿಸಿ ನನಗೆ ಟಿಕೆಟ್ ನೀಡಲು ಇನ್ನೂ ಸಮಯ ಇದೆ. ಎಂಟು ದಿನಗಳಲ್ಲಿ ವರಿಷ್ಠರು ಈ ಬಗ್ಗೆ ತೀರ್ಮಾನ ಮಾಡದಿದ್ದರೆ ನನ್ನ ಮುಂದಿನ ನಿರ್ಧಾರ ಪ್ರಕಟಿಸುತ್ತೇನೆ ಎಂದಿದ್ದಾರೆ.

## 108 ಬಲಿಷ್ಠ ಮಾವೋವಾದಿಗಳು ಶರಣು

ನವದೆಹಲಿ: ನಕ್ಸಲಿಸಂ ವಿರುದ್ಧ ಸರ್ಕಾರ ನಡೆಸುತ್ತಿರುವ ಹೋರಾಟದ ಗಮನಾರ್ಹ ಯಶಸ್ಸಿನಲ್ಲಿ, ಛತ್ತೀಸ್‌ಗಢದಲ್ಲಿ ಮತ್ತೊಂದು ಮಹಾ ಶರಣಾಗತಿ ನಡೆದಿದೆ. ಒಟ್ಟು 3.95 ಕೋಟಿ ರೂ. ಬಹುಮಾನ ಹೊಂದಿದ್ದ 108 ಬಲಿಷ್ಠ ಮಾವೋವಾದಿಗಳು ಪೊಲೀಸರಿಗೆ ಶರಣಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಿಜಾಪುರದಲ್ಲಿ 37, ದಂತೇವಾಡದಲ್ಲಿ 30, ಸುಕ್ಮಾದಲ್ಲಿ 18, ಬಸ್ತಾರ್ನಲ್ಲಿ 16, ನಾರಾಯಣಪುರದಲ್ಲಿ ನಾಲ್ವರು ಮತ್ತು ಕಾಂಕೇರ್ನಲ್ಲಿ ಮೂವರು ಮಾವೋವಾದಿಗಳು ಪೊಲೀಸ್ ಪಡೆಗಳ ಮುಂದೆ ಶರಣಾಗಿದ್ದಾರೆ.

# ಸದನದ ಗ್ಯಾಸ್ ಕದನ

## ಅಮೆರಿಕ, ಇರಾನ್ ನಡುವಿನ ಭೀಕರ ಯುದ್ಧ | ಬಿಜೆಪಿ–ಕಾಂಗ್ರೆಸ್ ನಡುವೆ ಜಟಾಪಟಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಭೀಕರ ಯುದ್ಧ ಇಡೀ ವಿಶ್ವ ಆವರಿಸಿದೆ. ಪ್ರತಿದಿನ ಪ್ರತಿಕ್ಷಣಕ್ಕೊಂದು ಸ್ವರೂಪ ಪಡೆದುಕೊಳ್ಳತೊಡಗಿದೆ. ಅಡುಗೆ ಅನಿಲ ಕೊರತೆ ಎಲ್ಲೆಡೆಯೂ ಕಾಣಿಸಿಕೊಂಡಿದೆ. ರಾಜ್ಯದಲ್ಲೂ ಗ್ಯಾಸ್ ಸಿಲಿಂಡರ್ ಅಭಾವ ಇದ್ದು, ಸದನದಲ್ಲೂ ಬಿಜೆಪಿ–ಕಾಂಗ್ರೆಸ್ ನಡುವಿನ ವಾಕ್ಸಮರಕ್ಕೂ ಕಾರಣವಾಗಿದೆ.

**ಸಿಲಿಂಡರ್ ಸಮಸ್ಯೆ ಪ್ರಸ್ತಾಪ:** ಶೂನ್ಯ ವೇಳೆಯಲ್ಲಿ ಎಲ್ ಪಿ ಜಿ ಸಿಲಿಂಡರ್ ಸಮಸ್ಯೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ಕುಣಿಗಲ್ ರಂಗನಾಥ್ ಪ್ರಸ್ತಾಪ ಮಾಡಿದರು. ಆಹಾರ ಸಚಿವರಿಲ್ಲದ ಕಾರಣ ಬಳಿಕ ಉತ್ತರ ಕೊಡಿಸ್ತೇನೆ ಎಂದು ಸ್ಪೀಕರ್ ಖಾದರ್ ತಿಳಿಸಿದ್ದಾರೆ.

ಕೆಲ ಹೊತ್ತಿನ ಬಳಿಕ ಆಹಾರ ಸಚಿವ ಕೆ ಎಚ್ ಮುನಿಯಪ್ಪ ಸದನಕ್ಕೆ ಆಗಮಿಸಿದ್ದಾರೆ. ಅಧಿಕಾರಿಗಳ ಜತೆ ಚರ್ಚೆ: ಸದನದಲ್ಲಿ ಈ ವಿಚಾರವಾಗಿ ಮಾತನಾಡಿದ ಮುನಿಯಪ್ಪ ಈಗ ತಾನೆ ಅಧಿಕಾರಿಗಳ ಜೊತೆ ಸಭೆ ಮಾಡಿದ್ದೇನೆ. ಗೃಹ ಬಳಕೆ ಗ್ಯಾಸ್ ಸಿಲಿಂಡರ್ ಸಮಸ್ಯೆ ಇಲ್ಲ. 28 ದಿನಕ್ಕೊಮ್ಮೆ ಮಾತ್ರ ಸಿಲಿಂಡರ್ ಬುಕ್ ಮಾಡಬಹುದು. ಆದ್ರೆ ವಾಣಿಜ್ಯ ಬಳಕೆ ಸಿಲಿಂಡರ್ ಸಮಸ್ಯೆ ಇದೆ ಎಂದು ಸದನಕ್ಕೆ ಮನವರಿಕೆ ಮಾಡಿದ್ದಾರೆ.




### ಕೈ ವಿರುದ್ಧ ಕಮಲ ಶಾಸಕರ ಕೆಂಡ

900.ರೂ ಇದ್ದ ಗ್ಯಾಸ್ ಸಿಲಿಂಡರ್ ಬೆಲೆ 1,800.ರೂ ಆಗಿದೆ. ಇದು ಮೋದಿ ಸರ್ಕಾರ ದುರ್ಬಲ ವಿದೇಶಾಂಗ ನೀತಿ ಇದಕ್ಕೆ ಕಾರಣ ಎಂದು ಈ ವೇಳೆ ಎಚ್ ಡಿ ರಂಗನಾಥ್ ಆರೋಪಿಸಿದ್ದಾರೆ. ಪ್ರಧಾನಿ ಹೆಸರು ಪ್ರಸ್ತಾಪಿಸಿದ್ದು ಸದನದಲ್ಲಿ ಗದ್ದಲ ಕೋಲಾಹಲಕ್ಕೆ ಕಾರಣ. ರಂಗನಾಥ್ ವಿರುದ್ಧ ಮುಗಿಬಿದ್ದ ಬಿಜೆಪಿ ಶಾಸಕರು, ಕೇಂದ್ರ ಸರ್ಕಾರದ ವಿರುದ್ಧ ಆರೋಪ ಮಾಡಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ಪ್ರಿಯಾಂಕ್ ವರ್ಸಸ್ ಆರಗ

ಚರ್ಚೆಯ ಸಂದರ್ಭದಲ್ಲಿ ಬಿಜೆಪಿ ಸದಸ್ಯರ ವಿರುದ್ಧ ವಾಗ್ದಾಳಿ ನಡೆಸಿದ ಪ್ರಿಯಾಂಕ್ ಖರ್ಗೆ, ದೇಶದಲ್ಲಿ ಅಡುಗೆ ಅನಿಲದ ಕೊರತೆ ಇಲ್ಲದಿದ್ದರೆ ಕೇಂದ್ರ ಯಾಕೆ ಎಸ್ಮಾ ಜಾರಿ ಮಾಡಿದೆ? ಎಂದು ಬಿಜೆಪಿ ನಾಯಕರನ್ನು ಪ್ರಶ್ನಿಸಿದ್ದಾರೆ. ಬಿಜೆಪಿ ಸದಸ್ಯರು ಪ್ರತಿಕ್ರಿಯಿಸಿ, ಕೇಂದ್ರ ಸರ್ಕಾರ ಅಂದ ತಕ್ಷಣ ಎಲ್ಲರೂ ಎದ್ದು ಮಾತಾಡುತ್ತಾರೆ. ಇದು ಪ್ರಪಂಚದಲ್ಲೇ ಬಂದಿರೋ ಸಮಸ್ಯೆ ಎಂದು ಬಿಜೆಪಿ ಸದಸ್ಯ ಆರಗ ಜ್ಞಾನೇಂದ್ರ ಸಮರ್ಥಿಸಿಕೊಂಡಿದ್ದಾರೆ.

### ಮುಖ್ಯಮಂತ್ರಿ ಸಿದ್ದು ವಾದ

ಅಡುಗೆ ಅನಿಲ ಕೊರತೆ ಸಮಸ್ಯೆ ಬಗ್ಗೆ ಸದನದಲ್ಲಿ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿ, ವಾಣಿಜ್ಯ ಬಳಕೆಯ ಅಡುಗೆ ಅನಿಲ ಬಾರದಿದ್ದರೆ ಪ್ರತಿಭಟಿಸಬೇಕಾಗುತ್ತದೆ ಎಂದು ಹೋಟೆಲ್ ಮಾಲೀಕರು ಹೇಳ್ತಿದ್ದಾರೆ. ಆಗ ಅದು ಸರಿ ಇದೆ ಅಂತಾ ಹೇಳಿದ್ದೆ. ಆದರೆ ನಾನೇ ಪ್ರತಿಭಟನೆ ಮಾಡಿ ಎಂದು ಹೇಳಲಿಲ್ಲ. ಆದರೆ ಹೋಟೆಲ್ ಮಾಲೀಕರ ಬೇಡಿಕೆ ಸರಿ ಇದೆ ಅಂತಾ ಹಿಂದೆಯೂ ಹೇಳಿದ್ದೇನೆ. ಈಗಲೂ ಹೇಳಿದ್ದೀನಿ ಎಂದಿದ್ದಾರೆ.

### ಪ್ರಸಾದಕ್ಕೂ ಗ್ಯಾಸ್ ಬಿಸಿ

ಬೆಂಗಳೂರಿನ ಪ್ರಸಿದ್ಧ ಬನಶಂಕರಿ ದೇವಾಲಯದಲ್ಲಿ ನಿತ್ಯದ ಅನ್ನಪ್ರಸಾದ ಸೇವೆಗೂ ಗ್ಯಾಸ್ ಬಿಸಿ ತಾಕಿದೆ. ಇದರಿಂದಾಗಿ ಅನ್ನಪ್ರಸಾದ ಸೇವೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಪ್ರತಿನಿತ್ಯ ಬನಶಂಕರಿ ದೇವಾಲಯದಲ್ಲಿ 4 ಸಾವಿರ ಜನರಿಗೆ ಪ್ರಸಾದ ವಿತರಣೆ ಮಾಡಲಾಗುತ್ತಿತ್ತು. ಅನ್ನದಾಸೋಹಕ್ಕಾಗಿ ಅಡುಗೆ ಸಿಲಿಂಡರ್ ಬಳಸುತ್ತಿದ್ದ ರಾಜ್ಯದ ಅನೇಕ ದೇವಾಯಗಳಲ್ಲೂ ಇದೇ ರೀತಿ ಪರಿಸ್ಥಿತಿ ಮುಂದುವರಿದಿದೆ.

## ಸಂಪುಟ ಪುನಾರಚನೆಗೆ ಧುರೀಣರ ಸಭೆ..?

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಕುರ್ಚಿ ಜಗಳದಿಂದ ಸಂಪುಟ ಪುನಾರಚನೆ ಕಗ್ಗಂಟು ಅಬಾಧಿತವಾಗಿದೆ. ಇದರಿಂದ ಸಭೆ ನಡೆಸಿ ಮುಂದಿನ ಹೆಜ್ಜೆ ಕುರಿತಾಗಿ ಚರ್ಚೆ ನಡೆಸಲು ಹಿರಿಯ ಶಾಸಕರು ನಿರ್ಧರಿಸಿದ್ದಾರೆ. ಹೈಕಮಾಂಡ್‌ಗೂ ಪತ್ರ ಬರೆಯುವ ಕುರಿತಾಗಿ ನಿರ್ಧಾರವನ್ನು ಕೈಗೊಳ್ಳುವ ಸಾಧ್ಯತೆ ದಟ್ಟವಾಗಿದೆ.

ಎರಡು, ಮೂರು ಬಾರಿಗಿಂತಲೂ ಹೆಚ್ಚಿನ ಅವಧಿಗೆ ಶಾಸಕರಾಗಿರುವವರು ಬೆಂಗಳೂರಿನ ಖಾಸಗಿ ಕ್ಲಬ್‌ನಲ್ಲಿ ಸಭೆ ಸೇರಿ ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ಖಚಿತ ಪಡಿಸಿವೆ.

### ಸಭೆಗೆ ನಾಯಕತ್ವ ಯಾರದು..?

ಟಿ.ಬಿ.ಜಯಚಂದ್ರ, ಕೆ.ಎಂ. ಶಿವಲಿಂಗೇಗೌಡ, ಆರ್.ವಿ.ದೇಶಪಾಂಡೆ, ಲಕ್ಷ್ಮಣ ಸವದಿ, ತನ್ವೀರ್ ಶೇಟ್ ಸೇರಿದಂತೆ ಮೂವತ್ತಕ್ಕೂ ಹೆಚ್ಚು ಹಿರಿಯ ಶಾಸಕರು ಸಭೆ ಸೇರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಎಂದು ಮೂಲ ತಿಳಿಸಿದೆ.

## ಸಂಸತ್ತಲ್ಲಿ ದನಿ ಹತ್ತಿಕ್ಕುವ ಕಾರ್ಯ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ



ಲೋಕಸಭೆಯಲ್ಲಿ ನನ್ನನ್ನು ಹಲವು ಬಾರಿ ಮಾತನಾಡದಂತೆ ತಡೆಯಲಾಗಿದೆ ಎಂದು ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಈ ಸದನವು ಒಂದು ಪಕ್ಷವನ್ನು ಪ್ರತಿನಿಧಿಸುವುದಿಲ್ಲ, ಬದಲಾಗಿ ಇಡೀ ದೇಶವನ್ನು ಪ್ರತಿನಿಧಿಸುತ್ತದೆ ಎಂದು ಪ್ರತಿಪಾದಿಸಿದ್ದಾರೆ. ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧದ ಅವಿಶ್ವಾಸ ನಿರ್ಣಯದ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ರಾಹುಲ್ ಗಾಂಧಿ, ಪ್ರಧಾನಿ ನರೇಂದ್ರ ಮೋದಿ ಅವರು ರಾಜಿ ಮಾಡಿಕೊಂಡಿದ್ದಾರೆ ಮತ್ತು ಅದರ ಫಲಿತಾಂಶ ಎಲ್ಲರಿಗೂ ಗೊತ್ತಿದೆ ಎಂದು ಟೀಕಿಸಿದ್ದಾರೆ. ಪ್ರತಿಪಕ್ಷದ ನಾಯಕ ತನ್ನ ಮಾತುಗಳನ್ನು, ವಿಶೇಷವಾಗಿ ರಾಷ್ಟ್ರೀಯ ಭದ್ರತೆಯ ವಿಷಯಗಳ ಬಗ್ಗೆ ಎಚ್ಚರಿಕೆಯಿಂದ ಮಾತನಾಡಬೇಕು ಎಂದ ಬಿಜೆಪಿಯ ರವಿಶಂಕರ್ ಪ್ರಸಾದ್ ಹೇಳಿಕೆಗೆ ಪ್ರತಿಕ್ರಿಯಿಸಿದ ರಾಹುಲ್, ಚರ್ಚೆಯ ಸಮಯದಲ್ಲಿ ನನ್ನ ಹೆಸರನ್ನು ಹಲವು ಬಾರಿ ಎತ್ತಲಾಗುತ್ತಿದೆ ಎಂದಿದ್ದಾರೆ.

## ವೈದ್ಯ ನಿರ್ಲಕ್ಷ್ಯಕ್ಕೆ ಸಾವು, ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ತಾಲೂಕು ಸರ್ಕಾರಿ ಆಸ್ಪತ್ರೆಗೆ ಬಂದು ವೃದ್ಧೆಯನ್ನು ಸರಿಯಾಗಿ ನೋಡದ ವೈದ್ಯರ ನಿರ್ಲಕ್ಷ್ಯದಿಂದ ಮೃತಪಟ್ಟಿದ್ದಾರೆ ಎಂದು ಆರೋಪಿಸಿ ಸಂಬಂಧಿಕರು ಶವವನ್ನು ಮುಖ್ಯ ರಸ್ತೆ ಮೇಲೆ ಇಟ್ಟು ಪ್ರತಿಭಟನೆ ನಡೆಸಿದ್ದಾರೆ. ಲಿಂಗಸುಗೂರು ತಾಲೂಕಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು 85 ವರ್ಷದ ವೃದ್ಧೆಗೆ ಉಸಿರಾಟ ಸಮಸ್ಯೆ ಆಗಿದ್ದು, ಆಸ್ಪತ್ರೆಯಲ್ಲಿ ಆಕ್ಸಿಜನ್ ಇಲ್ಲ ಎಂದು ಹೆಚ್ಚಿನ ಚಿಕಿತ್ಸೆಗಾಗಿ ಸಿಂಧನೂರು ಅಸ್ಪತ್ರೆಗೆ ದಾಖಲಿಸಲಾಗಿತ್ತು. ಸರಿಯಾಗಿ ಚಿಕಿತ್ಸೆ ನೀಡದ ವೈದ್ಯರಿಂದಲೇ ತಪಟ್ಟಿದ್ದಾರೆ ಎಂದು ಸಂಬಂಧಿಕರು ಆಸ್ಪತ್ರೆಯ ವೈದ್ಯರು ವಿರುದ್ಧ ಆರೋಪಿಸಿದ್ದಾರೆ.

ಎರಡು ಮೂರು ಕಡೆಗೆ ರೋಗಿಗಳಿಗೆ ವಾಂತಿ ಭೇದಿ. ಹಾವು ಕಚ್ಚಿದ್ದು, ಮತ್ತೊಂದು ಕಡೆಗೆ ಐಸಿಯುನಲ್ಲಿದ್ದ ರೋಗಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಶಿಫಾರಸು ಮಾಡುವುದಕ್ಕೆ ಹೋಗಿದ್ದೆ. ಅಷ್ಟರಲ್ಲಿ ಸಂಗಮ್ಮ ಅಜ್ಜಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

–ಡಾ.ಕೋನಿಕ್ ಕಾಟ್ಟ

## ಅನ್ಯರ ಕೊಕ್ಕೆ ಸಮಾಜದ ವೃತ್ತಿಗೆ ಧಕ್ಕೆ

• ಮಲ್ಲಮ್ಮ ನುಡಿ ವಾರ್ತೆ ಮಲ್ಲಿಕಾರ್ಜುನ ರಡ್ಡಿ,ಹುಮನಾಬಾದ್



ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕಾಲಾಂತರದಿಂದ ಬಂದಿರುವ ಸವಿತಾಸಮಾಜದ ಕಾಯಕ ಪರಂಪರೆಯ ವೃತ್ತಿಗೂ ಇತ್ತೀಚೆಗೆ ಧಕ್ಕೆ ಎದುರಾಗಿದೆ. ಪೀಳಿಗೆಯಿಂದ ಪೀಳಿಗೆ ಈ ವೃತ್ತಿಯನ್ನು ನಂಬಿಕೊಂಡು ಬದುಕು ಸಾಗಿಸುತ್ತಿರುವ ಸವಿತಾಸಮಾಜದವರ ಬದುಕಿನ ಮೇಲೆ ಈಗ ಬೇರೆ ವೃತ್ತಿಯವರು ಸೇವೆ ನೀಡಲು ಆರಂಭಿಸಿರುವುದು ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಹಳೆಯ ಕಾಲದಲ್ಲಿ ಕ್ಷೌರಿಕ ವೃತ್ತಿ ಒಂದು ಗೌರವಯುತ ಸೇವೆ. ಮದುವೆ, ಹಬ್ಬ, ವಿವಿಧ ಸಂಸ್ಕಾರಗಳ ಸಂದರ್ಭದಲ್ಲಿ ಇವರ ಸೇವೆ ಅನಿವಾರ್ಯವಾಗಿತ್ತು.

### ಸರ್ಕಾರ ಸಮಾಜಕ್ಕೆ ಸಹಾಯ ಮಾಡಬೇಕು

ಸರ್ಕಾರ ಹಾಗೂ ಸಂಬಂಧಿತ ಇಲಾಖೆಗಳು ಸವಿತಾಸಮಾಜದ ವೃತ್ತಿಯನ್ನು ರಕ್ಷಿಸುವತ್ತ ಗಮನ ಹರಿಸಬೇಕು. ಪರಂಪರೆಯಿಂದ ಈ ವೃತ್ತಿ ನಡೆಸುತ್ತಿರುವವರಿಗೆ ವಿಶೇಷ ಯೋಜನೆಗಳು, ತರಬೇತಿ, ಆರ್ಥಿಕ ನೆರವು ನೀಡುವ ಮೂಲಕ ಅವರ ಬದುಕಿಗೆ ಭದ್ರತೆ ಒದಗಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

### ಅಪಾಯದ ಅಂಚಿನಲ್ಲಿ ಸಮಾಜದ ವೃತ್ತಿ

ಇದು ಪರಂಪರೆಯ ವೃತ್ತಿ. ಅದು ಉಳಿದರೆ ಮಾತ್ರ ನಮ್ಮ ಕುಟುಂಬಗಳ ಜೀವನ ಭದ್ರ. ಇಲ್ಲವಾದರೆ ಈ ವೃತ್ತಿ ನಿಧಾನವಾಗಿ ನಶಿಸುವ ಅಪಾಯವಿದ್ದು, ಅದರ ಪರಿಣಾಮವಾಗಿ ಸಾವಿರಾರು ಕುಟುಂಬಗಳು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ. ಆದ್ದರಿಂದ ಸರ್ಕಾರ ಈ ವಿಷಯದಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕಿದೆ.

## ಸಿಲಿಂಡರ್ ಬೆಲೆ ಏರಿಕೆಗೆ ಆಕ್ರೋಶ



• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಗೃಹ ಬಳಕೆಯ ಎಲ್ಪಿಜಿ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆಯ ಹಿನ್ನೆಲೆ ವಿಜಯಪುರ ನಗರದ ಅಂಬೇಡ್ಕರ್ ವೃತ್ತದಲ್ಲಿ ಕಾಂಗ್ರೆಸ್ ಮಹಿಳಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಗೃಹ ಬಳಕೆಯ ಸಿಲಿಂಡರ್ ಬೆಲೆ 1100ಕ್ಕೆ ಏರಿಕೆಯಾಗಿರುವುದರಿಂದ ಬಡ, ಮಧ್ಯಮ ವರ್ಗದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಕಿಡಿಕಾರಿದ್ದಾರೆ. ಮಹಿಳಾ ಕಾರ್ಯಕರ್ತರು ಅಂಬೇಡ್ಕರ್ ವೃತ್ತದಲ್ಲೇ ಕಟ್ಟಿಗೆಯ ಮೇಲೆ ಅಡುಗೆ ಮಾಡಿ, ಕೇಂದ್ರ ಸರ್ಕಾರ ತಕ್ಷಣವೇ ಗ್ಯಾಸ್ ಸಿಲಿಂಡರ್ ಬೆಲೆಯನ್ನು ಇಳಿಸಬೇಕು ಎಂದು ಒತ್ತಾಯಿಸಿದ್ದಾರೆ.

## ರಾಜ್ಯದಲ್ಲಿ ಕಾಳಸಂತೆ ಸಿಲಿಂಡರ್ ಮಾರಾಟಗಾರರ ಮೇಲೆ ಉಗ್ರ ಕ್ರಮ: ಡಾ.ಜಿ ಪರಮೇಶ್ವರ

# ವಿಚಾರ ಸಂಕಿರಣ ಮುಂದೂಡಿಕೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಭಾರತದ ಪ್ರಸ್ತುತ ಸವಾಲುಗಳು, ಡಾ॥ ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳು ಮತ್ತು ಸಮಕಾಲೀನ ಪರಿಹಾರಗಳು ಎಂಬ ವಿಷಯದ ಕುರಿತು 2026ನೇ ಮಾರ್ಚ್.14 ರಂದು ಬೆಳಿಗ್ಗೆ 9.30 ಗಂಟೆಗೆ ಬೀದರನ ಬೆಲ್ದಾಳೆ ಕನ್ವೇನ್ಷನ್ ಹಾಲ್ ಪ್ರತಾಪ ನಗರದಲ್ಲಿ ಮತ್ತು 2026ನೇ ಮಾರ್ಚ್.15 ರಂದು ಬೆಳಿಗ್ಗೆ 10:30ಕ್ಕೆ ಡಾ॥ ಚನ್ನಬಸವ ಪಟ್ಟದೇವರು ರಂಗ ಮಂದಿರ ಬೀದರದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿರುವುದನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ ಎಂದು ಬೀದರ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳು, ವಿಚಾರಧಾರೆ ಸಾರ್ವಕಾಲಿಕವಾಗಿದ್ದು, ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ನಡೆಯುವ ಚಿಂತನೆ ಮಂಥನದಿಂದ ಇಡೀ ಸಮಾಜಕ್ಕೆ ಬೆಳಕು ಮೂಡುವಂತಿರಬೇಕು ಇದಕ್ಕಾಗಿ ಡಾ॥ ಅಂಬೇಡ್ಕರ್ ಅವರ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವ ದೇಶಾದ್ಯಂತದ ಕೆಲವು ತಜ್ಞರನ್ನು ಆಹ್ವಾನಿಸಿ, ಇನ್ನೂ ಹೆಚ್ಚು ಅರ್ಥಪೂರ್ಣವಾಗಿ ಆಚರಿಸುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಗಿರುತ್ತದೆ ಎಂಬ ನಿಟ್ಟಿನಲ್ಲಿ ಪ್ರಸ್ತುತ ನಿಗದಿಪಡಿಸಿರುವ ಕಾರ್ಯಕ್ರಮವನ್ನು ಕಾರಣಾಂತರದಿಂದ ಮುಂದೂಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

# ಪೊಲೀಸರ ಕಾರ್ಯಾಚರಣೆ: ಗಾಂಜಾ ಜಪ್ತಿ



» 19,77,500 ಮೌಲ್ಯದ ಗಾಂಜಾ ಜಪ್ತಿ
» ದ್ವಿಚಕ್ರ ವಾಹನ ಜಪ್ತಿ
» ಇಬ್ಬರು ಆರೋಪಿಗಳ ಬಂಧನ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಸಂತಪೂರ ಪೊಲೀಸ್ ಠಾಣೆಯ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ 19 ಲಕ್ಷಕ್ಕೂ ಅಧಿಕ ಮೌಲ್ಯದ 38 ಕೆಜಿ 950 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡು ಇಬ್ಬರು ಆರೋಪಿಗಳ ವಿರುದ್ಧ ಅಪರಾಧ ಸಂಖ್ಯೆ 26/2026 ಕಲಂ 20(ಭ), (ಏ) ಅ, 29ರ ಎನ್ ಡಿಪಿಎಸ್ ಅಡಿ ಪ್ರಕರಣ ದಾಖಲು ಮಾಡಿ ಆರೋಪಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಔರಾದ ತಾಲೂಕಿನ ಜಂಬಗಿ (ಬಿ) ಗ್ರಾಮದಿಂದ ಸೊರಹಳ್ಳಿ ಮಾರ್ಗವಾಗಿ ದತ್ತ ಮಂದಿರದ ಎದುರುಗಡೆ ರೋಡಿನ ಮೇಲೆ ಇಬ್ಬರು ವ್ಯಕ್ತಿಗಳು ಗಾಂಜಾ ಮಾರಾಟ ಮಾಡಲು ದ್ವಿಚಕ್ರ ವಾಹನದ ಮೇಲೆ ಬರುತ್ತಿರುವಾಗ ಖಚಿತ ಮಾಹಿತಿ ಮೇರೆಗೆ ಭಾಲ್ಕಿ ಡಿವೈಎಸಿ ಶಿವಾನಂದ್ ಪವಾಡಶೆಟ್ಟಿ, ಸಿಪಿಐ ರಘುವಿರ ಸಿಂಗ್ ಠಾಕೂರ, ಸಂತಪೂರ ಪಿಎ ದಿನೇಶ್ ಎಂ ಟಿ.ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ 19.47.500ರೂ ಮೌಲ್ಯದ 38ಕೆಜಿ 950ಗ್ರಾಂ ಗಾಂಜಾ, ಹಾಗೂ 30 ಸಾವಿರ ರೂ ಮೌಲ್ಯದ ಒಂದು ದ್ವಿಚಕ್ರ ವಾಹನ, ಸೇರಿ ಒಟ್ಟು 19,77, 500ರೂ ಮೌಲ್ಯದ ವಸ್ತು ಜಪ್ತಿ ಮಾಡಿ ಇಬ್ಬರು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ,

ಕಾರ್ಯಚರಣೆಯಲ್ಲಿ ಎಎ ಶೇಷರಾವ,ಸಿಬ್ಬಂದಿಗಳಾದ ಅರುಣಸಿಂಗ, ಸಂತೋಷ ಹೆಚ್ ಸಿ (ವೈ), ರಾಮರೆಡ್ಡಿ ,ಸುಭಾಷ, ಕೊಟ್ರೇಶ, ಪ್ರಕಾಶ, ರಾಜಶೇಖರ,ಗೌತಮ, ದತ್ತಾತ್ರಿ ಭಾಗವಹಿಸಿದರು,

ಕಾರ್ಯಾಚರಣೆ ನಡೆಸಿದ ಅಧಿಕಾರಿ ಸಿಬ್ಬಂದಿಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ಅವರು ಶ್ಲಾಘನೆ ವ್ಯಕ್ತಪಡಿಸಿದರು.

# ಮಹಿಳೆಯರು ಸಮಾಜದ ಭದ್ರ ಬುನಾದಿ ನಿರ್ಮಿಸುವ ಶಕ್ತಿ: ಮಂಜುಳಾ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ಹಾಗೂ ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ.ಇವರ ಸಂಯುಕ್ತ ಆಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಆಗಸ್ಟ್ 11 ರಂದು ಬೀದರ್ ನಗರದ ಸಾಮರ್ಥ್ಯ ಕೇಂದ್ರ ಮಿನಿಹಾಲ್‌ನಲ್ಲಿ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಸರ್ಕಾರದ ಮಾಜಿ ಮಹಿಳಾ ಆಯೋಗದ ಅಧ್ಯಕ್ಷೆ ಕು.ಮಂಜುಳಾ ಅವರು, ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸದೃಢರಾಗಬೇಕು ಎಂದು ಕರೆ ನೀಡಿದರು. ವೀರ ವನಿತೆಯರಾಗಿ ಸಮಾಜಕ್ಕೆ ಸೇವೆ ಸಲ್ಲಿಸುವಂತಹ ವೀರಪುತ್ರರನ್ನು ರೂಪಿಸುವಲ್ಲಿ ತಾಯಂದಿರ ಪ್ರಾಮಾಣಿಕ ಪ್ರಯತ್ನ ಅಗತ್ಯವಿದೆ.ಸಮಾಜದ ಭದ್ರ ಬುನಾದಿ ನಿರ್ಮಿಸುವಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಗುರುನಾಥ ಜ್ಯಾಂತಿಕರ್ ಮಾತನಾಡಿ, ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡುತ್ತಿದ್ದಾರೆ.ವೈಜ್ಞಾನಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಅವರು ತಮ್ಮ ಸಾಮರ್ಥ್ಯವನ್ನು ತೋರಿಸಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ನಾರಿಯರ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು. ಜೊತೆಗೆ ಇಂದಿನ ಮಕ್ಕಳನ್ನು ಮೊಬೈಲ್ ಬಳಕೆಯಿಂದ ದೂರವಿಟ್ಟು ಉತ್ತಮ ನಾಗರಿಕರನ್ನಾಗಿ ರೂಪಿಸುವ ಹೊಣೆಗಾರಿಕೆ ತಾಯಂದಿರ ಮೇಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಕು. ವಿಧ್ಯಾವತಿ, ಕು.ಶಿವಾನಿ,ಕು. ಮಂಗಳಾ ಹಾಗೂ ಶ್ರೀಮತಿ ಮಂಜು ಹೂಗಾರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಮಹಿಳಾ ಸಹಕಾರ ' ಮಹಾಮಂಡಳದ ಅಧ್ಯಕ್ಷೆ ಶ್ರೀಮತಿ ಶಕುಂತಲಾ ಕೆ. ಬೆಲ್ದಾಳೆ, ಕ.ರಾ. ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕಿ ಶ್ರೀಮತಿ ಶೈಲಜಾ ತಪಲಿ ಹಾಗೂ ಬೀದರ್ ಜಿಲ್ಲೆಯ ಸಹಕಾರಿಗಳ ಉಪನಿಬಂಧಕಿ ಡಾ.ಮಂಜುಳಾ ಎಸ್.ಉಪಸ್ಥಿತರಿದ್ದು,ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿದರು. ಸಹಕಾರಿಗಳ ಸದಸ್ಯರು ಯಶಸ್ವಿನಿ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕಿ ಶ್ರೀಮತಿ ಮಾಯಾದೇವಿ ಸಿಂದನಕೇರಾ ಸ್ವಾಗತಿಸಿದರು. ಬೀದರ್ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ರಾಜೇಶ್ ಕೆ.ಎಂ. ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕ ಅಮೃತ್ ಹೊಸಮನಿ ಹಾಗೂ ನಿರ್ದೇಶಕರಾದ ನಾಗಶೆಟ್ಟಿ ಪಾಟೀಲ್, ಶ್ರೀಕಾಂತ ಸ್ವಾಮಿ, ಸಂಜೀವ್ ಕುಮಾರ್ ಸಜ್ಜನ್,ಶಿವಶಂಕರ್ ಬೆಳಮಗಿ,ಮಾರುತಿ ವಾಡೇಕರ್, ಮಾದೇವ ಅಸ್ಟೂರೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ 105 ಸಹಕಾರಿಗಳ ಮಹಿಳಾ ಪ್ರತಿನಿಧಿಗಳು ಸೇರಿದಂತೆ ಒಟ್ಟು 125 ಮಂದಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಭವಾನಿ ಹೊಸಮನಿ ನಿರೂಪಿಸಿ, ಪದ್ಮಜಾ ಪೊದ್ದರ್ ವಂದಿಸಿದರು

# ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

## ಜಾನುವಾರು ಸಾಕಾಣಿಕೆಗೆ ರಾಜ್ಯ ಸರ್ಕಾರದಿಂದ ರೈತರಿಗೆ ಹೆಚ್ಚಿನ ನೆರವು ಅಗತ್ಯ

ರಾಜ್ಯದ ಗ್ರಾಮೀಣ ಆರ್ಥಿಕತೆಯಲ್ಲಿ ಜಾನುವಾರು ಸಾಕಾಣಿಕೆ ಪ್ರಮುಖ ಪಾತ್ರ ವಹಿಸುತ್ತದೆ. ರೈತರು ಕೃಷಿಯ ಜೊತೆಗೆ ಹಸು, ಎಮ್ಮೆ, ಕುರಿ, ಮೇಕೆ ಸೇರಿದಂತೆ ವಿವಿಧ ಜಾನುವಾರುಗಳನ್ನು ಸಾಕಿ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಹಾಲು ಉತ್ಪಾದನೆ, ಮಾಂಸ ಉತ್ಪಾದನೆ ಮತ್ತು ಪಶು ಉತ್ಪನ್ನಗಳ ಮೂಲಕ ರೈತರಿಗೆ ಹೆಚ್ಚುವರಿ ಆದಾಯ ದೊರೆಯುತ್ತದೆ. ಆದ್ದರಿಂದ ಜಾನುವಾರು ಸಾಕಾಣಿಕೆ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸಲು ರಾಜ್ಯ ಸರ್ಕಾರ ರೈತರಿಗೆ ಹೆಚ್ಚಿನ ನೆರವು ನೀಡುವುದು ಅತ್ಯಂತ ಅವಶ್ಯಕವಾಗಿದೆ.

ಇತ್ತೀಚಿನ ದಿನಗಳಲ್ಲಿ ಮೇವು ಕೊರತೆ, ಪಶು ವೈದ್ಯಕೀಯ ಸೇವೆಗಳ ಅಭಾವ, ಜಾನುವಾರುಗಳ ಖರೀದಿ ವೆಚ್ಚ ಹೆಚ್ಚಳ ಇತ್ಯಾದಿ ಸಮಸ್ಯೆಗಳು ರೈತರನ್ನು ಕಾಡುತ್ತಿವೆ. ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ಪಶು ಆಸ್ಪತ್ರೆಗಳು ಸರಿಯಾಗಿ ಕಾರ್ಯನಿರ್ವಹಿಸದೆ ಇರುವುದರಿಂದ ರೈತರು ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಜಾನುವಾರುಗಳಿಗೆ ರೋಗ ಬಂದಾಗ ತಕ್ಷಣ ಚಿಕಿತ್ಸೆ ದೊರೆಯದ ಕಾರಣ ರೈತರಿಗೆ ಆರ್ಥಿಕ ನಷ್ಟ ಉಂಟಾಗುತ್ತಿದೆ.

ರಾಜ್ಯ ಸರ್ಕಾರವು ಜಾನುವಾರು ಸಾಕಾಣಿಕೆಗೆ ಸಂಬಂಧಿಸಿದಂತೆ ಅನುದಾನ ಹೆಚ್ಚಿಸುವುದು, ಮೇವು ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವುದು, ಗ್ರಾಮ ಮಟ್ಟದಲ್ಲಿ ಪಶು ವೈದ್ಯಕೀಯ ಸೇವೆಗಳನ್ನು ಬಲಪಡಿಸುವುದು ಅತ್ಯಗತ್ಯವಾಗಿದೆ. ಜೊತೆಗೆ ಹಾಲು ಉತ್ಪಾದನೆಗೆ ಪ್ರೋತ್ಸಾಹಧನ ಹೆಚ್ಚಿಸುವುದು, ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಹೆಚ್ಚಿನ ಬೆಂಬಲ ನೀಡುವುದು ಕೂಡ ಅಗತ್ಯವಾಗಿದೆ.

ಇದಲ್ಲದೆ, ಕುರಿ–ಮೇಕೆ ಸಾಕಾಣಿಕೆ ಮತ್ತು ಹಸು–ಎಮ್ಮೆ ಖರೀದಿಗೆ ಸರಳ ಸಾಲ ಸೌಲಭ್ಯ ಒದಗಿಸಿದರೆ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಪಶುಸಂಗೋಪನೆಗೆ ಮುಂದಾಗಬಹುದು. ಯುವಕರಿಗೂ ಈ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗುತ್ತವೆ.

ಒಟ್ಟಾರೆ ನೋಡಿದರೆ ಜಾನುವಾರು ಸಾಕಾಣಿಕೆ ರೈತರ ಬದುಕಿಗೆ ಪ್ರಮುಖ ಆಧಾರವಾಗಿದೆ. ಆದ್ದರಿಂದ ಈ ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರ್ಕಾರ ವಿಶೇಷ ಯೋಜನೆಗಳನ್ನು ರೂಪಿಸಿ ರೈತರಿಗೆ ಹೆಚ್ಚಿನ ನೆರವು ನೀಡಿದರೆ ಗ್ರಾಮೀಣ ಆರ್ಥಿಕತೆ ಮತ್ತಷ್ಟು ಬಲವಾಗುತ್ತದೆ ಎಂಬುದು ಜನರ ನಿರೀಕ್ಷೆಯಾಗಿದೆ.

# ಜನಗಣತಿ ಕಾರ್ಯ ಆರಂಭ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ರಾಜ್ಯದಾದ್ಯಂತ ಏಪ್ರಿಲ್ 1 ರಿಂದ ಮೇ.15ರವರೆಗೆ ನಾಗರೀಕರು ಮೊಬೈಲ್ ಆಪ್‌ನಲ್ಲಿ ಸ್ವಯಂ ಗಣತಿ ಮಾಡಿಕೊಳ್ಳಬಹುದು. ಏಪ್ರಿಲ್ 16 ರಿಂದ ಮೇ.15ರವರೆಗೆ ಗಣತಿದಾರರು ಮನೆ ಪಟ್ಟಿ ಜನಗಣತಿ ಕಾರ್ಯ ನಡೆಯಲಿದ್ದು, ಅಧಿಕಾರಿಗಳು ನಿಖರ ಮತ್ತು ಸ್ಪಷ್ಟ ಮಾಹಿತಿಯನ್ನು ಸಂಗ್ರಹಿಸಿ ನೀಡಬೇಕು ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ ಸೂಚನೆ ನೀಡಿದರು. ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ 2027ರ ಭಾರತ ಜನಗಣತಿಯ ಅಂಗವಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳು, ಚಾರ್ಜ್ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಸಿಬ್ಬಂದಿಗೆ 3 ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.ಜನಗಣತಿ ಮೊದಲ ಬಾರಿ 1872ರಲ್ಲಿ ಆರಂಭಿಸಲಾಗಿದ್ದು, ಈ ವರೆಗೆ ಒಟ್ಟು 15 ಜನಗಣತಿಗಳಾಗಿವೆ. ಸ್ವತಂತ್ರ ನಂತರದಲ್ಲಿ 8 ಜನಗಣತಿ ನಡೆಸಲಾಗಿದೆ. ಈ ಹಿಂದೆ 2011ರಲ್ಲಿ ಜನಗಣತಿ ಕಾರ್ಯ ನಡೆಸಲಾಗಿದೆ. ಅದರಂತೆ 2021ರಲ್ಲಿ ಜನಗಣತಿ ಕಾರ್ಯ ವಿವಿಧ ಕಾರಣಾಂತರಗಳಿಂದ ಮುಂದೂಡಲಾಗಿದ್ದು, ಅದಕ್ಕೆ ಪೂರಕವಾಗಿ ಜಿಲ್ಲೆಯ ನಗರ, ತಾಲೂಕು, ಅದರಲ್ಲೀ ಗ್ರಾಮೀಣ ಪ್ರದೇಶಗಳಲ್ಲಿ ನಿಖರ ಮತ್ತು ಸ್ಪಷ್ಟವಾದ ದತ್ತಂಶದೊಂದಿಗೆ ಮಾಹಿತಿ ನೀಡಬೇಕು ಎಂದರು.ದೇಶವು ಭೌಗೋಳಿಕ, ಸಾಮಾಜಿಕ ಮತ್ತು ಪ್ರಾದೇಶಿಕವಾಗಿ ಭಿನ್ನವಾಗಿದೆ. ಜನಗಣತಿ ಕಾರ್ಯ ದೇಶದ ಪ್ರಗತಿಗೆ ಅತ್ಯಂತ ಪ್ರಮುಖವಾಗಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು, ಗಣತಿದಾರರು ಸೇರಿ ಸರಿಯಾದ ಮಾಹಿತಿಯನ್ನಾಧಾರಿತ ಜನಗಣತಿ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕಿದೆ. ದೇಶದಾದ್ಯಂತ ಇದೇ ಪ್ರಪ್ರಥಮ ಬಾರಿಗೆ 2027ರ ಜನಗಣತಿಯು ಮೊಬೈಲ್ ಆಪ್ ಮೂಲಕ ಡಿಜಿಟಲ್ ಮೊಡ್ ನಲ್ಲಿ ನಡೆಯಲಿದೆ. ಆದ್ದರಿಂದ ಅಧಿಕಾರಿಗಳು ನಿಖರ ಮತ್ತು ಸ್ಪಷ್ಟವಾಗಿ ಪಾರದರ್ಶಕತೆ ದತ್ತಾಂಶ ಸಂಗ್ರಹಿಸಬೇಕು. ಗಣತಿ ಕಾರ್ಯಕ್ಕೆ ಗ್ರಾಮೀಣ ಭಾಗಕ್ಕೆ 6, ನಗರ ಭಾಗದಲ್ಲಿ 8 ಎಣಿಕೆದಾರರು, ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಗಣತಿ ಕಾರ್ಯದ ವೇಳೆ ಯಾವುದೇ ರೀತಿಯ ಗೊಂದಲಗಳುಂಟಾದಲ್ಲಿ ಮೇಲ್ವಿಚಾರಕರನ್ನು ಅಥವಾ ಮೇಲಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು ಎಂದರು.

# ಗೋಡಂಬಿ ಬೆಳೆ ಕೆಂಪು ಮಣ್ಣಿನಲ್ಲಿ, ಬಂಜರು ಭೂಮಿಯಲ್ಲಿ ಬೆಳೆಯಲು ರೈತರಿಗೆ ಸಲಹೆ

• ಮಲ್ಲಮ್ಮ ನುಡಿ ವಾರ್ತೆ ಬೀದರ



ಬಂಗಾರದ ಬೆಳೆ ಎಂದೇ ಕರೆಯಲ್ಪಡುವ ಗೋಡಂಬಿ ಬೆಳೆಯನ್ನು ರೈತರು ಕಪ್ಪು ಮಣ್ಣಿನಲ್ಲಿ ಬೆಳೆಯದೆ, ಕೆಂಪು ಮಣ್ಣಿನಲ್ಲಿ ಮತ್ತು ಬಂಜರು ಭೂಮಿಯಲ್ಲಿ ಮಾತ್ರ ಬೆಳೆಯಬೇಕು. ಇದನ್ನು ಬೆಳೆಯಲು ತೋಟಗಾರಿಕೆ ಇಲಾಖೆಯ ಸಹಾಯ ಸಹಕಾರ ಮತ್ತು ತೋಟಗಾರಿಕೆ ವಿಜ್ಞಾನಿಗಳ ತಾಂತ್ರಿಕ ಸಲಹೆ ಪಡೆದು ಹೆಚ್ಚಿನ ಲಾಭ ಪಡೆಯಬೇಕೆಂದು ಬೀದರ ತೋಟಗಾರಿಕಾ ಕಾಲೇಜಿನ ಡೀನ್ ಡಾ.ಎಸ್.ವಿ.ಪಾಟೀಲ್ ಹೇಳಿದರು.

ಅವರು ಬುಧವಾರ ಬೀದರ ತಾಲೂಕಿನ ಕಮಠಾಣಾ ಗ್ರಾಮದ ನಾಗನಾಥರಾವ ನಿಡೋದೆ ಅವರ ಗೋಡಂಬಿ ಹೊಲದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ ಅಡಿಯಲ್ಲಿ "ಗೋಡಂಬಿ ಬೆಳೆಯ ಮೇಲೆ ರೈತರಿಗಾಗಿ ಆಯೋಜಿಸಿದ ಒಂದು ದಿನದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರೈತರು ಶ್ರಮಜೀವಿಗಳಾಗಿ ನೈಸರ್ಗಿಕ ಬದುಕನ್ನು ಕಟ್ಟಿಕೊಳ್ಳಬೇಕು. ಗಂಡು ಹೆಣ್ಣು ಎಂಬ ಭೇದ ಭಾವ ಮಾಡದೆ ಎಲ್ಲರೂ ಮೈಮುರಿದು ದುಡಿದು ಸ್ವಾವಲಂಬಿಗಳಾಗಬೇಕೆಂದರು.

ಕಳೆದ 14 ವರ್ಷಗಳಿಂದ ಮೂರು ಎಕರೆ ಪ್ರದೇಶದಲ್ಲಿ ಗೋಡಂಬಿ ಬೆಳೆಯನ್ನು ಯಶಸ್ವಿಯಾಗಿ ಬೆಳೆದು ವಾರ್ಷಿಕ 2.50 ಲಕ್ಷ ರೂಪಾಯಿಗೂ ಅಧಿಕ ಲಾಭ ಪಡೆಯುತ್ತಿರುವ ನಾಗನಾಥರಾವ ನಿಡೋದೆ ಮಾತನಾಡಿ, ಗೋಡಂಬಿ ಬೆಳೆಯನ್ನು ಬೆಳೆಯಲು ರೈತರಿಗೆ ಸ್ವಲ್ಪ ಆರ್ಥಿಕ ಸಹಾಯ ನೀಡುವ ಯಾವುದಾದರೂ ಒಂದು ಯೋಜನೆಯನ್ನು ಜಾರಿಗೊಳಿಸಿ ಎಂದು ಮನವಿ ಮಾಡಿದರು. ಮೂರ್ನಾಲ್ಕು ವರ್ಷ ರೈತರು ಗೋಡಂಬಿ ಬೆಳೆಯಲು ಶ್ರಮಿಸಿದರೆ ನಂತರ ಪ್ರತಿ ವರ್ಷ ನಿರಂತರ ಆದಾಯ ಪಡೆಯಬಹುದು ಎಂದು ಹೇಳಿದರು.

ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,ಬೀದರ ತೋಟಗಾರಿಕೆ ಕಾಲೇಜು ಮತ್ತು ಕೊಚ್ಚಿಯ ಗೋಡಂಬಿ ಮತ್ತು ಕೋಕೋ ಅಭಿವೃದ್ಧಿ ನಿರ್ದೇಶನಾಲಯದ ಸಹಯೋಗದಲ್ಲಿ ಆಯೋಜಿಸಿದ ಈ ಕಾರ್ಯಕ್ರಮದಲ್ಲಿ ತೋಟಗಾರಿಕೆ ಕಾಲೇಜಿನ ಡಾ.ಮಹ್ಮದ್ ಫಾರೂಕ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕುಶಾಲರಾವ ಮುಖ್ಯ ಅತಿಥಿಗಳಾಗಿದ್ದರು.

ತೋಟಗಾರಿಕೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರುಗಳಾದ ಡಾ.ವಿ.ಪಿ.ಸಿಂಗ್ "ಗೋಡಂಬಿ ಉತ್ಪಾದನೆಯಲ್ಲಿ ತಾಂತ್ರಿಕತೆ", ಡಾ.ಅಬ್ದುಲ್ ಕರೀಂ ಎಂ."ಗೋಡಂಬಿ ಬೆಳೆಯ ರೋಗ ನಿರ್ವಹಣೆ", ಡಾ. ರಾಜಕುಮಾರ ಎಂ. "ಗೋಡಂಬಿ ಬೆಳೆಯ ಕೀಟ ನಿರ್ವಹಣೆ" ಮತ್ತು ಡಾ. ಹರೀಶ ಟಿ. "ಗೋಡಂಬಿ ಸುಗ್ಗಿಯ ನಂತರದ ಸಂಸ್ಕರಣೆ ಮತ್ತು ಮೌಲ್ಯವರ್ಧಿತ ಉತ್ಪನ್ನಗಳು" ಕುರಿತು ರೈತರಿಗೆ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ ನೀಡಿದರು. ತೋಟಗಾರಿಕೆ ಕಾಲೇಜಿನ ವಿಜಯ ಮಹಾಂತೇಶ ಕಾರ್ಯಕ್ರಮ ನಿರೂಪಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಸುಮಾರು 50 ರೈತರು ಪಾಲ್ಗೊಂಡಿದ್ದರು.


# ಮಾರ್ಚ್ 16 ರಂದು ಉದ್ಯೋಗ ಮೇಳ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಸರ್ಕಾರಿ ಐಟಿಐ ಕಾಲೇಜ್) ಎಂ.ಎಸ್.ಪಾಟೀಲ್ ಫಂಕ್ಷನ್ ಹಾಲ್ ಹಿಂದುಗಡೆ, ಕುಂಬಾರವಾಡಾ ಕ್ರಾಸ್ ಎದುರು, ಮನ್ನಳ್ಳಿ ರಸ್ತೆ (ಗುಂಪಾ ರಸ್ತೆ) ಬೀದರ ಇಲ್ಲಿ ಮಾರ್ಚ್..16 ರಂದು ಬೆಳಿಗ್ಗೆ 10.30 ಗಂಟೆಗೆ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದು ಬೀದರ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಉದ್ಯೋಗ ಮೇಳದಲ್ಲಿ ಪ್ರಮುಖ ಕಂಪನಿಗಳಾದ ಊಖಊ & ಓಇಫಿಖಿ ಇಜಣಃಡಿಜರಜ ಭಾಗವಹಿಸಲಿವೆ. ಮೇಳದಲ್ಲಿ ಬಿಪಿಓ ಮತ್ತು ಐಟಿ ಕ್ಷೇತ್ರದ ಉದ್ಯೋಗ ಅವಕಾಶಗಳು ಲಭ್ಯವಿದ್ದು, 10ನೇ ತರಗತಿಯಿಂದ ಯಾವುದೇ ಪದವಿವರೆಗೆ ಓದಿರುವ ವಿದ್ಯಾರ್ಥಿಗಳು ಭಾಗವಹಿಸಬಹುದು. ಉದ್ಯೋಗಾವಕಾಶಗಳನ್ನು ಹುಡುಕುತ್ತಿರುವ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಇದು ಉತ್ತಮ ಅವಕಾಶವಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೊಬೈಲ್ ಸಂಖ್ಯೆ: 9916364114, 9505478126 ನಂಬಗಳಿಗೆ ಸಂಪರ್ಕಿಸಬಹುದಾಗಿದೆ ಅವರು ತಿಳಿಸಿದ್ದಾರೆ.

# ವಿಮಾನ ನಿಲ್ದಾಣ ಮಾಡಿ ಇಲ್ಲವೇ ಭೂಮಿ ಕೊಡಿ



ಬೆಂಗಳೂರು, : ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡುತ್ತೀರೋ ಇಲ್ಲವೋ ಸ್ಪಷ್ಟಪಡಿಸಿ. ಇಲ್ಲವಾದಲ್ಲಿ ಅರ್ಸಲ್ಲರ್ ಮಿತ್ತಲ್, ವಿಮಾನ ನಿಲ್ದಾಣಕ್ಕಾಗಿ ಸ್ವಾಧೀನಕ್ಕೆ ಪಡೆದಿರುವ ಭೂಮಿಯನ್ನು ರೈತರಿಗೇ ಹಿಂದಿರುಗಿಸಿ ಎಂದು ವಿಧಾನಪರಿಷತ್ ಸದಸ್ಯರಾದ ವೈ. ಎಂ. ಸತೀಶ್ ಅವರು ಆಗ್ರಹಿಸಿದ್ದಾರೆ.


ವಿಧಾನಪರಿಷತ್ತಿನ ಬಜೆಟ್ ಅಧಿವೇಶದಲ್ಲಿ ಮಂಗಳವಾರ, ಬಳ್ಳಾರಿ ವಿಮಾನ ನಿಲ್ದಾಣಕ್ಕೆ ಭೂ ಸ್ವಾಧೀನ ಮಾಡಿಕೊಂಡಿರುವ ವಿಷಯ ಪ್ರಸ್ತಾಪಿಸಿ, ಅಧಿಕಾರಿಗಳು ರಸ್ತೆಗೆ ಭೂಮಿಯನ್ನು ಸ್ವಾಧೀನ ಮಾಡಿಕೊಂಡಿಲ್ಲ. ಅಧಿಕಾರಿಗಳು ಮತ್ತು ಸರ್ಕಾರದ ಮಧ್ಯೆ ಯಾವ ರೀತಿಯಲ್ಲಿ ಕೆಲಸ ನಡೆಯುತ್ತಿದೆ ಎನ್ನಲು ಇದು ಉತ್ತಮವಾದ ಸಾಕ್ಷಿ. ರಸ್ತೆ ಇಲ್ಲದೇ ವಿಮಾನ ನಿಲ್ದಾಣಕ್ಕಾಗಿ ಭೂ ಸ್ವಾಧೀನ ಮಾಡಿಕೊಂಡ ಅಧಿಕಾರಿಗೆ ಗೌರವ ಸನ್ಮಾನ ಮಾಡಬೇಕು ಎಂದು ವ್ಯಂಗ್ಯವಾಡಿದರು.ಆಗ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಎಂ.ಬಿ. ಪಾಟೀಲ್ ಅವರು, ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳಿಂದಲೂ ವಿಮಾನ ನಿಲ್ದಾಣಕ್ಕಾಗಿ ಬೇಡಿಕೆ ಬಂದಿದೆ.

ಕಾರಣ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಯ ಜನಪ್ರತಿನಿಧಿಗಳ ಸಭೆಯನ್ನು ಶೀಘ್ರದಲ್ಲೇ ಏರ್ಪಡಿಸಿ, ವಿಮಾನ ನಿಲ್ದಾಣವನ್ನು ಎಲ್ಲಿ ನಿರ್ಮಾಣ ಮಾಡಲಾಗುತ್ತದೆ ಎನ್ನುವ ಸ್ಪಷ್ಟ ನಿರ್ಧಾರವನ್ನು ಕೈಗೊಳ್ಳಲಾಗುತ್ತದೆ. ಆ ನಂತರವೇ, ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ಪ್ರಾರಂಭಿಸುವ ಕುರಿತು ಸ್ಪಷ್ಟವಾಗಿ ಹೇಳಲು ಸಾಧ್ಯ ಎಂದರು. ಬಳ್ಳಾರಿಯಲ್ಲಿ ಪಿಪಿಪಿ ಮಾದರಿಯಲ್ಲಿ ವಿಮಾನ ನಿಲ್ದಾಣವನ್ನು ನಿರ್ಮಾಣ ಮಾಡಲು ಮಾರ್ಗ್ ಶ್ರೀ ಕೃಷ್ಣದೇವರಾಯ ಏರ್ಪೋರ್ಟ್ ಪ್ರೈವೇಟ್ ಲಿಮಿಟೆಡ್ಗೆ 03.08.2010ರಲ್ಲಿ ಲೆಟರ್ ಆಫ್ ಅವಾರ್ಡ್ (ಕಾಮಗಾರಿ ಪ್ರಾರಂಭಿಸಲು) ಪತ್ರ ನೀಡಲಾಗಿ, 06.08.2010 ರಂದು ಯೋಜನಾ ಅಭಿವೃದ್ಧಿ ಒಪ್ಪಂದಕ್ಕಾಗಿ ಸರ್ಕಾರ ಮತ್ತು ಕಂಪನಿ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಆದರೆ, ಕಂಪನಿಯು ಕಾಮಗಾರಿಯನ್ನು ಪ್ರಾರಂಭಿಸದ ಕಾರಣ ಭೂಮಿಯನ್ನು ಕಂಪನಿಗೆ ಹಸ್ತಾಂತ ಮಾಡದೇ, ಒಪ್ಪಂದವನ್ನು ರದ್ದು ಮಾಡಲಾಯಿತು ಎಂದು ಅವರು ಉತ್ತರಿಸಿದರು.

ಬಳ್ಳಾರಿ ವಿಮಾನ ನಿಲ್ದಾಣವನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ ನಿರ್ಮಾಣ ಮಾಡಲು ಡಿಪಿಆರ್ ಸಿದ್ಧಪಡಿಸಲು ಸಮಾಲೋಚಕರನ್ನು ನೇಮಕ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿದೆ ಎಂದು ಅವರು ಹೇಳಿದರು. ಆಗ, ವೈ.ಎಂ. ಸತೀಶ್ ಅವರು, ಬಳ್ಳಾರಿ ವಿಮಾನ ನಿಲ್ದಾಣ ಸೇರಿ, ಕುಡತಿನಿಯ ಆರ್ಸಲರ್ ಮಿತ್ತಲ್ಗಾಗಿ ಸ್ವಾಧೀನ ಮಾಡಿಕೊಂಡಿರುವ ಭೂಮಿಯಲ್ಲಿ, ಉದ್ದೇಶಿತ ಯೋಜನೆ ಬರದೇ ಇದ್ದಲ್ಲಿ, ಆ ಭೂಮಿಯನ್ನು ರೈತರಿಗೇ ಹಿಂದಿರುಗಿಸಿ. ಇಲ್ಲವಾದಲ್ಲಿ ಇದು ಬಿಳಿ ಆನೆ ಆಗಲಿದೆ ಎಂದು ಆಗ್ರಹಿಸಿದರು.

# ಮಾಣಿಕನಗರದಲ್ಲಿ ಹಬ್ಬದ ವಾತಾವರಣ, ಪ್ರತಿನಿತ್ಯ ಕೊಲಾಟ, ಸಾಂಸ್ಕೃತಿಕ ಕಾರ್ಯಕ್ರಮಗಳ ವೈಭವ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್



ಬೀದರ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಮಾಣಿಕನಗರದಲ್ಲಿ ಈ ದಿನಗಳಲ್ಲಿ ಹಬ್ಬದ ಸಂಭ್ರಮ ಮನೆಮಾಡಿದೆ. ಗ್ರಾಮದೆಲ್ಲೆಡೆ ಭಕ್ತರ ಸಂಚಾರ ಹೆಚ್ಚಾಗಿದ್ದು, ದೇವಾಲಯ ಪ್ರದೇಶದಲ್ಲಿ ಉತ್ಸವದ ವಾತಾವರಣ ನಿರ್ಮಾಣವಾಗಿದೆ. ಪ್ರತಿನಿತ್ಯ ನಡೆಯುತ್ತಿರುವ ಕೊಲಾಟ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಭಕ್ತರನ್ನು ಹಾಗೂ ಸಾರ್ವಜನಿಕರನ್ನು ಆಕರ್ಷಿಸುತ್ತಿವೆ.

ಸಂಜೆ ವೇಳೆಗೆ ದೇವಸ್ಥಾನ ಆವರಣದಲ್ಲಿ ಮಹಿಳೆಯರು ಹಾಗೂ ಯುವತಿಯರು ಸೇರಿ ಸಂಪ್ರದಾಯಬದ್ಧವಾಗಿ ಕೊಲಾಟ ಆಡುತ್ತಿರುವ ದೃಶ್ಯ ಎಲ್ಲರ ಗಮನ ಸೆಳೆಯುತ್ತಿದೆ. ಗ್ರಾಮೀಣ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ಈ ಕಾರ್ಯಕ್ರಮದಲ್ಲಿ ಮಕ್ಕಳು, ಯುವಕರು, ಹಿರಿಯರು ಎಲ್ಲರೂ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ.

ಇದರ ಜೊತೆಗೆ ಭಕ್ತಿಗೀತೆಗಳು, ಹಾರಿಕಥೆ, ನೃತ್ಯ ಹಾಗೂ ಸಂಗೀತ ಕಾರ್ಯಕ್ರಮಗಳು ನಡೆಯುತ್ತಿದ್ದು, ದೇವರ ಭಕ್ತಿಯ ಜೊತೆಗೆ ಸಂಸ್ಕೃತಿಯ ಸೊಬಗು ಕೂಡ ಇಲ್ಲಿ ಕಾಣಿಸುತ್ತಿದೆ. ದೂರದ ಊರುಗಳಿಂದಲೂ ಭಕ್ತರು ಆಗಮಿಸಿ ಕಾರ್ಯಕ್ರಮಗಳನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ.

ಮಾಣಿಕನಗರದಲ್ಲಿ ನಡೆಯುತ್ತಿರುವ ಈ ಉತ್ಸವಗಳು ಕೇವಲ ಧಾರ್ಮಿಕ ಆಚರಣೆ ಮಾತ್ರವಲ್ಲದೆ, ನಮ್ಮ ಸಂಪ್ರದಾಯ ಹಾಗೂ ಸಂಸ್ಕೃತಿಯನ್ನು ಉಳಿಸುವ ಮಹತ್ವದ ವೇದಿಕೆಯಾಗಿ ಪರಿಣಮಿಸುತ್ತಿವೆ. ಗ್ರಾಮಸ್ಥರು ಹಾಗೂ ಭಕ್ತರು ಒಟ್ಟಾಗಿ ಈ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಿರುವುದು ಗಮನಾರ್ಹವಾಗಿದೆ.

ಹೀಗಾಗಿ ಮಾಣಿಕನಗರದಲ್ಲಿ ಈ ದಿನಗಳಲ್ಲಿ ಪ್ರತಿನಿತ್ಯ ನಡೆಯುತ್ತಿರುವ ಕೊಲಾಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಹಬ್ಬದ ವಾತಾವರಣವನ್ನು ಮತ್ತಷ್ಟು ಉಜ್ವಲಗೊಳಿಸುತ್ತಿವೆ. ಭಕ್ತರು ಭಕ್ತಿ ಭಾವದಿಂದ ಭಾಗವಹಿಸುತ್ತಿದ್ದು, ಊರಿನೆಲ್ಲೆಡೆ ಸಂಭ್ರಮದ ವಾತಾವರಣ ನಿರ್ಮಾಣವಾಗಿದೆ.


ಕರ್ನಾಟಕ ಸರ್ಕಾರ

**ಪುರಸಭೆ ಕಾರ್ಯಾಲಯ, ಹುಮನಾಬಾದ ಜಿ|| ಬೀದರ**

TOWN MUNICIPAL COUNCIL HUMNABAD DIST:BIDAR

ವೆಬ್ ಸೈಟ್: WWW.humnabadtown.mrc.gov.in
ಇ–ಮೇಲ್ : itstaff_ulb_humnabad@yahoo.com
ಕಛೇರಿ ದೂರವಾಣಿ ಸಂಖ್ಯೆ:08483–271722 ಥೇರಮ್ಮೆದಾನ ಹುಮನಾಬಾದ:585330

ಸಂ:ಪುಸಹು/ತೈ.ಬ/01/2025–26 ದಿನಾಂಕ: 09–03–2025

**ವಾರದ ಸಂತೆ ವಸೂಲಿ ಗುತ್ತಿಗೆ ಅಲಾವು ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೆನೆಂದರೆ, 2026–27ನೇ ಸಾಲಿನ ವಾರದ ಸಂತೆ ವಸೂಲಿ ಗುತ್ತಿಗೆಯನ್ನು ಲಿಲಾವಿನ ಮೂಲಕ ಪಡೆದುಕೊಳ್ಳಲು ದಿನಾಂಕ: 17–03–2026 ರಂದು ಬೆಳಿಗ್ಗೆ 11:30 ಗಂಟೆಗೆ ಪುರಸಭೆ ಕಾರ್ಯಾಲಯ ಆವರಣದಲ್ಲಿ ಬಹಿರಂಗ ಹರಾಜನ್ನು ಮಾಡಲಾಗುವುದು. ಆದ್ದರಿಂದ ನಿಗಧಿತ ಠೇವಣಿ ಹಣ ಹಾಗೂ ನಿಗಧಿತ ಅರ್ಜಿ ಶುಲ್ಕವನ್ನು ದಿನಾಂಕ: 16–03–2026 ರಂದು ಬೆಳಿಗ್ಗೆ 11:00 ಗಂಟೆಯಿಂದ ದಿನಾಂಕ: 17–03–2026 ರಂದು ಬೆಳಿಗ್ಗೆ 11:00 ಗಂಟೆಯ ರವರೆಗೆ ಮುಖ್ಯಾಧಿಕಾರಿ ಪುರಸಭೆ ಹುಮನಾಬಾದ ರವರ ಹೆಸರಿಗೆ ಸಂದಾಯವಾಗುವಂತೆ ಬ್ಯಾಂಕ ಡಿ.ಡಿ. ಅಥವಾ ಪುರಸಭೆಯಲ್ಲಿ ನಗದು ರಸೀದಿ ಪಡೆದು ಹರಾಜಿನಲ್ಲಿ ಭಾಗವಹಿಸಬಹುದಾಗಿದ್ದು ಹೆಚ್ಚಿನ ಮಾಹಿತಿಗಾಗಿ ಪುರಸಭೆ ಕಾರ್ಯಾಲಯದ ಕಂದಾಯ ಶಾಖೆಗೆ ಸಂಪರ್ಕಿಸಲು ಸೂಚಿಸಿದೆ.

| ಕ್ರ.ಸಂ | ಹರಾಜಿನ ವಿವರ | ಆರ್ಥಿಕ ವರ್ಷ | ಠೇವಣಿ ಮೊತ್ತ | ಹಿಂದಿರುಗಿಸಲಾಗದ ಅರ್ಜಿ ಶುಲ್ಕ |
|---|---|---|---|---|
| 1. | ವಾರದ ಸಂತೆ ವಸೂಲಿ ಗುತ್ತಿಗೆ | 2026–27 | 50,000/– | 2500/– |

ಸಹಿ/–
ಮುಖ್ಯಾಧಿಕಾರಿಗಳು
ಪುರಸಭೆ ಹುಮನಾಬಾದ

# ಇಫ್ತಾರ್ ಕೂಟದಲ್ಲಿ ಗುರುಮಠಕಲ್ ಕಾಂಗ್ರೆಸ್ ನಾಯಕರ ಭಾಗಿ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಪಟ್ಟಣದಲ್ಲಿ ಮಂಗಳವಾರ ಆಯೋಜಿಸಲಾದ ಇಫ್ತಾರ್ ಕೂಟದಲ್ಲಿ ಗುರುಮಠಕಲ್ ಕಾಂಗ್ರೆಸ್ ಪಕ್ಷದ ನಾಯಕರು ಭಾಗವಹಿಸಿ ಸೌಹಾರ್ದತೆ ಹಾಗೂ ಸಹೋದರತ್ವದ ಸಂದೇಶ ಸಾರಿದರು.ಪವಿತ್ರ ರಮಜಾನ್ ತಿಂಗಳ ಅಂಗವಾಗಿ ಸ್ಥಳೀಯ ಮುಸ್ಲಿಂ ಸಮುದಾಯದವರಿಂದ ಆಯೋಜಿಸಲಾದ ಇಫ್ತಾರ್ ಕೂಟದಲ್ಲಿ ಅಂಬಿಗರ ಚೌಡಯ್ಯ ನಿಗಮದ ಅಧ್ಯಕ್ಷರಾದ ಬಾಬುರಾವ್ ಚಿಂಚನಸೂರು, ಬಸಿರೆಡ್ಡಿ ಅನಪೂರ್, ಕೃಷ್ಣ ಚಪೆಟ್ಲಾ ,ಸಂಜೀವ ಕುಮಾರ್ ಚಂದಾಪುರ್,ಸೈಯದ್ ಮೈನುದ್ದಿನ್, ಅಖ್ತರ್ ಪ್ಯಾರೇ, ಸೈಯದ್ ಬಾಬಾ, ಫೈಯಜ್ ಅಹಮದ್, ಇನ್ನಿತರ ಮುಖಂಡರು ಉಪವಾಸ ಮುರಿಯುವ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಎಲ್ಲಾ ಧರ್ಮಗಳ ಜನರು ಒಂದಾಗಿ ಸಮಾಜದಲ್ಲಿ ಶಾಂತಿ, ಸಹಬಾಳ್ವೆ ಹಾಗೂ ಸೌಹಾರ್ದತೆ ಉಳಿಯಬೇಕು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಹಲವು ಕಾಂಗ್ರೆಸ್ ಮುಖಂಡರು, ಸ್ಥಳೀಯ ಗಣ್ಯರು ಹಾಗೂ ಮುಸ್ಲಿಂ ಸಮುದಾಯದ ಮುಖಂಡರು ಉಪಸ್ಥಿತರಿದ್ದು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.



ಗ್ರಾಮದ 6ನೇ ವಾರ್ಡಿನ ತರಕಾರಿ ಮಾರುಕಟ್ಟೆಯಲ್ಲಿ ಬರುವ ಚರಂಡಿಯನ್ನು ಈ ಮೊದಲು ನೀರು ಹೋಗುವ ಮಾರ್ಗವಾಗಿ ಚರಂಡಿ ನಿರ್ಮಾಣ ಮಾಡುವಂತೆ ಗ್ರಾಮ ಪಂಚಾಯಿತಿ ಕರವಸಲಿಗಾರ ಗಾದಿಲಿಂಗಪ್ಪ ಅವರಿಗೆ 6ನೇ ವಾರ್ಡಿನ ನಿವಾಸಿಗಳು ಮನವಿ ಸಲ್ಲಿಸಿದರು ಈ ವೇಳೆ ವಾರ್ಡಿನ ನಿವಾಸಿ ಹಾಗೂ ಸಾಮಾಜಿಕ ಕಾರ್ಯಕರ್ತ ಎಸ್ ರಾಮಪ್ಪ ಮಾತನಾಡಿ ಹೊಸದಾಗಿ ನಿರ್ಮಾಣವಾಗುತ್ತಿರುವ ತರಕಾರಿ ಮಾರುಕಟ್ಟೆಯ ನೀರನ್ನು ಮೊದಲಿನಂತೆ ರೆಡ್ಡಿ ಮತ್ತು ಕೊರವರು ಓಣಿಯ ಮನೆಯ ಹಿಂಭಾಗದಲ್ಲಿ ಚರಂಡಿ ನಿರ್ಮಾಣ ಮಾಡಿ ಮೊದಲಿನಂತೆ ನೀರನ್ನು ಕಳುಹಿಸಬೇಕು ಯಾವುದೇ ಕಾರಣಕ್ಕೂ ಮನೆಯ ಮುಂಭಾಗದಿಂದ ಚರಂಡಿ ನೀರನ್ನು ಕಳಿಸಬಾರದು ಎಂದು ಒತ್ತಾಯಿಸಿದರು ಈ ಸಂದರ್ಭದಲ್ಲಿ ಸುರೇಶ್ ರೆಡ್ಡಿ ಮಲ್ಲಿಕಾರ್ಜುನ ಸಿಬ್ಬಂದಿ ಈಶ್ವರ ಸೇರಿದಂತೆ ಇತರರು ಇದ್ದರು

# ಗ್ಯಾಸನ್ನೇ ನಂಬಿರುವ ಹೋಟೇಲ್ ಬಂದ್



• ಎರೆಡು ದಿನ ಮಾತ್ರ ಸಪ್ಲೈಯಂತೆ
• ಪ್ಲಾಸ್ಟಿಕ್ ಕವರ್ ಕೆಜಿಗೆ 50 ರೂ ಹೆಚ್ಚು.

## ಗ್ಯಾಸ್ ಇಲ್ಲದಿದ್ದರೆ ಹೇಗೆ

**ನಮ್ಮ ಬೇಕರಿ ಉತ್ಪನ್ನಗಳ ಉತ್ಪಾದನೆ ವಿದ್ಯುತ್ ಅವಲಂಬಿಸಿದ್ದರೂ, ಮಸಾಲೆ ತಯಾರಿ ಮೊದಲಾದವುಗಳಿಗೆ ದಿನಕ್ಕೆ ಒಂದು ಸಿಲಿಂಡರ್ ಬೇಕು. ಅವನ್ನು ಕೊಡದಿದ್ದರೆ ಹೇಗೆ. ಗ್ಯಾಸ್ ಸಮಸ್ಯೆಯಾದರೆ ಹೇಗೆ ಆಹಾರ ಉತ್ಪಾದನೆ ಸಾಧ್ಯ**

ಚನ್ನಕೇಶವ ಕಂಪ್ಲಿ
ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ /ಬಳ್ಳಾರಿ

ಕೊಲ್ಲಿ ರಾಷ್ಟ್ರಗಳ ಯುದ್ಧ ಪರಿಣಾಮ ಹೊಟೇಲ್ ಉದ್ಯಮದ ಮೇಲೆ ಬಿದ್ದಿದೆ. ಹೊಟೇಲ್ ಗಳಲ್ಲಿ ಆಹಾರ ತಯಾರಿಕೆಗೆ ಬಳಸುತ್ತಿದ್ದ ವಾಣಿಜ್ಯ ಅಡುಗೆ ಅನಿಲ(ಗ್ಯಾಸ್) ಪೂರೈಕೆ ಸಮಸ್ಯೆಯಾಗಿದ್ದು ಇನ್ನೆರೆಡು ಮೂರು ದಿನದಲ್ಲಿ ಗ್ಯಾಸ್ ನ್ನೇ ಅವಲಂಬಿಸಿರುವ ಹೊಟೇಲ್ ಗಳು ಬಂದ್ ಆಗುವ ಸಾಧ್ಯತೆ ಇದೆ.

ಇರಾನ್ ಇರಾಕ್ ನಡುವಿನ ಯುದ್ಧ ಮಧ್ಯಪ್ರಾಚ್ಯದ ಬಹುತೇಖ ರಾಷ್ಟ್ರಗಳಿಗೆ ವ್ಯಾಪಿಸಿದ್ದು. ಭಾರತಕ್ಕೆ ಸರಬರಾಜು ಆಗುತ್ತಿದ್ದ ಕ್ರೂಡ್ ಆಯಿಲ್ ನ ಪೂರೈಕೆ ಕುಸಿತ ಕಂಡಿರುವುದರಿಂದ ಗ್ಯಾಸ್ ಉತ್ಪಾದನೆಯೂ ಕಡಿಮೆಯಾಗತೊಡಗಿದೆ.

ಇದರಿಂದ ಭಾರತದಲ್ಲಿ ಗೃಹ ಬಳಕೆ ಸಿಲಿಂಡರ್ ಗಳ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಮಾಡಲು. ವಾಣಿಜ್ಯ ಬಳಕೆಯ ಸಿಲಿಂಡರ್ ಗಳ ಪೂರೈಕೆ ಕಡಿತಗೊಳಿಸಲಾಗುತ್ತಿದೆ.

ಗ್ಯಾಸ್ ಸರಬರು ಕಂಪನಿಯವರು ಎನ್ನೆರೆಡು ದಿನಕ್ಕೆ ಮಾತ್ರ ಸಿಲಿಂಡರ್ ಸಪ್ಲೈ ಮಾಡಲಿದೆಂದು ಹೊಟೇಲ್ ಮಾಲೀಕರಿಗೆ ಹೇಳಿದ್ದಾರಂತೆ.

ಕೆಲ ಹೊಟೇಲ್ ಗಳು ರೇಣುಕಾ ಕಿಚನ್ ಹೊಯ್ಸಳ ರ್ಮದಲಾದವು ಎಲೆಕ್ಟ್ರಿಕಲ್ ಗೀಜರ್ ಸ್ಟೀಮ್ ಮೂಲಕ ಅಥವಾ ಹಳೇ ಸಂಪ್ರದಾಯದ ನೆಲ್ಲು ಹೊಟ್ಟು, ಕಟ್ಟಿಗೆ ಮೂಲಕ ಅಡುಗೆ ಮಾಡುವವರಿಗೆ ಒಂದಿಷ್ಟು ಸಮಸ್ಯೆ ಕಡಿಮೆ ಇದ್ದರೂ ಇಲ್ಲಿಯೂ ಒಂದೆರೆಡು ಸಿಲಿಂಡರ್ ಬೇಕು.

ಇನ್ನು ಗ್ಯಾಸ್ ಸಿಲಿಂಡರನ್ನೇ ನಂಬಿಕೊಂಡಿರುವ ಹೊಟೇಲ್ ಗಳು ಸಿಲಿಂಡರ್ ದೊರೆಯದೆ ಇದ್ದರೆ ಬಂದ್ ಮಾಡುವ ಪರಿಸ್ಥಿತಿ ಎದುರಾಗುತ್ತಿದೆ. ಬೇಕರಿಗಳಿಗೂ ಈ ಸಮಸ್ಯೆ ಎದುರಾಗಲಿದೆ. ಇನ್ನು ಬೇಕರಿ ಮೊದಲಾದ ಉತ್ಪನ್ನಗಳನ್ನು ನೀಡಲು ಬಳಸುತ್ತಿದ್ದ ಪೆಟ್ರೋಲಿಯಂ ಆಧಾರಿತ ಉತ್ಪಾದನೆಯ ಪ್ಯಾಕಿಂಗ್ ಸಾಮಾಗ್ರಿ, ಪ್ಲಾಸ್ಟಿಕ್ ಚೀಲಗಳು ಸಹ ದುಬಾರಿಯಾಗಿವೆ ಪ್ಲಾಸ್ಟಿಕ್ ಕವರ್ ಕಿಲೋಗೆ 50 ರೂ ಹೆಚ್ಚಾಗಿದೆ.

# ಜಮೀರ್ ಅಹ್ಮದ್ ಬಳಿ ಕ್ಷಮೆ ಕೇಳಲು ಒತ್ತಾಯ



ಮುದಗಲ್ : ಜಮೀರ ಅಹಮದ್ ಖಾನ್ ವಿರುದ್ಧ ಏಕವಚನದಲ್ಲಿ ಮಾತನಾಡಿದ ಎಸ್ ಎಸ್ ಮಲ್ಲಿಕಾರ್ಜುನ ಅವರು ಕ್ಷಮೆ ಕೇಳಲೇ ಬೇಕು ಎಂದು ರಾಹುಲ್ ಗಾಂಧಿ ಬ್ರಿಗೇಡ್ ಕಾರ್ಯದರ್ಶಿ ಎಸ್ ಆರ್ ರಸೂಲ್ ಸಾಬ್ ಬುಧುವಾರ ದೂರಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಪಕ್ಷಕ್ಕೆ ಮತದಾರರು ಮಾತ್ರ ದೊಡ್ಡವರು. ಜಮೀರ್ ಅಹ್ಮದರು ಎರಡು ಜಿಲ್ಲೆಯ ಉಸ್ತುವಾರಿ ಹಾಗೂ ತಾರಾ ಪ್ರಚಾರಕರಾಗಿದ್ದಾರೆ. ಶಾಮನೂರು ಶಿವಶಂಕರಪ್ಪನವರ ಅವಧಿಯಿಂದ ನಾವು ಮನವಿ ಮಾಡುತ್ತಿದ್ದು, ಇಲ್ಲಿಯವರೆಗೂ ಅವರಿಗೆ ಬೆಂಬಲ ನೀಡುತ್ತಾ ಬಂದಿದ್ದೇವೆ. ಅವರ ಕಾಲವಾದ ನಂತರ ನಮಗೆ ಅವಕಾಶ ಕೇಳಿದ್ದೇವೆ. ಶಾಮನೂರು ನಮ್ಮ ಜೊತೆ ಚೆನ್ನಾಗಿದ್ದರು. ಆದರೆ ಎಸ್ ಎಸ್ ಮಲ್ಲಿಕಾರ್ಜುನ್ ವರ್ತನೆ ಬೇರೆ ರೀತಿಯಲ್ಲಿ ಇದೆ ಎಂದು ದೂರಿದರು. ನಮ್ಮ ನಾಯಕರ ಬಗ್ಗೆ ಮಾತನಾಡಬೇಡಿ. ಜಮೀರ್ ಅಲ್ಪಸಂಖ್ಯಾತರಲ್ಲದೇ ಎಲ್ಲಾ ಅಹಿಂದ ಸಮುದಾಯಗಳ ನಾಯಕರಾಗಿದ್ದಾರೆ. ರಾಜ್ಯದಲ್ಲಿ ಚುನಾವಣೆ ಗೆಲುವಿಗೆ ಜಮೀರ್ ಅಹ್ಮದ್ ಖಾನ್ ಶ್ರಮ ಸಾಕಷ್ಟಿದೆ. ಅಂತವರಿಗೆ ಮಲ್ಲಿಕಾರ್ಜುನ್ ಏಕವಚನದಲ್ಲಿ ಮಾತನಾಡಿದ್ದಾರೆ ಹೀಗಾಗಿ ಕ್ಷಮೆ ಯಾಚಿಸಬೇಕು. ಜಮೀರ್ ಅವರಿಗೆ ಏನಾದರೂ ಮಾತನಾಡಿದರೆ ಜನ ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಎಸ್ ಕೆ ಅಜ್ಮಿರ್ ಬೆಳ್ಳಿಕಟ್, ನ್ಯಾಮತ್ ಖಾದ್ರಿ, ಅಬ್ದುಲ್ ಖದಿರ್, ಮುನ್ನ, ಗಂಗಾಧರ ಸೇರಿದಂತೆ ಇತರರಿದ್ದರು.

# ಹೆಲ್ಮೆಟ್ ಬಳಕೆ ಕಡ್ಡಾಯ: ಸವಿತಾ

ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ



ಜೀವ ಮತ್ತು ಜೀವನ ಅಮೂಲ್ಯವಾದುದು. ಮನುಷ್ಯನಿಗೆ ಇರುವ ಬೆಲೆಯನ್ನು ನಾವು ಮೊಬೈಲಗಳಿಗೆ ನೀಡುತ್ತಿದ್ದೇವೆ. ಮೊಬೈಲಗಳಿಗೆ ಹೇಗೆ ಕವರ್ ಹಾಕುತ್ತೇವೂ ಹಾಗೆ ಪ್ರತಿಯೊಬ್ಬರು ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸಬೇಕೆಂದು ಪಿಎ ಸವಿತಾ ಹೇಳಿದರು. ತಾಲೂಕಿನ ಪೋಲಕಪಳ್ಳಿ ಗ್ರಾಮದ ನಮ್ಮೂರ ಹಿರಿಯ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವ ಹಾಗೂ 7ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳುಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಅಪಘಾತಗಳ ಮೇಲಿನ ದ್ವಿಚಕ್ರ ವಾಹನಗಳ ಅಪಘಾತವೇ ಹೆಚ್ಚು. ಅದರಲ್ಲಿ ಹೆಲ್ಮೆಟ್ ಧರಿಸದೆ ಸಾವನಪ್ಪಿರುವರ ಸಂಖ್ಯೆ ಹೆಚ್ಚಾಗುತ್ತಿವೆ. ಅಪಘಾತ ಸಂಭವಿಸಿದ ವೇಳೆ ತಲೆಗೆ ಪೆಟ್ಟಾಗಿ ಸಾವನ್ನಪ್ಪಿರುವವರು ಹೆಚ್ಚಾಗಿದ್ದಾರೆ. ಆದ್ದರಿಂದ ನಿಮ್ಮ ಮನೆಯವರು ಹಾಗೂ ನಿಮ್ಮನ್ನು ನಂಬಿದವರಿಗಾಗಿ ಹೆಲ್ಮೆಟ್ ಅನ್ನು ಕಡ್ಡಾಯವಾಗಿ ಧರಿಸಬೇಕು. 18 ವರ್ಷದ ಒಳಗಿನ ಮಕ್ಕಳು ವಾಹನ ಚಲಾಯಿಸುವುದು ಕೂಡ ಅಪರಾಧ. ಕಡ್ಡಾಯವಾಗಿ ಸಂಚಾರ ನಿಯಮ ಪಾಲನೆ ಮಾಡಬೇಕು ಎಂದರು. ಹೆಣ್ಣು ಮಕ್ಕಳು ಬಂಗಾರದ ಒಡವೆಗಳು ಹಾಕಿಕೊಂಡು ಹೊರಗಡೆ ಹೋಗಬೇಡಿ, ಅವಶ್ಯಕತೆ ಇದ್ದಾಗ ಮಾತ್ರ ಹಾಕಿಕೊಳ್ಳಿ ಎಂದು ಸಲಹೆ ನೀಡಿದರು. ಎಲ್ಲಾದರೂ ಅಪಘಾತ ಸಂಭವಿಸಿದಲ್ಲಿ ಕೂಡಲೇ 108 ಅಥವಾ 112 ಸಂಖ್ಯೆಗೆ ಕರೆ ಮಾಡಿ ಒಂದು ಜೀವ ಉಳಿಸುವ ಕೆಲಸ ಪ್ರತಿಯೊಬ್ಬರು ಮಾಡಬೇಕು ಎಂದು ಹೇಳಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸದಸ್ಯ ಮಹೇಶ ಮೋಜೆಸ್ ಮಾತನಾಡಿ, ಪೋಷಕರು ಖಾಸಗಿ ಶಾಲೆಗಳ ವ್ಯಾಮೋಹ ಬಿಟ್ಟು ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಿ ಎಂದು ಹೇಳಿದರು. ಖಾಸಗಿ ಶಾಲೆಗಳಲ್ಲಿ ಓದಿದರೆ ಮಾತ್ರ ಮಕ್ಕಳು ಉನ್ನತ ಸ್ಥಾನಗಳು ಪಡೆದುಕೊಳ್ಳುತ್ತಾರೆ ಎಂಬ ಭ್ರಮೆಯನ್ನು ಬಿಡಬೇಕು. ಸರ್ಕಾರಿ ಶಾಲೆಗಳಲ್ಲಿ ಓದಿದ ವಿದ್ಯಾರ್ಥಿಗಳು ಇಂದು ಉನ್ನತ ಸ್ಥಾನಮಾನಗಳನ್ನು ಅಲಂಕರಿಸಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಹಲವಾರು ಸೌಲಭ್ಯಗಳು ದೊರೆಯುತ್ತಿವೆ. ವಿದ್ಯಾರ್ಥಿಗಳು ಅವುಗಳನ್ನು ಸದುಪಯೋಗ ಪಡಿಸಿಕೊಂಡು ಚೆನ್ನಾಗಿ ಕಲಿತು ಅತ್ಯುನ್ನತ ಸ್ಥಾನಗಳನ್ನು ಪಡೆದು ದೇಶಕ್ಕೆ ಕೊಡುಗೆಯನ್ನು ನೀಡಬೇಕು ಎಂದರು. ನೌಕರರ ಸಂಘದ ತಾಲುಕಾಧ್ಯಕ್ಷ ರಾಜಶೇಖರ ಉಪ್ಪಿನ, ಬೀದರ್ ಘಟಕದ ಸಾವಿತ್ರಿಬಾಯಿ ಫುಲೇ ಸಂಘದ ಅಧ್ಯಕ್ಷೆ ನರ್ಸಮ್ಮ ಪಾಟೀಲ್ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಪೋಲಕಪಳ್ಳಿ ಗ್ರಾಮದ ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವ ಹಾಗೂ 7ನೇ ತರಗತಿಯ ವಿದ್ಯಾರ್ಥಿಗಳ ಬೀಳುಕೊಡುಗೆ ಸಮಾರಂಭವನ್ನು ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ರವರ ಸಹೋದರ ಸಂತೋಷ ಬೆಲ್ದಾಳೆ ಉದ್ಘಾಟಿಸಿದರು. ಎಸ್ಡಿಎಂಸಿ ಅಧ್ಯಕ್ಷ ಮಧುಸೂಧನರೆಡ್ಡಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ಈ ಸಂದರ್ಭದಲ್ಲಿ ಎಸ್ಡಿಎಂಸಿ ಉಪಾಧ್ಯಕ್ಷೆ ಹಾಲಮ್ಮ ರಾಜಕುಮಾರ್, ಚಾಂಗಲೇರಾ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷ ವೀರಪ್ಪ ಪೂಜಾರಿ, ಲಾಲಪ್ಪ ಕೋರಿ, ಅಶೋಕರೆಡ್ಡಿ, ವಿಜಯಕುಮಾರ್ ಪಾಟೀಲ್, ಭಾಗರೆಡ್ಡಿ, ಬಲವಂತರೆಡ್ಡಿ, ಶಾಂತಕುಮಾರ್ ಪಾಟೀಲ್, ಗೋಪಾಲರೆಡ್ಡಿ, ಸಂತೋಷಮ್ಮ, ಶ್ರೀನಿವಾಸ ರೆಡ್ಡಿ, ಎಸ್ಡಿಎಂಸಿ ಸದಸ್ಯರಾದ ವೀರಪ್ಪ, ವಿಶ್ವನಾಥ, ರಾಜಪ್ಪ ಮೇತ್ರೆ, ಸಂಜುಕುಮಾರ, ಮಲ್ಲಪ್ಪ, ಜಗನ್ನಾಥ, ಸಂಜೀವರೆಡ್ಡಿ, ರಾಚಮ್ಮ ಮಲ್ಲಯ್ಯಸ್ವಾಮಿ, ಗುಂಡಮ್ಮ ಶಿವರಾಜ, ಪ್ರೇಮಾ ಭೀಮಶಾ, ಝುರಣಮ್ಮ ಪುಂಡಲೀಕ, ಅಂಬಿಕಾ ಈರಪ್ಪ, ಜೈಶ್ರೀ ಸಿದ್ದಪ್ಪ, ಸವಿತಾ ಉಮೇಶ, ರೇಣುಕಾ ವೀರಪ್ಪ, ಸಿಬ್ಬಂದಿಗಳಾದ ಶಿವಕುಮಾರ್ ಹುಗಾರ್, ಸುಜಾತಾರಾಣಿ ಸೇರಿದಂತೆ ಪೋಷಕರು ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಶಾಲೆ ಮುಖ್ಯ ಶಿಕ್ಷಕ ಜಗದೀಶ ಕುಂಚೆ ನಿರೂಪಿಸಿದರು. ನಾಗಪ್ಪ ಮಕಾಜಿ ವಂದಿಸಿದರು.

# ಅಖಿಲ ಭಾರತ ಕನ್ನಡ ಸಾಹಿತ್ಯ 88ನೇ ಸಮ್ಮೇಳನಕ್ಕೆ ಚಾಲನೆ ನೀಡಿ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಗಣಿ ನಾಡು ಬಳ್ಳಾರಿಯಲ್ಲಿ ಜರುಗಲಿರುವ 88ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಶೀಘ್ರವೇ ಚಾಲನೆ ನೀಡಬೇಕು, ಜಿಲ್ಲಾ ಹಾಗೂ ತಾಲೂಕು ಸಾಹಿತ್ಯ ಸಮ್ಮೇಳನಗಳಿಗೆ ಅನುದಾನ, ದತ್ತಿ ಕಾರ್ಯಕ್ರಮಗಳ ಹಾಗೂ ವಾರ್ಷಿಕ ನಿರ್ವಹಣಾ ವೆಚ್ಚ ಜೊತೆಗೆ ಪರಿಷತ್ತಿನಿಂದ ಜಿಲ್ಲಾ ಘಟಕಗಳಿಗೆ ಬರಬೇಕಾದ ಬಾಕಿ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಬಳ್ಳಾರಿ ಹಾಗೂ ವಿಜಯನಗರ ಕಸಾಪ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿ ಕೆ. ದಯಾನಂದ ಅವರಿಗೆ ಮನವಿ ಸಲ್ಲಿಸಿದರು.ಬೆಂಗಳೂರಿನ ಕಸಾಪ ಕೇಂದ್ರ ಕಚೇರಿಯಲ್ಲಿ ಕಸಾಪ ಚುನಾಯಿತ ಜಿಲ್ಲಾಧ್ಯಕ್ಷರು, ಗಡಿನಾಡ ಅಧ್ಯಕ್ಷರ ಒಕ್ಕೂಟದ ಪರವಾಗಿ ಮನವಿ ಸಲ್ಲಿಸಿದರು. ಪ್ರಮುಖವಾಗಿ ಗಣಿ ನಾಡು ಬಳ್ಳಾರಿಯಲ್ಲಿ ಜರುಗಲಿರುವ 88ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಶೀಘ್ರವೇ ಚಾಲನೆ ನೀಡಬೇಕು, ಜಿಲ್ಲಾ ಹಾಗೂ ತಾಲೂಕು ಸಾಹಿತ್ಯ ಸಮ್ಮೇಳನಗಳಿಗೆ ಅನುದಾನ, ದತ್ತಿ ಕಾರ್ಯಕ್ರಮಗಳ ಹಾಗೂ ವಾರ್ಷಿಕ ನಿರ್ವಹಣಾ ವೆಚ್ಚ ಜೊತೆಗೆ ಪರಿಷತ್ತಿನಿಂದ ಜಿಲ್ಲಾ ಘಟಕಗಳಿಗೆ ಬರಬೇಕಾದ ಬಾಕಿ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ನಿಯೋಗದ ಸದಸ್ಯರು ಮನವಿ ಮಾಡಿದರು. ಈ ಸಂದರ್ಭದಲ್ಲಿ ಅಖಂಡ ಬಳ್ಳಾರಿ ಜಿಲ್ಲಾ ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಡಾ.ಕೆ.ಶಿವಲಿಂಗಪ್ಪ ಹಂದಿಹಾಳು, ಬಳ್ಳಾರಿ ಜಿಲ್ಲಾಧ್ಯಕ್ಷ ನಿಷ್ಠ ರುದ್ರಪ್ಪ ಸೇರಿದಂತೆ ಉಭಯ ಜಿಲ್ಲೆಗಳ ಕಸಾಪ ಪದಾಧಿಕಾರಿಗಳು, ಪ್ರಮುಖರು, ವಿವಿಧ ಗಣ್ಯರು ಇತರರು ಉಪಸ್ಥಿತರಿದ್ದರು.

# 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಮಾಧ್ಯಮ ಬಳಕೆಯ ನಿರ್ಬಂಧಕೆ ಸ್ವಾಗತ

ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣದ ನಗರದ ಮದೀನಾ ಪಬ್ಲಿಕ್ ಶಾಲೆಯ ಅಧ್ಯಕ್ಷರಾದ ಎಮ್. ಡಿ. ಜುಲ್ಫಿಕಾರ್ ಅಹ್ಮದ್ ಚಾಬುಕ ಸವಾರ ಮಾತನಾಡಿ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಮಾಧ್ಯಮ ಬಳಕೆಯನ್ನು ನಿರ್ಬಂಧಿಸುವ ಕುರಿತು. ಕರ್ನಾಟಕ ಸರ್ಕಾರ ತೆಗೆದುಕೊಂಡಿರುವ ನಿರ್ಧಾರವನ್ನು ಸ್ವಾಗತಿಸಿದ್ದಾರೆ. ಇಂದಿನ



ಕಾಲದಲ್ಲಿ ಸಾಮಾಜಿಕ ಮಾಧ್ಯಮದ ಅತಿಯಾದ ಮತ್ತು ಅಜಾಗರೂಕ ಬಳಕೆ ಮಕ್ಕಳ ಶಿಕ್ಷಣ, ನೈತಿಕತೆ ಮತ್ತು ಮಾನಸಿಕ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಈ ನಿರ್ಧಾರ ಸಮಯೋಚಿತ ಮತ್ತು ದೂರದರ್ಶಿ ಕ್ರಮವಾಗಿದೆ. ಅವರು ಕರ್ನಾಟಕ ಸರ್ಕಾರಕ್ಕೆ ಈ ಮಹತ್ವದ ಹಾಗೂ ಸಕಾರಾತ್ಮಕ ನಿರ್ಧಾರದಿಗಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ಈ ನಿರ್ಧಾರದ ಉದ್ದೇಶ ಮಕ್ಕಳನ್ನು ಅನಗತ್ಯ ಚಟುವಟಿಕೆಗಳು ಮತ್ತು ಹಾನಿಕಾರಕ ಪರಿಣಾಮಗಳಿಂದ ದೂರವಿಟ್ಟು, ಅವರನ್ನು ಶಿಕ್ಷಣ, ಸಕಾರಾತ್ಮಕ ಚಟುವಟಿಕೆಗಳು ಮತ್ತು ಆರೋಗ್ಯಕರ ಪರಿಸರದತ್ತ ಪ್ರೇರೇಪಿಸುವುದಾಗಿದೆ. ಪೋಷಕರು, ಶಿಕ್ಷಕರು ಮತ್ತು ಸಮಾಜದ ಎಲ್ಲ ವರ್ಗದವರೂ ಸರ್ಕಾರದ ಈ ನಿರ್ಧಾರವನ್ನು ಬೆಂಬಲಿಸಿ ಅದರ ಅನುಷ್ಠಾನಕ್ಕೆ ಸಹಕರಿಸಬೇಕೆಂದು ಅವರು ಮನವಿ ಮಾಡಿದರು. ಮಕ್ಕಳ ಉತ್ತಮ ಸಂಸ್ಕಾರ ಮತ್ತು ಸುರಕ್ಷಿತ ಭವಿಷ್ಯಕ್ಕಾಗಿ ಅವರನ್ನು ಸಾಮಾಜಿಕ ಮಾಧ್ಯಮದ ಕೆಟ್ಟ ಪರಿಣಾಮಗಳಿಂದ ಕಾಪಾಡಿ ಸರಿಯಾದ ಮಾರ್ಗದರ್ಶನ ನೀಡುವುದು ಅತ್ಯಗತ್ಯವಾಗಿದೆ. ಈ ಕ್ರಮದಿಂದ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ಉಂಟಾಗಿ, ಹೊಸ ತಲೆಮಾರು ಆರೋಗ್ಯಕರ, ಸಂಸ್ಕಾರಯುತ ಮತ್ತು ಜವಾಬ್ದಾರಿಯುತ ನಾಗರಿಕರಾಗಿ ಬೆಳೆಯಲಿದ್ದಾರೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

# ಮನ್ನಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ




ಮಲ್ಲಮ್ಮ ನುಡಿ ವಾರ್ತೆ ಬೀದರ್

ಬೀದರ್ ವಿಶ್ವವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಹಾಗೂ ನ್ಯಾಕ್ 'ಬಿ' ಗ್ರೇಡ್ ಮಾನ್ಯತೆ ಪಡೆದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮನ್ನಳ್ಳಿ ವತಿಯಿಂದ 2025–26ನೇ ಶೈಕ್ಷಣಿಕ ಸಾಲಿನ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ವಾರ್ಷಿಕ ವಿಶೇಷ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

"ನನ್ನ ಭಾರತಕ್ಕಾಗಿ ಯುವಕರು" ಮತ್ತು "ಡಿಜಿಟಲ್ ಸಾಕ್ಷರತೆಗಾಗಿ ಯುವಕರು" ಎಂಬ ಧ್ಯೇಯ ವಾಕ್ಯದೊಂದಿಗೆ ಮಾರ್ಚ್ 6ರಿಂದ 12ರವರೆಗೆ ಈ ವಿಶೇಷ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದ ಉದ್ಘಾಟನೆಯನ್ನು ಬೀದರ್ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊಫೆಸರ್ ಪರಮೇಶ್ವರ್ ನಾಯಕ ನೆರವೇರಿಸಿದರು ಈ ಶಿಬಿರದಲ್ಲಿ ಸುಮಾರು 60 ವಿದ್ಯಾರ್ಥಿಗಳು ಭಾಗವಹಿಸಿದ್ದು, ಪ್ರತಿದಿನವೂ ವಿವಿಧ ವಿಷಯಗಳ ಕುರಿತು ಉಪನ್ಯಾಸ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಸದೃಢ ಭಾರತಕ್ಕಾಗಿ ಜನರ ಪಾತ್ರ, ನನ್ನ ಭಾರತಕ್ಕಾಗಿ ಯುವಕರು, ಯುವಜನರಲ್ಲಿ ಆರೋಗ್ಯ ಅರಿವು, ಸದೃಢ ಭಾರತಕ್ಕಾಗಿ ಮಹಿಳೆಯರ ಪಾತ್ರ ಹಾಗೂ ಸಾಂಸ್ಕೃತಿಕ ಪರಂಪರೆ ಮತ್ತು ರಾಷ್ಟ್ರೀಯತೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಕಾರ್ಯಕ್ರಮಗಳು ನಡೆದವು.

ಸಾಂಸ್ಕೃತಿಕ ಪರಂಪರೆ ಮತ್ತು ರಾಷ್ಟ್ರೀಯತೆ ಕುರಿತ ಕಾರ್ಯಕ್ರಮದಲ್ಲಿ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ನಿವೃತ್ತ ಸೈನಿಕರು ಹಾಗೂ ಹಿರಿಯ ಪತ್ರಕರ್ತರಾದ ಅಶೋಕ್ ಕುಮಾರ್ ಕರಂಜಿ ಭಾಗವಹಿಸಿ ಮಾತನಾಡಿದರು. ಸಂಸ್ಕೃತಿ ಎಂದರೆ ನಮ್ಮ ಜೀವನ ಶೈಲಿ, ಆಚರಣೆಗಳು, ಭಾಷೆ, ಕಲೆ, ಸಂಗೀತ, ನೃತ್ಯ, ಉತ್ಸವಗಳು ಮತ್ತು ಹಿರಿಯರಿಂದ ಬಂದ ಮೌಲ್ಯಗಳ ಸಮಗ್ರ ರೂಪವಾಗಿದೆ. ಪೀಳಿಗೆಯಿಂದ ಪೀಳಿಗೆಗೆ ಸಾಗಿಬರುವ ಈ ಮೌಲ್ಯಗಳು ಮತ್ತು ಸಂಪ್ರದಾಯಗಳೇ ನಮ್ಮ ಸಾಂಸ್ಕೃತಿಕ ಪರಂಪರೆಯಾಗಿದೆ ಎಂದು ಅವರು ತಿಳಿಸಿದರು.

ಭಾರತವು ಸಾವಿರಾರು ವರ್ಷಗಳ ಇತಿಹಾಸ ಹೊಂದಿದ ಮಹಾನ್ ನಾಗರಿಕತೆ ಆಗಿದ್ದು, ಇಲ್ಲಿ ವಿವಿಧ ಧರ್ಮಗಳು, ಭಾಷೆಗಳು ಮತ್ತು ಸಂಪ್ರದಾಯಗಳು ಒಂದೇ ದೇಶದಲ್ಲಿ ಒಟ್ಟಾಗಿ ಬೆಳೆಯುತ್ತಿರುವುದು ವೈವಿಧ್ಯತೆಯಲ್ಲಿನ ಏಕತೆಯ ಪ್ರತೀಕವಾಗಿದೆ ಎಂದು ಹೇಳಿದರು.

ರಾಷ್ಟ್ರೀಯತೆ ಎಂದರೆ ದೇಶದ ಬಗ್ಗೆ ಇರುವ ಪ್ರೀತಿ, ಗೌರವ ಮತ್ತು ಹೊಣೆಗಾರಿಕೆಯಾಗಿದೆ. ದೇಶದ ಸಂಸ್ಕೃತಿ, ಪರಂಪರೆ, ಇತಿಹಾಸ ಮತ್ತು ಮೌಲ್ಯಗಳನ್ನು ಗೌರವಿಸಿ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಮಹಾನ್ ನಾಯಕರು ತ್ಯಾಗ ಮಾಡಿದ್ದಾರೆ; ಅವರ ಫಲವಾಗಿ ನಾವು ಇಂದು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ. ರಾಷ್ಟ್ರೀಯತೆ ಎಂದರೆ ಕೇವಲ ಧ್ವಜಕ್ಕೆ ಗೌರವ ಕೊಡುವುದು ಅಥವಾ ರಾಷ್ಟ್ರಗೀತೆ ಹಾಡುವುದಷ್ಟೇ ಅಲ್ಲ, ದೇಶದ ಅಭಿವೃದ್ಧಿಗೆ ಕೈಜೋಡಿಸುವುದೂ ಆಗಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ವಾಣಿಜ್ಯ ವಿಭಾಗದ ಡಾ. ಜೈಶೀಲ ಅವರು ಮಾತನಾಡಿ, ಸಾಂಸ್ಕೃತಿಕ ಪರಂಪರೆ ಮತ್ತು ರಾಷ್ಟ್ರೀಯತೆ ಕುರಿತಾಗಿ ವಿದ್ಯಾರ್ಥಿಗಳಿಗೆ ಉಪದೇಶ ನೀಡಿದರು. ಆಧುನಿಕ ಯುಗದಲ್ಲಿ ಯುವಕರು ತಪ್ಪು ದಾರಿಯಲ್ಲಿ ಸಾಗದಂತೆ ಜಾಗರೂಕರಾಗಬೇಕು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ಬಿಸಿಎ ವಿಭಾಗದ ಡಾ.ಸುರೇಂದ್ರ ಸಿಂಗ್, ಡಾ.ಹಾಲಪ್ಪಗೋಳ ಪ್ರಥವಿರಾಜ್ ಸೇರಿದಂತೆ ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**IN THE COURT OF THE SENIOR CIVIL JUDGE & JMFC AT BASAVAKALYAN**

**Crl. Misc. No.13/2026**

**Petitioner:**
**P1.Mohammed Vaseem so Khaseem sab,**
**P2.Rahim Bi Do. Khasim sab, both are R/o. Rajola, Tq: Basavakalayn, Dist; Bidar,**
**P3.Rizwana begum wo.Mohd Dastagir Qureshi r/o belkuni Tq. Aurad (b), Dist. Bidar,**
**P4.Rihana begum qureshi r/o Gunjoti, tq.omerga,**
**P5.Syeda bi r/o Rajola**
**P6.Hussain sab r/o Rajola,**
**P7.Samina bi r/o Warwatti (b),**
**P8. Afrin begum r/o shivapur galli humnabad**

**V/S**

**Respondent: The Tahasildar, Basavakalyan.**

Claim: Issue of Death Certificate of the father of Petitioner No.1. Petition under sec. 13(3) of Birth and Death Registration Act. 1969

**PAPER PUBLICATION**

This is to inform to the public at large, the father of the petitioner No.1 by name "Khasim sab so Husen sab ",who was died on 02/09/2014, in his house at village: Rajola, Tq: Basavakalayn, Dist; Bidar leaving behind the petitioner No.1, as his son The said P1.Md. Vaseem and anothers r/o. Rajola, Tq: Basavakalayn, Dist; Bidar has filed the above case before the Hon'ble Senior Civil Judge Court at Basavakalyan, for issuing direction to the respondent for issue of death certificate. if anybody got objection for the same, they are hereby requested to come and appear before the Hon'ble court on or before 07.05.2026. at 11-00 AM.

Date-25.02.2026

**By Order of the Court**
**Chief Ministerial Officer Court senior judge & jmfc court basavakalyan**

# ಜೀನಕೇರಾ ಶೀಥಲ್‌ಗೊಂಡ ಕೆರೆ 35.00 ಲಕ್ಷ ಮಂಜೂರ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಯಾದಗಿರಿ ತಾಲ್ಲೂಕಿನ ಜೀನಕೇರಿ ಗ್ರಾಮದ ಕೆರೆಯ 2 ಕೋಡಿ, 2 ತೂಬು ಸಂಪೂರ್ಣ ಶಿಥಿಲಗೊಂಡಿದ್ದು, ಅಪಾಯದ ಸ್ಥಿತಿಯಲ್ಲಿ ರೈತರಿಗೆ ಆತಂಕ ತಂದೊಡ್ಡಿದೆ ಎಂದು ಆರೋಪಿಸಿ ಪ್ರತಿಭಟನೆ ಮಾಡಿದ ಹಿನ್ನಲ್ಲೆಲ್ಲಿ ಜಿಲ್ಲಾಡಳಿತ ಕೆರೆ ದುರಸ್ಥಿಗಾಗಿ 35 ಲಕ್ಷ ಮಂಜೂರು ಮಾಡಿದ ಕಾಮಗಾರಿ ಆರಂಭ ಸ್ಥಳಕ್ಕೆ ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳರವರ ನೇತೃತ್ವ ರೈತರ ಹೋರಾಟಕ್ಕೆ ಸಿಕ್ಕಂತ ಜಯ ಎಂದು ಹೇಳಿದರು. ಈ ತುಂಬೂ ಮತ್ತು ಕೆರೆ ದುರಸ್ಥೆ ಕಾಮಗಾರಿ ಭರದಿಂದ ಸಾಗಿದ್ದು

ಕಾಮಗಾರಿ ಸ್ಥಳಕ್ಕೆ ರೈತರೊಂದಿಗೆ ಬೇಟಿ ನೀಡಿ ಮಾತನಾಡಿದ ಅವರು ಈ ಹಿಂದೆ ನಮ್ಮ ವಿನೂತನ ಹೋರಾಟಕ್ಕೆ ಸ್ಪಂಧಿಸಿದ ಸರ್ಕಾರಕ್ಕೆ ಹರ್ಷ ವ್ಯಕ್ತಪಡಿಸಿದರು.

ನಿಮ್ಮ ಗ್ರಾಮಗಳಲ್ಲಿ ಎನೆ ಸಮಸ್ಯೆ ಕಂಡು ಬಂದಾಗ ನೀವು ಎಲ್ಲೂರು ಒಗ್ಗಟಾಗಿ ಗ್ರಾಮದ ಅಭಿವೃದ್ಧಿಗಾಗಿ ಸಮಸ್ಯೆ ಪರಿಹಾರಕ್ಕಾಗಿ ಹೋರಾಟ ಮಾಡಲು ಮುಂದಾಗಬೇಕೆ. ಅಂದಗಾ ಮಾತ್ರ ನಿಮ್ಮ ಸಮಸ್ಯೆಗಳಿಗೆ ಹಿತಿಶ್ರೀ ಹಾಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಇದಕ್ಕು ಮುಂಚೆ ಕೆರೆಯ ಕೋಡಿ ತುಂಬು ಸ್ಥಳದಲ್ಲಿ ಸಾಮಾಜಿಕ ಹೋರಾಟಗಾರ ಉಮೇಶ ಮುದ್ನಾಳ

ಭಾಜಿ ಭಜಂತ್ರಿ ಮಖಾಂತರು ಕರೆತಂದು ನಿಮ್ಮ ಹೋರಾಟಕ್ಕೆ ಸಿಕ್ಕ ಜಯೆಂದು ರೈತರು ಸಂತಸ ವ್ಯಕ್ತಪಡಿಸಿದರು.

ಇದೇ ಸಂಧರ್ಬದಲ್ಲಿ ಡೆವಿಡ್ ಸ್ಯಾಮಿನ್, ರಫೀಕ್ ಪಟೇಲ್, ಬಾಬಾಕಾನ್, ಪವನ, ಹಣಮಂತ ತಾಯಪ್ಪ ಯಮನಪ್ಪ ಭೀಮಪ್ಪ ದೇವಪ್ಪ ಗೌಸ್, ಸಾಬಣ್ಣ, ಮಲ್ಲಪ್ಪ, ರಾಜಪ್ಪ, ಹಣಮಂತ, ನಾಗಪ್ಪ, ಮಹೇಶ, ಲಕ್ಷ್ಮಣ ಮರಿಯಪ್ಪ, ಭೀಮಪ್ಪ. ಬಸಪ್ಪ ಸಾಯಿಕುಮಾರ, ಮಲ್ಲೇಶಿ, ಮೈಲಾರಿ ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು

# ಭವಿಷ್ಯದ ಭರವಸೆಯ ನಾಯಕರಾಗಿ: ಅಶೋಕ



• **ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ**

ಶಿಬಿರಾರ್ಥಿಗಳು ವಾರ್ಷಿಕ ವಿಶೇಷ ಶಿಬಿರದ ಸದುಪಯೋಗ ಪಡಿಸಿಕೊಂಡು ಉತ್ತಮ ನಾಯಕರಾಗಿ ದೇಶ ಸೇವೆಗೆ ಮುಂದಾಗಬೇಕು ಎಂದು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಅಶೋಕ ಪಿ ತಳಕೇರಿ ಹೇಳಿದರು.

ಪಟ್ಟಣದ ಶ್ರೀಮತಿ ಗಂಗೂಬಾಯಿ ಶಾಂತಗೌಡ ಪೋಲೀಸ್ ಪಾಟೀಲ್ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ 2025–26 ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಇಂತಹ ವಿಶೇಷ ಶಿಬಿರಗಳು ಸಹಕಾರಿಯಾಗಿವೆ ಎಂದವರು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಭವಿಷ್ಯದ ಭರವಸೆಯ ನಾಯಕರಾಗಿ ಗಾಂಧೀಜಿ ಕಂಡ ರಾಮರಾಜ್ಯದ ಕನಸು ನನಸಾಗಿಸಲು ಸನ್ನದ್ಧರಾಗಿ ಎಂದು ಕರೆ ನೀಡಿದರು.

ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದ ಹಿರೇಮಠದ ಪೀಠಾಧಿಪತಿ ಷಬ್ರಶ್ರೀ ಚನ್ನಬಸವ ಶಿವಾಚಾರ್ಯರು ವಿದ್ಯಾರ್ಥಿ ಜೀವನ ಅತ್ಯಮೂಲ್ಯವಾದದ್ದು, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಮೂಲಕ ಸೇವಾ ಮನೋಭಾವದಿಂದ ಮುನ್ನುಗ್ಗಿದಾಗ ಮಾದರಿ ಬದುಕು ತಮ್ಮದಾಗುತ್ತದೆ ಎಂದು ಆಶಿಸಿದರು.

ಸಾಹಿತಿ ನಿಂಗನಗೌಡ ದೇಸಾಯಿ, ಆಂಗ್ಲ ಭಾಷೆಯ ಉಪನ್ಯಾಸಕ ವೀರೇಂದ್ರ ಧರಿ, ಎನ್ ಎಸ್ ಎಸ್ ಅಧಿಕಾರಿ ಡಾ ಸಿದ್ದಲಿಂಗ ರಾಠೋಡ್ ಮಾತನಾಡಿದರು. ಪ್ರಾಂಶುಪಾಲ ಡಾ ನಾಗಪ್ಪ ಚಾವಲ್ಕರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಶಿಕುಮಾರ ಎತ್ತಿನಮನಿ ಸ್ವಾಗತಿಸಿದರು, ಡಾ ಯಂಕನಗೌಡ ಪಾಟೀಲ ನಿರೂಪಿಸಿದರು, ಮಲ್ಲಣ್ಣ ಬಿಳೆಬಾವಿ ವಂದಿಸಿದರು. ಕಾರ್ಯಕ್ರಮದಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

# ಉಚಿತ ಕುಡಿಯುವ ನೀರಿನ ಅರವಟ್ಟಿಗೆ ವ್ಯವಸ್ಥೆ

• **ಮಲ್ಲಮ್ಮ ನುಡಿ ವಾರ್ತೆ, ಹುಣಸಗಿ:**



ತಾಲೂಕಿನ ಕೊಡೇಕಲ ಗ್ರಾಮದ ಸಮಾಜಸೇವಕ ಹಾಗೂ ಬಸವಜ್ಯೋತಿ ಕೈಗಾರಿಕೆತರಬೇತಿ ಕೇಂದ್ರ ಮತ್ತು ಬಸವಪ್ರಭು ಪದವಿ ಮಹಾವಿದ್ಯಾಲಯದ ಅಧ್ಯಕ್ಷರಾದ ಸಂಗನಗೌಡ ಬಿರಾದಾರ ಅವರು ಶಿಕ್ಷಣ ಕ್ಷೇತ್ರದ ಜೊತೆಗೆ ಸಾಮಾಜಿಕ ಸೇವೆಯಲ್ಲಿಯೂ ತೊಡಗಿಸಿಕೊಂಡು ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಬೇಸಿಗೆಯ ತೀವ್ರಬಿಸಿಲಿನ ಸಂದರ್ಭದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವುದು ಅತ್ಯಂತ ಮಹತ್ವದ ಸೇವೆಯಾಗಿದ್ದು, ಈ ಹಿನ್ನೆಲೆಯಲ್ಲಿ ಅವರು ಪ್ರತಿ ವರ್ಷವೂ ಸಾರ್ವಜನಿಕರಿಗಾಗಿ ಉಚಿತ ಕುಡಿಯುವ ನೀರಿನ ಅರವಟ್ಟಿಗೆ ವ್ಯವಸ್ಥೆ ಮಾಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ನಿವೃತ್ತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷರಾದ ಚಂದ್ರಶೇಖರ ವಕ್ರಾಣಿ ಹೇಳಿದರು. ಈ ಕುರಿತು ನಮ್ಮ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಸಂಗನಗೌಡ ಬಿರಾದಾರ ಅವರು ಯಾವುದೇ ಸಾಮಾಜಿಕ ಕಾರ್ಯದಲ್ಲಿಯೂ ಸದಾ ಮುಂದಿರುವ ವ್ಯಕ್ತಿಯಾಗಿದ್ದು, ಅವರಂತಹ ಸೇವಾಮನೋಭಾವದ ಕಾರ್ಯಗಳಿಗೆ ನಾವು ಪ್ರೋತ್ಸಾಹ ನೀಡುವುದು ನಮ್ಮ ಜವಾಬ್ದಾರಿ ಎಂದು ಹೇಳಿದರು. ಕೊಡೇಕಲ ಗ್ರಾಮದ ಬಸವಪ್ರಭು ಪದವಿ ಮಹಾವಿದ್ಯಾಲಯದ ಮುಂಭಾಗದಲ್ಲಿ ವ್ಯವಸ್ಥೆ ಮಾಡಿರುವ ಈ ನೀರಿನ ಅರವಟ್ಟಿಯಿಂದ ರೈತರು, ಪ್ರಯಾಣಿಕರು ಹಾಗೂ ಸಾರ್ವಜನಿಕರು ಪ್ರತಿದಿನವೂ ಉಚಿತವಾಗಿ ಕುಡಿಯುವ ನೀರನ್ನು ಪಡೆದುಕೊಳ್ಳುತ್ತಿದ್ದಾರೆ. ವಿಶೇಷವಾಗಿ ಹೊಲಗಳಿಗೆ ತೆರಳುವ ರೈತರು ಹಾಗೂ ಹೋಟೆಲ್‌ಗಳಿಗೆ ಅಗತ್ಯವಿರುವವರು ಈ ವ್ಯವಸ್ಥೆಯಿಂದ ಹೆಚ್ಚಿನ ಅನುಕೂಲ ಪಡೆಯುತ್ತಿದ್ದಾರೆ. ಬೇಸಿಗೆಯಲ್ಲಿ ಜನರ ದಾಹ ನೀಗಿಸುವ ಉದ್ದೇಶದಿಂದ ಈ ಸೇವೆಯನ್ನು ನಿರಂತರವಾಗಿ ಮಾಡುತ್ತಿರುವ ಸಂಗನಗೌಡ ಬಿರಾದಾರ ಅವರ ಸಮಾಜಮುಖಿ ಕಾರ್ಯಕ್ಕೆ ಗ್ರಾಮಸ್ಥರು ಹಾಗೂ ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಗುತ್ತಿದೆ. ಮುಂದಿನ ದಿನಗಳಲ್ಲಿಯೂ ಇಂತಹ ಸಾಮಾಜಿಕ ಸೇವೆಗಳು ಮುಂದುವರಿಯಲಿ ಎಂಬ ಆಶಯವನ್ನು ಗ್ರಾಮಸ್ಥರು ವ್ಯಕ್ತಪಡಿಸಿದ್ದಾರೆ.

# ವಿದ್ಯಾರ್ಥಿಗಳಿಗೆ ಮಾದರಿ ಸ್ಫೂರ್ತಿದಾಯಕರಾದ ನಾಲ್ವರು ಅಭ್ಯರ್ಥಿ: ದರ್ಶನಾಪುರ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**




ಕೇಂದ್ರ ಲೋಕಸೇವಾ ಆಯೋಗದ ನಾಗರಿಕ ಸೇವಾ ಪರೀಕ್ಷೆಯಲ್ಲಿ ನಾಲ್ವರು ಅಭ್ಯರ್ಥಿಗಳು ಯಶಸ್ವಿಯಾಗುವ ಮೂಲಕ ರಾಜ್ಯ ಹಾಗೂ ಜಿಲ್ಲೆಯ ಯುವಜನಾಂಗಕ್ಕೆ ಮಾದರಿ ಹಾಗೂ ಸ್ಫೂರ್ತಿಯಾಗಿದ್ದಾರೆ ಎಂದು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾತೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪುರ ಅವರು ಹೇಳಿದರು. ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಇಂದು ನಾಗರಿಕ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಜಿಲ್ಲೆಯ ನಾಲ್ವರು ಅಭ್ಯರ್ಥಿಗಳಿಗೆ,

ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಯಾದಗಿರಿ ಜಿಲ್ಲೆಯಿಂದ ನಾಲ್ವರು ನಾಗರಿಕ ಸೇವಾ ಪರೀಕ್ಷೆಯಲ್ಲಿ ಏಕಕಾಲಕ್ಕೆ ಉತ್ತೀರ್ಣರಾಗಿರುವುದು ಅಪ್ರತಿಮ ಸಾಧನೆಯಾಗಿದೆ. ಕನಸು, ನನಸು ಮಾಡಿದ ಅನುಭವವಾಗಿದೆ. ಈ ಅಭ್ಯರ್ಥಿಗಳು ಯುವಜನಾಂಗಕ್ಕೆ ಪ್ರೇರಣೆ ಜೊತೆಗೆ ಆತ್ಮವಿಶ್ವಾಸ ಹೆಚ್ಚಿಸಿದಂತಾಗಿದೆ ಎಂದು ಹೇಳಿದರು. ಕಲ್ಯಾಣ ಕರ್ನಾಟಕ ಭಾಗದ ಏಳೂ ಜಿಲ್ಲೆಗಳಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಕೆಳಗಿನ ರ್‍ಯಾಂಕ್ ಬರುತ್ತಿರುವ ಸಂದರ್ಭದಲ್ಲಿ, ಒಂದೇ ವರ್ಷದಲ್ಲಿ ನಾಲ್ವರು ಯಶಸ್ವಿಯಾಗಿರುವುದು ಅಚ್ಚರಿ ಹಾಗೂ ಸಂತಸ ಮೂಡಿಸಿದೆ.

ಇದು ಅವರ ಪಾಲಕರು, ಕುಟುಂಬ ಹಾಗೂ ಶಿಕ್ಷಕ ವರ್ಗದವರಿಗೆ ಹೆಮ್ಮೆ ತರುವ ಸಂಗತಿಯಾಗಿದೆ ಎಂದು ಹೇಳಿದರು. ಜೀವನದಲ್ಲಿ ಛಲ, ಗುರಿ ಹಾಗೂ ಕಠಿಣ ಪರಿಶ್ರಮದಿಂದ ಸಾಧನೆ ಮಾಡಲು ಸಾಧ್ಯ ಎಂಬುದಕ್ಕೆ ಈ ನಾಲ್ವರು ಅಭ್ಯರ್ಥಿಗಳು ಉತ್ತಮ ಉದಾಹರಣೆಯಾಗಿದ್ದಾರೆ. ನೀರು, ಗಾಳಿ ರೀತಿಯಲ್ಲಿ ಶಿಕ್ಷಣವು ಕೂಡ ಇಂದು ಅಷ್ಟೇ ಪ್ರಾಮುಖ್ಯತೆ ಪಡೆದಿದೆ ಎಂದ ಅವರು ವಿಶ್ವದಲ್ಲಿ ಬದಲಾವಣೆ ತರಲು ಶಿಕ್ಷಣ ಬಹುಮುಖ್ಯವಾಗಿದೆ ಎಂದು ಅವರು ಹೇಳಿದರು. ರಾಜ್ಯ ಹಾಗೂ ಜಿಲ್ಲೆಯ ಕೀರ್ತಿ ಹೆಚ್ಚಿಸಿದ ಈ ನಾಲ್ವರು ಅಭ್ಯರ್ಥಿಗಳಿಗೆ ಅಭಿನಂದಿಸಿದ ಅವರು ಮುಂಬರುವ ದಿನಗಳಲ್ಲಿ ಈ ಜಿಲ್ಲೆಗೂ ತಮ್ಮೆಲ್ಲರ ಸೇವೆ, ದೊರೆಯಲಿ ಎಂದು ಅವರು ಹಾರೈಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು, ಜಿಲ್ಲೆಗೆ ಈಗ ಐತಿಹಾಸಿಕ ಕ್ಷಣ. ನಾಲ್ವರು ಅಭ್ಯರ್ಥಿಗಳು ಒಂದೇ ಬಾರಿಗೆ ನಾಗರಿಕ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದು. ಎಲ್ಲರಿಗೂ ಹೆಮ್ಮೆಯ ವಿಷಯ.

ಶೈಕ್ಷಣಿಕ ಸವಲತ್ತು ಹಾಗೂ ಇತರೆ ಸೌಲಭ್ಯಗಳ ಕೊರತೆ ಮಧ್ಯದಲ್ಲಿಯೂ ಈ ನಾಲ್ವರು ಅಭ್ಯರ್ಥಿಗಳ ಸಾಧನೆ ಅಪ್ರತಿಮವಾಗಿದೆ. ವಿದ್ಯಾರ್ಥಿಗಳು ಇವರಿಂದ ಸ್ಫೂರ್ತಿ ಪಡೆಯುವಂತೆ ತಿಳಿಸಿದ ಅವರು ಈ ಅಭ್ಯರ್ಥಿಗಳ ಸಾಧನೆಗೆ ನೆರವಾದ ಪಾಲಕರು, ಶಿಕ್ಷಕರು ಹಾಗೂ ಮಾರ್ಗದರ್ಶಕರಿಗೆ ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು, ಮಕ್ಕಳು ಲಭ್ಯವಿರುವ ಸಮಯಾವಕಾಶ ಬಳಸಿಕೊಳ್ಳಬೇಕು. ಗುರಿಯೊಂದಿಗೆ, ಕಠಿಣ ಪರಿಶ್ರಮದಿಂದ ಸಾಧನೆ ಮಾಡಬೇಕು. ಆತ್ಮಸ್ಥೈರ್ಯ

ಬೆಳೆಸಿಕೊಳ್ಳಬೇಕು. ಪಾಲಕರೂ ಕೂಡ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಸಂಸ್ಕಾರ ದೊರಕಿಸುವಂತೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ, ನಾಗರಿಕ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸಂದೀಪ್ ಬಾಡದ್, ನಿವೇದಿತಾ ಭಾವಿಮನಿ, ಬಸವರಾಜ ಜವಳಿ , ಚಂದ್ರಶೇಖರ ದೊರೆ ಅವರು ಕಷ್ಟಗಳು ಮಧ್ಯೆಯೂ


ಗುರಿಯ ಜೊತೆಗೆ ಕಠಿಣ ಪರಿಶ್ರಮ, ಸೂಕ್ತ ಮಾರ್ಗದರ್ಶನ, ಆತ್ಮವಿಶ್ವಾಸ, ಭಗವಂತನಲ್ಲಿ ವಿಶ್ವಾಸದಿಂದ ಯಶಸ್ಸು ಕಂಡುಕೊಳ್ಳಲು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕೊನೆ ಭಾಗದ ಕಾಲುವೆಗಳಿಗೆ ಸಮರ್ಪಕ ನಿರು ಹರಿಸಿ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ನಾರಾಯಣಪು ಜಲಾಶಯದಿಂದ ವಡಗೇರಾ ತಾಲೂಕಿನ ಕೊನೆ ಭಾಗದ ಕಾಲುವೆಗಳಿಗೆ ಸಮರ್ಪಕ ನೀರು ಹರಿಸುವಂತೆ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಮರಿಲಿಂಗಪ್ಪ ಸಾಹುಕಾರ ಕುಮನೂರ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸುಮಾರು ವರ್ಷಗಳಿಂದ ತಾಲೂಕಿನ ಕೊನೆಯ ಭಾಗದ ಕುರಕುಂದಿ, ಗೊಂದೆನೂರು, ಕೊಂಕಲ್, ಕುರಿಹಾಳ ,ಬೀರನಕಲ್, ವಡಗೇರಾ ,ಹೊರಟೂರು ಹಾಲಗೇರಾ, ಸೇರದಂತೆ ತಾಲೂಕಿನ ಕೊನೆ ಭಾಗದ ಇನ್ನಿತರ ಗ್ರಾಮಗಳಿಗೆ ಸಮರ್ಪಕವಾಗಿ ಕಾಲುವೆ ನೀರು ಮುಟ್ಟುತ್ತಿಲ್ಲ ಕಾಲುವೆಯ ನೀರಿಲ್ಲದೆ ಹತ್ತಿ, ಮೆಕ್ಕೆಜೋಳ, ಮೆಣಸಿನಕಾಯಿ, ಜೋಳ, ಶೇಂಗಾ, ಸಜ್ಜೆ, ಇನ್ನಿತರ ಬೆಳೆಗಳು ಒಣಗುತ್ತಿವೆ ಆದರೆ ಸಂಬಂಧಿಸಿದ ಅಧಿಕಾರಿಗಳು ಮಾತ್ರ ಕಣ್ಮುಚ್ಚಿ ಕುಳಿತಿದ್ದಾರೆ ಎಂದು ಅವರು ಆರೂಪಿಸಿದ್ದಾರೆ.



ಈ ಭಾಗದಲ್ಲಿ ಕಾಲುವೆಗಳು ನೆಪ ಮಾತ್ರಕ್ಕೆ ಇವೆ ಒಂದು ಸರಿಯಾಗಿ ನೀರು ಹರಿಸದಿದ್ದ ಮೇಲೆ ಕಾಲುವೆಗಳು ಏತಕ್ಕೆ ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಎಂಬಂತೆ ಅಧಿಕಾರಿಗಳು ನಡೆದುಕೊಳ್ಳುತ್ತಿದ್ದಾರೆ ಇದು ಸರಿಯಲ್ಲ ಕಾಲುವೆ ನೀರು ನಂಬಿ ಅದೆಷ್ಟೂ ರೈತರು ಬೆಳೆಗಳನ್ನು ಬಿತ್ತಿದ್ದಾರೆ ಸರಿಯಾಗಿ ನೀರು ಬರದಿದ್ದ ಕಾರಣ ಬೆಳೆಗಳು ಒಣಗಿ ಹಾಳಾಗಿ ಕೈಗೆ ಬಂದ ತುತ್ತು ಬರದಂತ ಪರಿಸ್ಥಿತಿ ರೈತರಿಗೆ ಎದುರಾಗಿದೆ ಈಗಾಗಲೇ ರೈತರು ಸಾಲ ಸೂಲಾ ಮಾಡಿ ಹಿಂಗಾರಿ ಬೆಳೆಗಳ ಬಿತ್ತನೆ ಮಾಡಿಕೊಂಡಿದ್ದು ಇನ್ನೇನು ಕೆಲವೇ ದಿನಗಳಲ್ಲಿ ಬೆಳೆಗಳು ಕೈಗೆ ಬರುವ ಹಂತದಲ್ಲಿವೆ ನೀರು ಇಲ್ಲದ ಕಾರಣ ಬೆಳೆಗಳು ಒಣಗುತ್ತಿವೆ ಆದರೆ ಸರ್ಕಾರ ಅಧಿಕಾರಿಗಳು ಮಾತ್ರ ಕಾಲುವೆಗಳಿಗೆ ನೀರು ಹರಿಸುವಲ್ಲಿ ವಿಳಂಬ ಮಾಡುತ್ತಿರುವುದು ಸರಿಯಲ್ಲ ರೈತರು ಈಗಾಗಲೇ ಆತಂಕದಲ್ಲಿದ್ದಾರೆ ಪ್ರತಿ ವರ್ಷವೂ ಬರಗಾಲ ಅತಿವೃಷ್ಟಿ ಅನಾವೃಷ್ಟಿಯಿಂದ ರೈತರು ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ವಡಗೇರಾ ತಾಲೂಕಿನ ಕೊನೆ ಭಾಗದ ಗ್ರಾಮಗಳಿಗೆ ಸಮರ್ಪಕವಾಗಿ ಏಪ್ರಿಲ್ 15 ರವರೆಗೆ ಕಾಲುವೆಗಳಿಗೆ ನೀರು ಹರಿಸಲು ಕ್ರಮ ಕೈಗೊಳ್ಳುವಂತೆ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಮರಿಲಿಂಗಪ್ಪ ಸಾಹುಕಾರ ಕುಮನೂರ ಜಿಲ್ಲಾಡಳಿತ ಹಾಗೂ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

# ರಾಜ್ಯ ರೈತೋದಯ ಹಸಿರುಸೇನೆ ಜಿಲ್ಲಾಧ್ಯಕ್ಷರಾಗಿ ಶರಣಪ್ಪ ನೇಮಕ




• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ಸಂಘಟನೆಯ ಜಿಲ್ಲಾಧ್ಯಕ್ಷರಾಗಿ ಶರಣಪ್ಪ ಕ್ರಿಷ್ಟಪ್ಪನೋರ್ ಖಾನಾಪೂರ ನೇಮಕಗೊಂಡಿದ್ದಾರೆ. ಇವರನ್ನು

ಬೆಂಗಳೂರಿನ ಚೇತನ ಇಂಟರನ್ಯಾಷನಲ್ ಹೊಟೆಲ್ ನಲ್ಲಿ ಜರುಗಿದ ಸಭೆಯಲ್ಲಿ ರಾಜ್ಯಾಧ್ಯಕ್ಷ ಬಿ ಟಿ. ಚಂದ್ರಶೇಖರ ನೇಮಕದ ಆದೇಶ ಪತ್ರ ನೀಡಿ ಅವರು ಮಾತನಾಡಿದರು. ರೈತರ ಜಲವಂತ ಸಮಸ್ಯೆಗಳ ವಿರುದ್ಧ ಹೊರಾಟ ಹಮ್ಮಿಕೊಳ್ಳಿ ಮತ್ತು ರೈತರ ಏಳ್ಗೆಗಾಗಿ ಸಂಘಟನೆಯ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ಕಾರ್ಯನಿರ್ವಹಿಸಿ ತಮ್ಮ ಬೆಂಬಲಕ್ಕೆ ರಾಜ್ಯ ಘಟಕ ಸದಾ ಕಾಲ ಇರುತ್ತದೆ

ಜಿಲ್ಲೆಯಾದ್ಯಂತ ನಮ್ಮ ಸಂಘಟನೆಯನ್ನು ಬಲಪಡಿಸುವಂತೆ ಹೇಳಿದರು. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಮಹೇಶ ಬನ್ನೆಟ್ಟಿ, ಕಲ್ಯಾಣ ಕರ್ನಾಟಕ ವಿಭಾಗೀಯ ಅಧ್ಯಕ್ಷ ರಾಮಕೃಷ್ಣ ಪೂಜಾರಿ, ಯಾದಗಿರಿ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ರುದ್ರಾಂಬಿಕಾ ಆರ್. ಪಾಟೀಲ್, ದೇವರಾಜ ಕುರಕುಂದಿ, ಚಂದ್ರಶೇಖರ ಹೊಸಬಾವಿ, ಸಾಹೇಬಗೌಡ ಖಾನಾಪೂರ, ವಿಜಯಕುಮಾರ ಖಾನಾಪೂರ, ಸೋಪಣ್ಣ ಹಳಿಸಗರ, ಸಂಗಣ್ಣಗೌಡ ದೋರನಳ್ಳಿ, ಭೀಮು ಕಾಡಮಗೇರಿ ಇನ್ನಿತರರು ಇದ್ದರು.

# ವಿದ್ಯಾರ್ಥಿಗಳ ಭವಿಷ್ಯ ಉಜ್ವಲಗೊಳ್ಳಲಿ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ವಿದ್ಯಾರ್ಥಿಗಳಿಗೆ ಹತ್ತನೇ ತರಗತಿ ಜೀವನದ ತಿರುವು ಪಡೆದುಕೊಳ್ಳುವ ವಿದ್ಯಾರ್ಥಿಗಳ ಭವಿಷ್ಯ ಉಜ್ವಲಗೊಳ್ಳಲಿ ಎಂದು ಬಿಜೆಪಿ ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯರಾದ ಮಹೇಶರೆಡ್ಡಿಗೌಡ ಮುದ್ನಾಳ ಹೇಳಿದರು. ನಗರದ ಎಮ್ ಆರ್ ಎಮ್ ಪ್ರೌಢ ಶಾಲೆಯ ಆವರಣದಲ್ಲಿ ಸ್ಪರ್ಶ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಾಮಗ್ರಿಗಳ ವಿತರಣೆ ಮಾತನಾಡಿದರು.

ವಿದ್ಯಾರ್ಥಿಗಳು ಏಕಾಗ್ರತೆಯಿಂದ ವಿದ್ಯಾಭ್ಯಾಸ ಮಾಡಿ ತಾವು ಪರೀಕ್ಷಾ ಸವಾಲು ಅಂತಹ ಸ್ವೀಕಾರ ಮಾಡಬೇಡಿ ಅದನ್ನು ಶಾಂತ ಮನೋಭಾವನೆಯಿಂದ ವಿದ್ಯಾಭ್ಯಾಸ ಮಾಡಿ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಚೆನ್ನಬಸಪ್ಪ ಮುದೋಳ ಮಾತನಾಡಿ ಹತ್ತನೇ ತರಗತಿ ವಿದ್ಯಾರ್ಥಿಗಳು ಕೇವಲ 20 ಅಂಕಗಳು ಪಡೆದರು ತಾವು ಪಾಸ್ ಆಗ್ತಿರಿ ಎಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು ಪರೀಕ್ಷೆಯ ಭಯ ಹೋಗಲಾಡಿಸಲು ನಮ್ಮ ಇಲಾಖೆಯಿಂದ ರಾಜ್ಯ ಮಟ್ಟದ ಪ್ರಶ್ನೆ ಪತ್ರಿಕೆಗಳನ್ನು ತೆಗೆದು ಈಗಾಗಲೇ ಮೂರು ಹಂತದ ಮಾಡಲ್ ಪ್ರಶ್ನೆ ಪತ್ರಿಕೆಗಳನ್ನು ತೆಗೆದು ಈಗಾಗಲೇ ತಾವು ಪರೀಕ್ಷೆಯಲ್ಲಿ ಭಾಗವಹಿಸಿದ್ದಿರಿ. ಶೇಕಡಾ 60 ರಷ್ಟು ಶಾಲೆಗಳಲ್ಲಿ ರಾತ್ರಿ ವಿದ್ಯಾಭ್ಯಾಸ ಮಾಡಿಸುವ ಕೆಲಸ ಮಾಡಿದ್ದೇವೆ ಪ್ರತಿ ಗ್ರಾಮ ಪಂಚಾಯತಿಯಲ್ಲಿ ತೆ-ರೆದ ಗ್ರಂಥಾಲಯ ಎಂಬಾ ಶಿರ್ಷಿಕೆಯಡಿ ಅವರಿಗೆ ಪ್ರತಿ ಗ್ರಂಥಲಾಯದಲ್ಲಿ ವಿದ್ಯಾರ್ಥಿಗಳಿಗೆ ಟಿ ಕಾಫಿ ಕೋಡುವ ಕೆಲಸ ಮಾಡಿ ವಿದ್ಯಾರ್ಥಿಗಳಿಗೆ ಓದಲು ಅನುಕೂಲ ಮಾಡಿ ಕೊಟ್ಟಿದ್ದಾರೆ ಎಂದರು, ಹತ್ತನೇ ತರಗತಿಯಲ್ಲಿ ತೇರ್ಗಡೆ ಆಗುವ ಎಲ್ಲಾ ವಿಧಾನಗಳನ್ನು ವಿದ್ಯಾರ್ಥಿಗಳಿಗೆ ಬಿಡಿಸಿ ಹೇಳುವ ಮೂಲಕ ವಿದ್ಯಾರ್ಥಿಗಳಿಗೆ ಧೈರ್ಯ ತುಂಬುವ ಕೆಲಸ ಮಾಡಿದರು,

ಈ ಎಮ್ ಆರ್ ಎಮ್ ಪ್ರೌಢ ಶಾಲೆಯ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ಯಾಡ್ ಪೆನ್ ಕಂಪಾಸ್ ಬಾಕ್ಸ್ ಇನ್ನಿತರ ಸಾಮಗ್ರಿಗಳು ಸ್ಪರ್ಶ ಚಾರಿಟೇಬಲ್ ಟ್ರಸ್ಟ್ ವತಿಯಿಂದ ವಿತರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸಿದ್ದಪ್ಪ ಎಸ್ ಹೊಟ್ಟಿ. ಉದ್ಯಮಿಗಳಾದ ಪ್ರಶಾಂತ ಆಯರಕರ್. ಮುಖ್ಯ ಗುರುಗಳಾದ ಶರಣಗೌಡ ಬಿಮನಹಳ್ಳಿ. ನೂರಂದಪ್ಪ ಲೇವಡಿ. ನಾಗೇಂದ್ರ ಜಾಜಿ. ಸಾಬಣ್ಣ. ಚನ್ನವೀರಯ್ಯ ಸ್ವಾಮಿ. ಮಹೇಶ ಮಲ್ಲು ಹಳಕಟ್ಟಿ ಇದ್ದರು.

# ಅಲೆಮಾರಿ ಅರೆ ಅಲೆಮಾರಿ, ನಾಮ ನಿರ್ದೇಶಿತ ಸದಸ್ಯರಾಗಿ ದೊಡ್ಮನಿ ಆಯ್ಕೆ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಕರ್ನಾಟಕ ಸರ್ಕಾರದ ಅಲೆಮಾರಿ /ಅರೆ ಅಲೆಮಾರಿ ಜಿಲ್ಲಾ ಮಟ್ಟದ ಸಮಿತಿಯ ನಾಮ ನಿರ್ದೇಶಿತ ಸದಸ್ಯರಾಗಿ ಯಲ್ಲಪ್ಪ ದೊಡ್ಮನಿ ಶಾರದಹಳ್ಳಿ ಅವರನ್ನು ಮಾನ್ಯ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು ಆಯ್ಕೆ ಮಾಡಿ ಆದೇಶ ಪತ್ರ ವಿತರಿಸಿದರು. ಆಯ್ಕೆಗೆ ಕಾರಣಿ ಭೂತರಾದ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪಗೌಡ ದರ್ಶನಾಪೂರ,ಯಾದಗಿರಿ ಮತ ಕ್ಷೇತ್ರದ ಶಾಸಕಾರದ ಚೆನ್ನರಡ್ಡಿ ಪಾಟೀಲ ತುನ್ನೂರು ಸುರಪೂರ ಮತ ಕ್ಷೇತ್ರದ ಶಾಸಕಾರದ ರಾಜಾ ವೇಣುಗೋಪಾಲ ನಾಯಕ, ಕೆವೈ ಡಿಸಿಸಿ ಬ್ಯಾಂಕ್ ಅಧ್ಯಕ್ಷ ವಿಠಲ್ ಯಾದವ ಹಾಗೂ ಯಾದವ ಸಮಾಜದ ಜಿಲ್ಲಾ ಘಟಕದ ಅಧ್ಯಕ್ಷ ತಾಯಪ್ಪ ಯಾದವ ಕಾಳೆಬೆಳಗುಂದಿ,ರೈತ ಸಂಘದ ರಾಜ್ಯಧ್ಯಕ್ಷ ಕಾಂತು ಪಾಟೀಲ ಮುಖಂಡರಾದ ಸಾಯಬಣ್ಣ ಪುರ್ಲೆ,ಮಲ್ಲನಗೌಡ ಶಾರದಹಳ್ಳಿ,ಭೀಮಣ್ಣ ಯರನೋರ,ಯಾದವ ಸಮಾಜದ ಯುವ ಘಟಕದ ಅಧ್ಯಕ್ಷ ಪ್ರದೀಪ ಪುರ್ಲೆ,ಯಲ್ಲಪ್ಪ ಪೂಜಾರಿ,ಗೋಪಾಲ ಸುರಪೂರ,ಲಕ್ಷ್ಮಣ ತಿಮ್ಮಾಪೂರ, ಗೋಪಾಲ ಸುರಪೂರ,ಲಕ್ಷ್ಮಣ ಮುಡಬೂಳ ಮಾಳಪ್ಪ ಯಾದವ ಕಾಡಂಗೇರಾ, ಸಾಬಯ್ಯ ಗುತ್ತೇದಾರ ಸೇರಿದಂತೆ ಹಲವರಿಗೆ ಅಭಿನಂದನೆ ತಿಳಿಸಿದ್ದಾರೆ.

# ರಾಯಚೂರು ಗರ್ಭಕಂಠದ ಕ್ಯಾನ್ಸರ್ ಮುಕ್ತ ಜಿಲ್ಲೆಯಾಗಲಿ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು**

ಮಹಿಳೆಯರು ಎದುರಿಸುತ್ತಿರುವ ಗಂಭೀರ ಅನಾರೋಗ್ಯ ಸಮಸ್ಯೆಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಕೂಡ ಒಂದಾಗಿದೆ. ಮಹಿಳೆಯರು ಎಚ್‌ಪಿವಿ ಲಸಿಕೆ ಪಡೆಯುವ ಮೂಲಕ ಗರ್ಭಕಂಠದ ಕ್ಯಾನ್ಸರ್ ಮುಕ್ತ ಜಿಲ್ಲೆಯನ್ನಾಗಿಸಲು ಸಹಕರಿಸಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ಹೇಳಿದರು.

ಮಾರ್ಚ್ 11 ಬುಧವಾರ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ 14 ವರ್ಷದ ಹೆಣ್ಣು ಮಕ್ಕಳಿಗೆ ಎಚ್‌ಪಿವಿ ಲಸಿಕೆ ವಿತರಿಸುವ ಜಿಲ್ಲಾ ಮಟ್ಟದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

14 ವರ್ಷದ ಶಾಲಾ ಮಕ್ಕಳಿಗೆ ಸರ್ಕಾರದಿಂದ ಲಸಿಕೆ ನೀಡುವ ಈ ಅಭಿಯಾನವು 2 ಹಂತಗಳಲ್ಲಿ ನಡೆಯಲಿದೆ. ಹತ್ತಿರದ ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆಯನ್ನು ಪಡೆಯುವ ಮೂಲಕ ಗರ್ಭಕಂಠದ ಕ್ಯಾನ್ಸರ್ ದೂರ ಮಾಡಬೇಕು. ಲಸಿಕೆ ತೆಗೆದುಕೊಳ್ಳಲು ಯಾವುದೇ ಭಯ, ಆತಂಕ ಪಡಬಾರದು. ಜಿಲ್ಲೆಗೆ ನಿಗದಿಯಾದ ಗುರಿ ಸಾಧಿಸಲು ಸಹಕರಿಸಬೇಕು ಎಂದರು.

ಈ ವೇಳೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ನಂದಿತಾ ಎಮ್.ಎನ್. ಅವರು ಮಾತನಾಡಿ, ಕೇಂದ್ರ ಸರ್ಕಾರದ ಆದೇಶದಂತೆ ಈ ಲಸಿಕಾ ಅಭಿಯಾನವನ್ನು ರಾಯಚೂರು ಜಿಲ್ಲೆಯಲ್ಲಿಯೂ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ 14 ವರ್ಷದ ಸುಮಾರು 22 ಸಾವಿರ ಹುಡುಗಿಯರಿಗೆ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಈ ಲಸಿಕೆಯನ್ನು ಹಾಕಲಾಗುತ್ತದೆ. ಈ ಅಭಿಯಾನವು ಮೂರು ತಿಂಗಳು ನಡೆಯಲಿದ್ದು, 14 ವರ್ಷದ ಎಲ್ಲ ಬಾಲಕಿಯರು ಲಸಿಕೆ ಪಡೆದುಕೊಳ್ಳಬೇಕು. ಮಹಿಳೆಯರಲ್ಲಿ ಹೆಚ್ಚಾಗಿ ಗರ್ಭಕಂಠ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಈ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕೆ ಸಹಕಾರಿ ಎಂದರು.

ಪೋಸ್ಟರ್ ಬಿಡುಗಡೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ತಾಲೂಕು ಆರೋಗ್ಯ ಇಲಾಖೆಯಿಂದ ಎಚ್‌ಪಿವಿ ಲಸಿಕೆ ಅಭಿಯಾನ–2026ರ ನಮ್ಮ ಹೆಣ್ಣುಮಕ್ಕಳ ಆರೋಗ್ಯ–ನಾಡಿನ ಸುಭದ್ರ ಭವಿಷ್ಯ, ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಇಂದೇ ಹೆಜ್ಜೆ ಇಡಿ! ಎಂಬ ಪೋಸ್ಟರ್ ಅನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ಸೇರಿದಂತೆ ವಿವಿಧ ಗಣ್ಯರು ಬಿಡುಗಡೆ ಮಾಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ, ರಾಯಚೂರು ತಾಲೂಕು ಆರೋಗ್ಯಾಧಿಕಾರಿ ಡಾ.ಅಮೃತ ಹುಕೇರಿ, ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಪ್ರಜ್ವಲ್, ಮಕ್ಕಳ ತಜ್ಞರಾದ ಡಾ.ಇಮ್ರಾನ್, ಡಾ.ಅನುಷಾ, ಐಎಮ್‌ಎ ನ ಡಾ.ಶ್ರೀಲತಾ ಪಾಟೀಲ್, ಡಾ.ತೃಪ್ತಿ, ವೈದ್ಯರಾದ ಡಾ.ಗುಂಡಮ್ಮ, ಡಾ.ಸುನೀಲ್, ಡಾ.ಶ್ವೇತಾಂಬರಿ, ಡಾ.ಅಷ್ಫಾಕ್ ಹುಸೇನ್, ಡಿಹೆಚ್‌ಇಓ ಈಶ್ವರ ದಾಸಪ್ಪನವರ, ಶುಶ್ರೂಷಾಧಿಕಾರಿ ಸಲೋಮಿ, ಸಿಆರ್‌ಪಿ ಮಾರೆಪ್ಪ ಬಲ್ಲಟಗಿ, ಬಿಹೆಚ್‌ಇಓ ನಾಗರಾಜ್, ಸರೋಜಾ ಕೆ, ಮುಖ್ಯೋಪಾಧ್ಯಾಯರಾದ ಈರಮ್ಮ, ಕವಿತಾ, ಹಿರಿಯ ಆ ಸುರಕ್ಷಣಾಧಿಕಾರಿ ಸುರೇಶ್, ಈರಮ್ಮ, ವಿಜಯಾ ಸೇರಿದಂತೆ ವಿವಿಧ ಶಾಲೆಯ ಮಕ್ಕಳು ಇದ್ದರು.

# ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಹುದ್ದೆಗೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು**

ಇಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2022–23 ಮತ್ತು 2023–24ನೇ ಸಾಲಿಗೆ ಜಿಲ್ಲೆಯ ಸಿರವಾರ ತಾಲ್ಲೂಕಿನ ಅಂಗನವಾಡಿ ಕೇಂದ್ರ ಸಂಖ್ಯೆ 12 ಹಾಗೂ ಅತ್ತನೂರು ಅಂಗನವಾಡಿ ಕೇಂದ್ರ ಸಂ–ಖ್ಯೆ 5ರಲ್ಲಿ ಅಂಗನವಾಡಿ ಕಂ ಕ್ರಷ್ ಕೇಂದ್ರಗಳ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕಾರ್ಯಕರ್ತೆ ಹುದ್ದೆಗೆ 5.500 ರೂ. ಮತ್ತು ಸಹಾಯಕಿ ಹುದ್ದೆಗೆ 3,000 ರೂ. ಗೌರವಧನ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ಸ್ಥಳೀಯ ಅಂಗನವಾಡಿ ಕಂ ಕ್ರಷ್ ಕೇಂದ್ರದ ಸರ್ವೆ ವ್ಯಾಪ್ತಿಯಲ್ಲಿ ವಾಸವಾಗಿರಬೇಕು.

ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧ ಪಟ್ಟ ಅಂಗನವಾಡಿ ಕೇಂದ್ರದ ವ್ಯಾಪ್ತಿಯ ಅಂಗನವಾಡಿ ಕಾರ್ಯಕರ್ತೆಯಿಂದ ಸರ್ವೆ ವ್ಯಾಪ್ತಿಯಲ್ಲಿರುವ ಬಗ್ಗೆ ದೃಢೀಕರಣ ಪಡೆದು ಸಲ್ಲಿಸಬೇಕು. ಅಭ್ಯರ್ಥಿಯು ಮಹಿಳೆ ಆಗಿರಬೇಕು. ಕರ್ನಾಟಕ ರಾಜ್ಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ದ್ವಿತೀಯ ಪಿಯುಸಿಯಲ್ಲಿ

ತೇರ್ಗಡೆ ಆಗಿರಬೇಕು. ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಈ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷ ಮಂಡಳಿ ನಡೆಸುವ 10 ನೇ ತರಗತಿಯಲ್ಲಿ ತೇರ್ಗಡೆ ಆಗಿರುವವರನ್ನು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರುವವರನ್ನು ಪರಿಗಣಿಸಬಹುದಾಗಿದೆ.

ವಯೋಮಿತಿ, ಅರ್ಜಿ ಸಲ್ಲಿಸಲು ನೇಮಕಾತಿ ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 18 ವರ್ಷ ಪೂರ್ಣಗೊಂಡಿರಬೇಕು. ಮತ್ತು ಗರಿಷ್ಠ 35 ವರ್ಷ

ಮೀರಿರಬಾರದು. ವಿಧವೆಯರು ಮತ್ತು ಅಂಗವಿಕಲರಿಗೆ 10 ವರ್ಷ ವಯೋಮಿತಿಯಲ್ಲಿ ರಿಯಾಯಿತಿ ಇರುತ್ತದೆ. ಅಭ್ಯರ್ಥಿಯು 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಅಥವಾ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಓದಿರಬೇಕು. ಅಪೇಕ್ಷಿತ ವಿದ್ಯಾರ್ಹತೆ: ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ 6 ತಿಂಗಳಿಂದ 6 ವರ್ಷದ ಮಕ್ಕಳ ಪೋಷಣೆ ಮತ್ತು ಶಿಕ್ಷಣ–ಕ್ಕೆ ಸಂಬಂಧಿಸಿದಂತೆ ಕನಿಷ್ಠ 6 ತಿಂಗಳ ಅವಧಿಯ ವಿಷಯವನ್ನು ಅಥವಾ ತರಬೇತಿ ಪಡೆದಿರಬೇಕು. ಆಸಕ್ತರು ಮಾರ್ಚ್ 30ರೊಳಗಾಗಿ ಅರ್ಜಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಸಿರವಾರದಲ್ಲಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸಿರವಾರ

ಇವರನ್ನು ಕಚೇರಿ ವೇಳೆಯಲ್ಲಿ ಭೇಟಿ ನೀಡಬಹುದಾಗಿದೆ ಅಥವಾ ಮೊಬೈಲ್ ಸಂಖ್ಯೆ: 7619281523ಗೆ ಸಂಪರ್ಕ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉತ್ತಮ ಆರೋಗ್ಯ, ದೈಹಿಕ ಬೆಳವಣಿಗೆಯ ಕ್ರೀಡಾಪಟ್ಟುಗಳೆ ದೇಶದ ಸಂಪತ್ತು : ತ್ರಿವೇಣಿ



• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**

ಕ್ರೀಡೆ ಯುವ ಜನರ ಅವಿಭಾಜ್ಯ ಅಂಗವಾಗಿರಬೇಕು ಕ್ರೀಡೆಯಿಂದ್ದ ಉತ್ತಮ ಆರೋಗ್ಯ ಮತ್ತು ಉತ್ತಮ ದೈಹಿಕ ಬೆಳವಣಿಗೆ ಜೋತೆಗೆ ಮನೋವೃದಿಯಿಂದ ಉತ್ತಮ ಪ್ರಜೆಯಾಗಿ ದೇಶದ ಸಂಪತ್ತು ಅಗುತ್ತಾರೆ ಎಂದು ಬೆಂಗಳೂರಿನ ಮಡಿಲು ಗ್ರಾಮೀಣಾಭಿವೃದ್ಧಿ ಸೇವಾ ಸಂಸ್ಥೆಯ ಅದ್ಯಕ್ಷೆ ಹಾಗೂ ರಾಜ್ಯ ಮಹಿಳಾ ಕಾಂಗ್ರೇಸ್ ನ ಪ್ರಧಾನ ಕಾರ್ಯದರ್ಶಿ ಡಿ.ಎಂ. ತ್ರಿವೇಣಿ ತಿಳಿಸಿದರು.

ತಾಲೂಕಿನ ಬನ್ನಿಕುಪ್ಪೆ ವ್ಯಾಪ್ತಿಯ ಕಾಡನಕೊಪ್ಪಲು ಸರಹದ್ದಿನ ಮೈದಾನದಲ್ಲಿ ಶ್ರೀ ಬನ್ನಮ್ಮ ತಾಯಿ ಜಾತ್ರಾ ಮಹೋತ್ಸವದ ಅಂಗವಾಗಿ ನಾಲ್ಕು ದಿನಗಳ ಬನ್ನಿಕುಪ್ಪೆ ಜಿ.ಪಂ ಮಟ್ಟದ ಪ್ರೀಮಿಯರ್ ಲೀಗ್–03 ಟೇನಿಸ್ ಬಾಲ್ ಕ್ರಿಕೇಟ್ ಪಂದ್ಯಾವಳಿಯ ಅಂತಿಮ ದಿನದ ಪ್ರಸಸ್ತಿ ಮತ್ತು ಟ್ರೋಪಿ ವಿತರಣ ಕಾರಕ್ರಮದಲ್ಲಿ ಬಾಗವಹಿಸಿ ಮಾತನಾಡಿದ ಅವರು ಯುವ ಜನರು ಕ್ರೀಡೆಯನ್ನು ಅತಿ ಮುಖ್ಯವಾಗಿ ಅಳವಡಿಸಿಕೊಳ್ಳಬೇಕು ಇಅದರಲ್ಲಿ ಸೋಲು ಮತ್ತು ಗೆಲುವು ಇದ್ದೆ ಇರುತ್ತೆ ಅದರೆ ಸೋತೆವೆಂದು ಕಿನ್ನತರಾಗದೆ ಎದೆಗುಂದಿ ಮುಂದೆ ಬರಬೇಕು ನಮ್ಮ ಸೋಲಿಗೆ ಕಾರಣಗಳೇನು ನಾವು ಎಲ್ಲಿ ಎಡವಿದೊ ಎಂದು ನೀವು ಅರ್ಥೈಸಿಕೊಂಡರೆ ಮುಂದಿನ ಗೆಲುವೆ ನಿಮ್ಮದೆ ಖಚಿತ ಎಂದು ಸೋತ ಕ್ರೀಡಾಪಟ್ಟುಗಳನ್ನು ಉತ್ತೇಜಿಸಿದರು ಅಲ್ಲದೆ ಗೆದ್ದ ತಂಡವನ್ನು ಅಭಿನಂದಿಸುವ ಮೂಲಕ ಗೆದ್ದೆವೆಂಬ ಬಿಗುವಿನಿಂದ ಇರುವ ಬದಲು ಮತಷ್ಟು ತಾಲುಕು ಜಿಲ್ಲಾ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡೆಗಳನ್ನು ಎದುರಿಸಲು ನೀವುಗಳು ತಳ ಮಟ್ಟದಿಂದಲ್ಲೆ ತಯಾರಾಗಬೇಕು ಎಂದರು.

ಬನ್ನಿಕುಪ್ಪೆ ಗ್ರಾ.ಪಂ ಏಳು ಗ್ರಾಮಗಳ ಯಾಜಮಾನರಾದ ಕೂಸಪ್ಪ ಮಾತನಾಡಿ ಕ್ರೀಡಾ ಪಂದ್ಯಾವಳಿಯ ಸೋಲು ಗೆಲುವುಗಳ ವಿಚಾರದಲ್ಲಿ ಯುವಕರು ಮನಸ್ತಾಪ ಮತ್ತು ಬೇಸರವನ್ನು ಮಾಡಿಕೊಳ್ಳದೆ ಗೆದ್ದವರು ನಾವೇ ಸೊತವರು ನಾವೇ ಎಂದು ಒಂದೆ ಮನಸಿನಿಂದ ಸ್ನೇಹ ಸೌಹಾರ್ದತೆಯಿಂದ ಒಂದಾಗಿರಬೆಖು ಎಂದು ಎಲ್ಲರನ್ನು ಉರಿದುಂಬಿಸಿದರು.

ಶ್ರೀಬನ್ನಮ್ಮ ತಾಯಿ ಜಾತ್ರಾ ಮಹೋತ್ಸವದ ಅಂಗವಾಗಿ ನಾಲ್ಕು ದಿನಗಳ ಬನ್ನಿಕುಪ್ಪೆ ಜಿ.ಪಂ ಮಟ್ಟದ ಪ್ರೀಮಿಯರ್ ಲೀಗ್–03 ಟೇನಿಸ್ ಬಾಲ್ ಕ್ರಿಕೇಟ್ ಪಂದ್ಯಾವಳಿಯು ನಾಲ್ಕು ದಿನಗಳ ಕಾಲ ನಡೆದು ಅಂತಿಮ ದಿನವಾದ ಇಂದು ಪೈನಲ್ ಪಂದ್ಯಾವಳಿಯಲ್ಲಿ ಎಮ್ಮೆಕೊಪ್ಪಲು ಗ್ರಾಮದ ಶ್ರಿಬಸವೇಶ್ವರ ತಂಡ ಪ್ರಥಮ ಸ್ಥಾನ, ಬನ್ನಿಕುಪ್ಪೆಯ ಅರ್.ಸಿ ಕ್ರಿಕೇಟರ್ಸ್ ತಂಡ ದ್ವೀತಿಯ ಸ್ಥಾನ, ಕಾಡನ ಕೊಪ್ಪಲಿನ ಅರ್.ಕೆ. ಬ್ರದರ್ಶ್ ತಂಡ ತೃತೀಯ , ಹಾಗೂ ನಾಲ್ಕನೆ ಸ್ಥಾನವನ್ನು ಹೊಸಕೋಟೆಯ ಅಪ್ಪು ಬ್ರದರ್ಶ್ ತಂಡಗಳು ತಮ್ಮದಾಗಿಸಿಕೊಂಡವು ಅಲ್ಲದೆ ಬೇಸ್ಟ್ ಬೌಲರ್ ಅಗಿ ಕಿರ್ತಿ, ಬೇಸ್ಟ್ ಫೀಲ್ಡರ್ ಅಗಿ ಚೆನ್ನ, ಬೇಸ್ಟ್ ಅಫ್ ಮ್ಯಾನ್ ಅಗಿ ಮಂಜು, ಬೇಸ್ಟ್ ರನರ್ ಅಫ್ ಅಗಿ ಶಾರುಕ್ ಅಯ್ಕೆಯಾಗಿದ್ದಾರೆ ಎಂದು ಪಂದ್ಯಾವಳೆ ವ್ಯವಸ್ಥಾಪಕರಾದ ಶಿವು ತಿಳಿಸಿದರು.

ನಾಲ್ಕು ದಿನಗಳ ಕಾಲ ನಡೆದ ಈ ಪಂದ್ಯಾವಳಿಯಲ್ಲಿ ಗೆದ್ದು ಪ್ರಥಮ ಸ್ಥಾನ ಪಡೆದ ಎಮ್ಮೆಕೊಪ್ಪಲು ಗ್ರಾಮದ ಶ್ರಿಬಸವೇಶ್ವರ ತಂದಕ್ಕೆ ರೂ.ಒಂದು ಲಕ್ಷ ನಗದು ಮತ್ತು ಟ್ರೋಪಿ,

ದ್ವೀತಿಯ ಸ್ಥಾನ ಪಡೆದ ಬನ್ನಿಕುಪ್ಪೆಯ ಅರ್.ಸಿ ಕ್ರಿಕೇಟರ್ಸ್ ತಂಡಕ್ಕೆ ರೂ.60.000/– ಮತ್ತು ಟ್ರೋಪಿ, ಮೂರನೆ ಸ್ಥಾನ ಪಡೆದ ಕಾಡನ ಕೊಪ್ಪಲಿನ ಅರ್.ಕೆ. ಬ್ರದರ್ಶ್ ತಂಡಕ್ಕೆ ರೂ.40.000/– ನಗದು ಮತ್ತು ಟ್ರೊಪಿ, ಹಾಗೂ ನಾಲ್ಕನೆ ಸ್ಥಾನ ಪಡೆದ ಹೊಸಕೋಟೆಯ ಅಪ್ಪು ಬ್ರದರ್ಶ್ ತಂಡಕ್ಕೆ ಟ್ರೊಪಿ ಮತ್ತು ಪದಕವನ್ನು ನೀಡಲಾಯಿತು ಪಂದ್ಯಾವಳಿಯ

ಎಲ್ಲ ಬಹುಮಾನಗಳನ್ನು ಬೆಂಗಳೂರಿನ ಮಡಿಲು ಗ್ರಾಮೀಣಾಭಿವೃದ್ದಿ ಸೇವಾ ಸಂಸ್ಥೆಯ ಅದ್ಯಕ್ಷೆ ಹಾಗೂ ರಾಜ್ಯ ಮಹಿಳಾ ಕಾಂಗ್ರೇಸ್ ನ ಪ್ರಧಾನ ಕಾರ್ಯದರ್ಶಿ ಡಿ.ಎಂ.ತ್ರಿವೇಣಿ ರವರು ವಿತರಿಸಿದರು. ಎಂದರು

ಅತ್ಮೀಯರೆ ಈ ಸುದ್ದಿಯನ್ನು ದಯವಿಟ್ಟು ಈ ದಿನವೇ ಹಾಕಿ ಕೋಡಿ ಪ್ಲೀಸ್ ಕೆಕೆ ಹುಣಸೂರು

# ಪ್ರಕೃತಿ ಉಳಿಸುವುದು ಇಂದಿನ ತುರ್ತು ಅಗತ್ಯ

• **ಮಲ್ಲಮ್ಮ ನುಡಿ ವಾರ್ತೆ,ಹುಣಸೂರು**



ಪ್ರಕೃತಿಯನ್ನು ಉಳಿಸುವುದು ಇಂದಿನ ದಿನಕ್ಕೆ ತುರ್ತು ಅಗತ್ಯವಾಗಿದೆ ಎಂದು ಶಾಸಕ ಜಿ.ಡಿ.ಹರೀಶ್ ಗೌಡ ಧರ್ಮಪತ್ನಿ ವರ್ಷಹರೀಶ್ ಗೌಡ ತಿಳಿಸಿದರು.ಅವರು ತಾಲ್ಲೂಕಿನ ಕುಡಿನೀರು ಮುದ್ದನಹಳ್ಳಿ ಗ್ರಾಮದಲ್ಲಿ ದೊಡ್ಡ ಆಲದಮರ ಜಾನಪದ ಜಾತ್ರಾ ಸಮಿತಿಯ ವತಿಯಿಂದ ಆಯೋಜಿಸಿದ ಕರ್ನಾಟಕ ಎರಡನೇ ದೊಡ್ಡ ಆಲದ ಮರದ 2ನೇ ವರ್ಷದ ಜಾತ್ರೆಯನ್ನು ಗೋವುಗಳಿಗೆ ಪೂಜಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.ನಾವುಗಳು ಪ್ರತಿನಿತ್ಯ ಉತ್ತಮವಾದ ಪರಿಸರ ನಮ್ಮಿಂದ ನಾವೇ ನಾಶಪಡಿಸಿಕೊಳ್ಳುತ್ತಿದ್ದೇವೆ. ಪ್ರಕೃತಿಯು ಮನುಷ್ಯನ ಜೀವನದ ಸ್ತಂಭವಾಗಿದ್ದು, ಉತ್ತಮವಾದ ಗಾಳಿ, ನೀರು, ಅರಣ್ಯನಾಶವನ್ನು ತಡೆಯುವುದರ ಮೂಲಕ ಪ್ರಕೃತಿಯನ್ನು ಉಳಿಸಬೇಕಾಗಿದೆ ಎಂದರು.ಉದ್ಯಮಿ ಹಾಗೂ ಕಾಂಗ್ರೆಸ್ ಮುಖಂಡ ನಾಡಪ್ಪನಹಳ್ಳಿ ರಾಜು ಮಾತನಾಡಿ, ನಾನು ಈ ಗ್ರಾಮದಲ್ಲಿ ಈ ಮರದ ಕೆಳಗೆ ಹಾಡಿ ಬೆಳೆದವ, ಆಲದಮರ ಇಷ್ಟು ದೊಡ್ಡಪ್ರಮಾಣದಲ್ಲಿರುವುದು ನಿಮ್ಮಗಳ ಪುಣ್ಯ, ನಾವು ಎಷ್ಟೆ ಹಣವನ್ನು ಖರ್ಚುಮಾಡಿದರು ಇಂತಹ ಆಲದ ಮರವನ್ನು ಬೆಳಸಲು ಎಂದು ಸಾದ್ಯವಿಲ್ಲ, ಆಲದಮರ ಪ್ರಾಣಿ, ಪಕ್ಷಿಗಳಿಗೆ ಆಶ್ರಯ ತಾಣವಾಗುವುದರ ಜೊತೆಗೆ ನಿಮಗೆ ಉತ್ತಮವಾದ ಗಾಳಿಯನ್ನು ನೀಡುತ್ತದೆ. ಅದಕ್ಕಾಗಿ ನಾವು–ನೀವುಗಳು ಸೇರಿ ಸಮಾಜ ಸೇವಕರು, ರಾಜಕಾರಣಿಗಳು, ಸಂಘ ಸಂಸ್ಥೆಗಳ ಸಹಾಯಪಡೆದು ರಾಜ್ಯಕ್ಕೆ ಬೃಹತ್ ಎರಡನೇ ಆಲದ ಮರ ಸ್ಥಳವಾದ ಇದನ್ನು ಅಭಿವೃದ್ಧಿಗೊಲಿಸಬೇಕು ಎಂದರು.ಪತ್ರಕರ್ತರ ಸಂಘದ ಅದ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಮಾತನಾಡಿ, ಪರಿಸರದ ಬಗ್ಗೆ ಇತರರಲ್ಲಿ ಜಾಗೃತಿ ಮೂಡಿಸಿ, ಎಲ್ಲೆಡೆಯೂ ನಗರೀಕರಣದ ಹೆಸರಿನಲ್ಲಿ ಮರಗಳನ್ನು ಕಡಿದು ಕಾಂಕ್ರೀಟ್ ಕಟ್ಟಡಗಳನ್ನು ನಿರ್ಮಾಣ ಮಾಡುವುದೇ ಹೆಚ್ಚಾಗಿದೆ, ಇದರ ನಡುವೆ ಮರಗಳ ಸಂರಕ್ಷಣೆಗೆ ನಿಂತಿರುವ ಆಲದ ಮರದ ಸಂರಕ್ಷಣೆ ಸಮಿತಿಗೆ ಧನ್ಯವಾದ. ನನ್ನ ತಾಯಿ ಇದೆ ಗ್ರಾಮದವರು ಆದ್ದರಿಂದ ಬಾಲ್ಯದಲ್ಲಿ ಇಲ್ಲೆ ಇದಿದ್ದರಿಂದ

ನನಗೆ ಈ ಆಲದಮರಗಳ ಬಗ್ಗೆ ಪರಿಚಯವಿದ್ದು, ಬೃಹತ್ ಆಲದ ಮರದ ಅಭಿವೃದ್ಧಿಗೆ ನನ್ನ ಸಂಪೂರ್ಣ ಬೆಂಬಲವಿದ್ದು ನಿಮ್ಮಗಳ ನಾನು ಕೈಜೋಡಿಸಿ ಮರಗಳನ್ನು ಸಂರಕ್ಷಿಸೋಣ ಎಂದರು.

ಆಲದಮರ ಸಮಿತಿ ಅಧ್ಯಕ್ಷ ಎಂ.ರವಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪರಿಸರವನ್ನು ವಿವಿಧ ಕಾರಣಗಳಿಂದ ನಾಶ ಮಾಡಲಾಗುತ್ತಿದೆ. ಜಾತ್ರೆ–ಯ ಮೂಲಕ ಪರಿಸರ ಸಂರಕ್ಷಿಸಿ ಬೆಳಸಬೇಕು ಎಂಬ ಸಂಕಲ್ಪದೊಂದಿಗೆ ಜಾನಪದ ಜಾತ್ರೆ ಹಮ್ಮಿಕೊಂಡು ಬರಲಾಗುತ್ತಿದೆ. ಜನಪ್ರತಿನಿಧಿಗಳು ಸಂಘ ಸಂಸ್ಥೆಗಳು, ಕಾರ್ಪೋರೇಟ್ ಸಂಸ್ಥೆಗಳು ಪರಿಸರ ಪ್ರೇಮಿಗಳು ಹಾಗೂ ಗ್ರಾಮದ ಯುವಕರು ಸಂಪೂರ್ಣ ಸಹಕಾರ ನೀಡಿದರೆ ಸಂರಕ್ಷಿತ ಪ್ರವಾಸಿ ತಾಣ ಮಾಡುವ ದೃಡಸಂಕಲ್ಪ ಮಾಡಿದ್ದೇವೆ ಎಂದು ತಿಳಿಸಿದರು.ವಿ.ಎಸ್.ಎಸ್.ಪ್ರಾಂಶುಪಾಲ ಶಿವಕುಮಾರ್ ಮಾತನಾಡಿ, ನಮ್ಮ ಸಂಸ್ಥೆ ಆಲದ ಮರದ ಅಭಿವೃದ್ಧಿಗೆ ದತ್ತು ಪಡೆದಿದ್ದು ಈಗಾಗಲೇ ಕಳೆದ ವರ್ಷದಿಂದಲೇ ಅಭಿವೃದ್ಧಿ ಹಾಗೂ ಸ್ವಚ್ಚತೆಗೆ ಆದ್ಯತೆ ನೀಡಲಾಗುತ್ತಿದೆ ಎಂದರು.

**ವಿಜೃಂಭಿಸಿದ್ದ ಜಾನಪದ**

ಇತಿಹಾಸ ಪ್ರಸಿದ್ಧ ರಾಜ್ಯದ ಎರಡನೇ ದೊಡ್ಡ ಆಲದ ಮರದ ಜಾನಪದ ಜಾತ್ರಾ ಮಹೋತ್ಸವವು ಜಾನಪದ ಕಲರವಗಳ ನಡುವೆ ವಿಜೃಂಭಿಸಿತು. ದೊಡ್ಡ ಆಲದ ಮರವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಗ್ರಾಮಸ್ಥರು ಹಮ್ಮಿಕೊಂಡಿದ್ದ ಜಾತ್ರಾ ಮೆರವಣಿಗೆಯಲ್ಲಿ ವೀರಗಾಸೆ, ಪೂಜಾಕುಣಿತ, ಸುಗ್ಗಿ ಕುಣಿತ, ದೊಳ್ಳುಕುಣಿತ, ಫಲಕ ಕುಣಿತ, ಪಟಕುಣಿತ, ಆದಿವಾಸಿ ನೃತ್ಯ, ವಿವಿಧ ಶಾಲಾ ಮಕ್ಕಳ ಸಾಂಸ್ಕೃತಿಕ ನೃತ್ಯದೊಂದಿಗೆ ಗ್ರಾಮದ ಹೆಬ್ಬಾಗಿಲಿನಿಂದ ಹೊರಟ ಜಾನಪದ ಕಲಾತಂಡಗಳ ಮೆರವಣಿಗೆಯು ಆಲದ ಮರದ ಆವರಣಕ್ಕೆ ಆಗಮಿಸಿ ಅಲ್ಲಿ ಕಲಾತಂಡಗಳು ಪ್ರದರ್ಶನ ನೀಡಿ ಜಾತ್ರೆಗೆ ಕಳೆಕಟ್ಟಿದರು. ಹಲವಾರು ಜಾನಪದ ಕಲಾವಿದರು ಜಾನಪದ ಗೀತೆ, ನೃತ್ಯಗಳ ಮೂಲಕ ಮನರಂಜಿಸಿದರು.

**ಸರ್ಕಾರ ಗುರುತಿಸಲ್ಲಿ:**

ಸುಮಾರು 2. 20 ಎಕ್ಕೆರೆ ವಿಸ್ತೀರ್ಣವಿರುವ ಈ ಬೃಹತ್ ಆಲದ ಮರವನ್ನು ಗುರುತಿಸಬೇಕು. 500ಕ್ಕೂ ಹೆಚ್ಚು ಹಳೆಯದಾದ ಪಾರಂಪರಿಕವಾದ ಮರವನ್ನು ಸಂರಕ್ಷಿಸುವ ಸಲುವಾಗಿ ರಾಜ್ಯ ಸರ್ಕಾರ ಕೈಜೋಡಿಸಬೇಕಾಗಿದೆ. ಈ ಜಾಗವನ್ನು ಪ್ರವಾಸೋದ್ಯಮಕೆ ಸೇರಿಸಿ ಅಭಿವೃದ್ಧಿಪಡಿಸಬೇಕಾಗಿದೆ. ಭಾರತದ ರಾಷ್ಟ್ರೀಯ ವೃಕ್ಷ ಹಾಗೂ ಹಿಂದುಗಳು ಪವಿತ್ರ ವೃಕ್ಷವಾದ ಇದನ್ನು ಆಲದಮರ ಸಮಿತಿ, ಗ್ರಾಮಸ್ಥರು, ಹಾಗೂ ಸಾರ್ವಜನಿಕ ಜೊತೆಗೆ ಗ್ರಾ.ಪಂ. ಹಾಗೂ ಸ್ಥಳೀಯ ಶಾಸಕರು ಹಾಗೂ ಸರ್ಕಾರ ಕೈಜೋಡಿಸಿದರೆ ಇದು ಒಂದು ಉತ್ತಮವಾದ ಪ್ರವಾಸಿ ತಾಣವಾಗುವುದು ಎಂದು ಗ್ರಾ.ಪಂ. ಮಾ.ಸದಸ್ಯ, ಪತ್ರಕರ್ತ ನಂಜಾಪುರ ಮನುಕುಮಾರ್ ತಿಳಿಸಿದರು.ಈ ವೇಳೆ ಖ್ಯಾತ ಚಲನಚಿತ್ರ ಗಾಯಕ ಮೋಹನ್ ಕುಮಾರ್, ರಾಜ್ಯ ಒಕ್ಕಲಿಗ ಸಂಘದ ಕಾರ್ಯದರ್ಶಿ ಸಿ.ಜೆ. ಗಂಗಾಧರ್, ಸಂಘದ ನಿರ್ದೇಶಕ ಮಂಜೇಗೌಡ, ಜೆ.ಡಿ.ಎಸ್ ತಾ.ಗ್ರಾ. ಅಧ್ಯಕ್ಷ ಸುರೇಂದ್ರ, ಸಂಘಟನಾ ಕಾರ್ಯದರ್ಶಿ ಸತೀಶಪಾಪಣ, ಗ್ರಾ.ಪಂ.ಮಾ ಅಧ್ಯಕ್ಷ ನಂದೀಶ್ ಸೇರಿದಂತೆ ಗ್ರಾಮದ ಮುಖಂಡರು ಭಾಗವಹಿಸಿದ್ದರು.

# ಮಹಿಳೆಯರು ಸ್ವಾಭಿಮಾನಿಗಳಾಗುತ್ತಿರುವುದು ವಿಶೇಷ: ನಂದಿತಾ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು**



ಈ ಹಿಂದೆ ಕೇವಲ ಮನೆಗಷ್ಟೇ ಸೀಮಿತವಾಗಿದ್ದ ಮಹಿಳೆಯು ಇದೀಗ ಎಲ್ಲಾ ಕ್ಷೇತ್ರಗಳಲ್ಲಿ ಮುಂಚೂಣಿಗೆ ಬಂದು ತನ್ನ ಸಾಮರ್ಥ್ಯ ಪ್ರದರ್ಶಿಸುತ್ತಿದ್ದಾಳೆ. ಇದು ಮಹಿಳಾ ಸ್ವಾಭಿಮಾನ ಮತ್ತು ಸಬಲೀಕರಣಕ್ಕೆ ಸಾಕ್ಷಿಯಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ.ನಂದಿತಾ ಎಮ್.ಎನ್. ಅವರು ಹೇಳಿದರು.

ಮಾರ್ಚ್ 09ರ ಸೋಮವಾರ ದಂದು ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ರಂಗೋಲಿ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಶಿಕ್ಷಣ, ರಾಜಕೀಯ, ಶೈಕ್ಷಣಿಕ, ವಿಜ್ಞಾನ, ಸಾಂಸ್ಕೃತಿಕ, ಕ್ರೀಡೆ ಸೇರಿದಂತೆ ಪ್ರತಿಯೊಂದು ಕ್ಷೇತ್ರಗಳಲ್ಲೂ ಮಹಿಳೆ ತನ್ನದೇ ಆದ ಛಾಪು ಮೂಡಿಸಿದ್ದಾಳೆ. ಅಂತಾರಾಷ್ಟ್ರೀಯ ಮಹಿಳಾ ದಿನದ ನಿಮಿತ್ತ ಹಮ್ಮಿಕೊಂಡ ರಂಗೋಲಿ ಸ್ಪರ್ಧೆಯು ಹೆಣ್ಣಿನ ಸಾಮರ್ಥ್ಯಕ್ಕೆ ಕನ್ನಡಿ ಹಿಡಿದಿದೆ ಎಂದರು.

ಮಹಿಳಾ ದಿನಾಚರಣೆಯು ಹೆಣ್ಣು ಮಕ್ಕಳ ಅಸ್ತಿತ್ವ, ಗುರಿ ಸಾಧನೆಯನ್ನು ಜಗದೆಲ್ಲೆಡೆ ಪಸರಿಸುವ ಮಹತ್ವದ ದಿನವಾಗಿದ್ದು, ಇಡೀ ಮಾರ್ಚ್ ತಿಂಗಳು ಮಹಿಳೆಯರ ಕಾರ್ಯ ಚಟುವಟಿಕೆಗಳನ್ನು ಗುರುತಿಸುವ ಕಾರ್ಯ ನಿರಂತರವಾಗಿ ನಡೆಯುವುದು. ಹೆಣ್ಣು ತಾಯಿಯಾಗಿ, ಸಹೋದರಿಯಾಗಿ, ಸ್ನೇಹಿತೆಯಾಗಿ, ಪತ್ನಿಯಾಗಿ, ಮಗಳಾಗಿ ತನ್ನದೇ ಆದ ಪಾತ್ರಗಳನ್ನು ನಿಭಾಯಿಸುತ್ತಾಳೆ ಎಂದರು.

ಬಹುಬಣ್ಣದ ರಂಗೋಲಿ ಚಿತ್ತಾರ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕೃಷ್ಣ ಸಭಾಂಗಣದಲ್ಲಿ ಇಲಾಖೆಯ ಮಹಿಳಾ ಸಿಬ್ಬಂದಿಯಿಂದ ನಡೆದ ರಂಗೋಲಿ ಸ್ಪರ್ಧೆಯು ಸ್ತ್ರೀ ಶಕ್ತಿಯನ್ನು ಪ್ರತಿಬಿಂಬಿಸುವಂತಿತ್ತು.

ಭ್ರೂಣದ ಹಂತದಿಂದಲೇ ಹೆಣ್ಣಿನ ಕಾಳಜಿ ಮಾಡಿದಲ್ಲಿ ಮಹಿಳೆಯು ಕೇವಲ ತನಗಾಗಿಯಲ್ಲ, ಸಮಾಜಕ್ಕೆ, ದೇಶಕ್ಕೆ ಕೊಡುಗೆಗಳನ್ನು ನೀಡುವ ಅದ್ಭುತ ಸಾಧಕಿಯಾಗುತ್ತಾಳೆ ಎಂಬುದನ್ನು ನಾಗರತ್ನ ಅವರ ರಂಗೋಲಿ ಸಂದೇಶ ನೀಡಿತು.

ಯಾವುದೇ ವೃತ್ತಿಪರ ಕಲಾವಿದರಿಗೆ ಕಡಿಮೆ ಇಲ್ಲದಂತೆ ಧೈರ್ಯದಿಂದ ಮುಖ ಭಾವನೆಯೊಂದಿಗೆ ಹೆಣ್ಣಿನ ಜೀವನದ ಕನಸುಗಳಿಗೆ ಬಣ್ಣ ತುಂಬಿ ಎಂಬ ಕನಸಿನ ಸಂದೇಶವನ್ನು ಸುವರ್ಣ ಅವರ ರಂಗೋಲಿ ತಿಳಿಸಿತು.

ಮಹಿಳೆಯು ತನ್ನ ಆಲೋಚನೆಗಳನ್ನು ಕೃತಿರೂಪಕ್ಕೆ ಇಳಿಸಿ, ದೃಢ ವಿಶ್ವಾಸ, ಸಹನೆ, ಪ್ರಾಮಾಣಿಕತೆ, ಧೈರ್ಯ, ಮಮತೆ, ತಾಯ್ತನವನ್ನು ಪ್ರಕೃತಿಯ ರೂಪದಲ್ಲಿ ಕೊಂಡೊಯ್ಯುವ ಪ್ರಯತ್ನ ಮಾಡುವ ಅರ್ಥವನ್ನು ಶಾಲಿನಿ ಅವರ ರಂಗೋಲಿ ಹೊರಹೊಮ್ಮಿಸಿತು.

ನಾರಿಶಕ್ತಿ ಸಮಾಜದ ಪ್ರಗತಿ ಎಂಬುದನ್ನು ಗ್ರಾಮೀಣ ಸೊಗಡಿನಲ್ಲಿ ತನ್ನ ಮಗುವನ್ನು ಮಮತೆಯ ಸಮುದ್ರದಲ್ಲಿ ತೇಲಿಸುವ ಪರಿಯುಳ್ಳ ಅದ್ಭುತ ಕಲೆಯೊಂದಿಗೆ ಯಾವುದೇ ಜವಾಬ್ದಾರಿ ಪರಿಪೂರ್ಣವಾಗಿಸುವ ಗಟ್ಟಿತನವನ್ನು ತೋರಿಸುವ ಪ್ರಯತ್ನದ ಅರ್ಥವನ್ನು ಗೀತಾ ಅವರು ತಮ್ಮ ರಂಗೋಲಿ ಮೂಲಕ ನೀಡಿದರು.

ಮೇಘನಾ ಅವರು ಬಿಡಿಸಿದ ರಂಗೋಲಿಯು, ಆರೋಗ್ಯಕರ ತಾಯಿಗೆ ಆರೋಗ್ಯವಂತ ಮಗು, ಅದರಲ್ಲೂ ಹೆಣ್ಣುಮಗು ಪ್ರಕೃತಿಯ ವರದಾನ, ಭ್ರೂಣ ಹತ್ಯೆ ಶಿಕ್ಷಾರ್ಹ ಅಪರಾಧ, ಹೆಣ್ಣುಮಗು ಉಳಿಸಿ, ಬೆಳಿಸಿ ಎಂಬ ಸಂದೇಶವನ್ನು ನೀಡಿತು.

ಲಕ್ಷ್ಮೀ ಅವರ ರಂಗೋಲಿಯು ಆರೋಗ್ಯ ಸುರಕ್ಷತೆಯಿಂದ ಸುಂದರ ಬದುಕು ಸಾಧ್ಯ ಎಂದು ಕೈಯಲ್ಲಿ ಹಣತೆಯೊಂದಿಗೆ ಹೆಜ್ಜೆ ಹಾಕುವ ದೃಶ್ಯ ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸಬೇಕು ಎಂಬ ಸಂದೇಶವನ್ನು ನೀಡಿತು.

ಈ ವೇಳೆ ತೀರ್ಪುಗಾರರಾದ ಡಾ.ಶೀಲಶ್ರೀ ಅವರು ಮತನಾಡಿ, ಅತ್ಯುತ್ತಮ ರಚನೆ ಎನ್ನುವುದಕ್ಕಿಂತ ಯಾವುದೇ ರೇಖಾಚಿತ್ರ ಬಳಸದೆ ಬಿಡಿಸಿದ ರಂಗೋಲಿಗಳನ್ನು ಅಂತಿಮಗೊಳಿಸಿದ್ದು, ಬಹುಮಾನವನ್ನು ಮುಂದಿನ ದಿನಗಳಲ್ಲಿ ವೇದಿಕೆಯಲ್ಲಿ ಗಣ್ಯರ ಸಮ್ಮುಖದಲ್ಲಿ ನೀಡಲಾಗುವುದೆಂದು ತಿಳಿಸಿದರು.

# ತಂಬಾಕು ಬೆಲೆಕುಸಿತ, ರಸ್ತೆಯಲ್ಲಿ ತಂಬಾಕನ್ನು ಸುಟ್ಟು ಪ್ರತಿಭಟಿಸಿದ ರೈತರು

• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**



ತಾಲೂಕಿನ ಕಟ್ಟೆಮಳಲವಾಡಿ ಹಾಗೂ ಜವನಿ ಕುಪ್ಪೆ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಬೆಲೆ ಕುಷಿತ ಹಿನ್ನೆಲೆಯಲ್ಲಿ ತಂಬಾಕು ಬೆಳೆಗಾರರು ಪ್ಲಾಟ್ ಫಾರಂ ನಂಬರ್ 2, 3, 64 ಹಾಗೂ 62 ಜವನಿಕುಪ್ಪೆ ಪ್ಲಾಟ್ ಫಾರಂ ನ ಎಲ್ಲಾ ಹರಾಜು ಮಾರುಕಟ್ಟೆಗಳನ್ನು ಸ್ಥಗಿತಗೊಳಿಸಿ ರೈತರು ಮಾರುಕಟ್ಟೆಯಿಂದ ಹೊರಗೆ ಬಂದು ರಸ್ತೆಯಲ್ಲಿ ವಾಹನಗಳನ್ನು ತಡೆದು ಟೈರಿಗೆ ಹಾಗೂ ತಂಬಾಕು ಬೇಲ್ ಗೆ ಬೆಂಕಿ ಹಚ್ಚಿ ಪ್ರತಿಭಟನೆಗೆ ಮುಂದಾದರು.

ನಂತರ ರೈತರು ಮಾತನಾಡಿ ಉತ್ತಮ ದರ್ಜೆಯ ತಂಬಾಕಿಗೆ 275 ರೂಗೆ ಮಾರಾಟವಾಗುತ್ತಿದ್ದವು ಆದರೆ ಬುಧವಾರ ಅದೇ ಗ್ರೇಡ್ ನ ತಂಬಾಕನ್ನು 220 ರೂ ಬೆಲೆಗೆ ಮಾರಾಟ ಆಗುತ್ತಿವೆ ಇದರಿಂದ ಉತ್ತಮ ತಂಬಾಕಿಗೆ ಪ್ರತಿ ಕೆಜಿಗೆ ಸುಮಾರು 50 ರೂ ಕಡಿಮೆಯಾಗಿದೆ ಎಂದು

ಎಲೆ ಮುದ್ದನಹಳ್ಳಿ ರೈತ ಮಂಜು ಸೇರಿದಂತೆ ಹಲವಾರು ರೈತರು ಆರೋಪಿಸಿದರು. ಅಧಿಕಾರಿಗಳಿಗೆ ಹಾಗೂ ಜನಪ್ರತಿನಿಧಿಗಳಿಗೆ ದಿಕ್ಕಾರ ಕೂಗಿ ಹಿಡಿ ಶಾಪ ಹಾಕುವ ಮೂಲಕ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿ ನಂತರ ಹುಣಸೂರು ನಗರಕ್ಕೆ ಆಗಮಿಸಿ ತಹಸೀಲ್ದಾರ್ ಅವರ ಕಚೇರಿಗೆ ಎಲ್ಲಾ ರೈತರು ತೆರಳಿ ರೈತರ ಸಮ್ಮುಖದಲ್ಲಿ ಜಿಲ್ಲಾಧಿಕಾರಿಗಳು ಜನಪ್ರತಿನಿಧಿಗಳು ಅಧಿಕಾರಿಗಳು ಹಾಗೂ ಸಂಘ–ಸಂಸ್ಥೆಯ ಮುಖಂಡರು ಸೇರಿ ಮಾರುಕಟ್ಟೆಯ ಬಗ್ಗೆ ಚರ್ಚಿಸಬೇಕು ಎಂದು ತಹಸೀಲ್ದಾರ್ ಮಂಜುನಾಥ್ ಅವರಿಗೆ ಮನವಿ ನೀಡಿದರು.

ಷರಾ:– ಕೇಂದ್ರ ಸರ್ಕಾರ ತಂಬಾಕು ಮೇಲೆ 18% ರಫ್ತು ಕಡಿಮೆಯಾಗಿದ್ದು,ಹೆಚ್ಚಿನ ಬೆಲೆಗೆ ಖರೀದಿ ಮಾಡಬೇಕೆಂದು ಹಾಗೂ ಈ ದಿನ ಖರೀದಿದಾರರು 290ರೂ ಇದ್ದ ತಂಬಾಕು ಬೆಲೆಯನ್ನು 255–260ರೂ ಬೆಲೆಗೆ ಖರೀದಿ ಮಾಡಿರುತ್ತಾರೆಂದು

ರೈತರು ರಸ್ತೆ ತಡೆದು ದಿಡೀರ್ ಪ್ರತಿಭಟನೆ ನಡೆಸುತ್ತಿರುತ್ತಾರೆ.

ಕಟ್ಟೆಮಳಲವಾಡಿ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಹರಾಜು ಪ್ರಕ್ರಿಯೆ ಪ್ರಾರಂಭವಾಗಿದ್ದು, ಈ ದಿನ ಉತ್ತಮ ದರ್ಜೆಯ ಪ್ರತಿ ಕೆಜಿ ತಂಬಾಕಿಗೆ 255–260 ರೂಗಳನ್ನು ನೀಡಿರುತ್ತಾರೆ.ಹಾಗೂ ಸರಾಸರಿ ದರ 230 ರೂಗಳನ್ನು ನೀಡಿದ್ದು, ಕಳಪೆ ದರ್ಜೆಯ ತಂಬಾಕಿನ ಕನಿಷ್ಠ ದರ ಪ್ರತಿ ಕೆಜಿ 165 ರೂಗಳಿಗೆ ಬಂದಿದ್ದು,ರೈತರು ಹರಾಜು ಪ್ರಕ್ರಿಯೆ ನಡೆಸದಂತೆ 3 ಪ್ಲಾಟ್ ಪಾರಂ ಗಳನ್ನು ತಡೆ ಹಿಡಿದು ದಿಡೀರ್ ಪ್ರತಿಭಟನೆ ನಡೆಸುತ್ತಿರುತ್ತಾರೆ.

ಈ ಸಂದರ್ಭದಲ್ಲಿ ರೈತ ಸಂಘದ ತಾಲೂಕು ಕಾರ್ಯದರ್ಶಿ ಅಗ್ರಹಾರ ರಾಮೇಗೌಡ, ಸತೀಶ, ರಾಮಕೃಷ್ಣ ಅತ್ತಿ ಕುಪ್ಪೆ, ಸಿದ್ದೇಶ, ಹರೀಶ, ಮಹೇಶ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು.

# ಎಸ್ಎಸ್ಎಲ್‌ಸಿ ಪರೀಕ್ಷೆ ಪಾರದರ್ಶಕವಾಗಿ ನಡೆಸಲು ಕ್ರಮವಹಿಸಿ : ಸುರೇಶ್ ಇಟ್ನಾಳ್



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಮಾರ್ಚ್ &ಏಪ್ರಿಲ್–2026ರಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ ವಾರ್ಷಿಕಯನ್ನು ಜಿಲ್ಲೆಯಲ್ಲಿ ಶಿಸ್ತಿನಿಂದ, ಪಾರದರ್ಶಕವಾಗಿ ಹಾಗೂ ಯಾವುದೇ ಅಕ್ರಮಗಳಿಗೆ ಅವಕಾಶವಿಲ್ಲದಂತೆ ನಡೆಸಲು ಎಲ್ಲಾ ಅಗತ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಸುರೇಶ್ ಬಿ. ಇಟ್ನಾಳ್ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪರೀಕ್ಷಾ ಮಾರ್ಗಸೂಚಿಗಳನ್ವಯ ಕೊಪ್ಪಳ ಜಿಲ್ಲೆಯಲ್ಲಿ 2026ರ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳನ್ನು ಅಚ್ಚುಕಟ್ಟಾಗಿ ನಡೆಸುವಂತೆ ಜಿಲ್ಲಾಧಿಕಾರಿ ಸುರೇಶ್ ಬಿ. ಇಟ್ನಾಳ್ ಹೇಳಿದರು.

ಅವರು ಸೋಮವಾರ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಹೆಚ್.ಪಟೇಲ ಸಭಾಂಗಣದಲ್ಲಿ ಮಾರ್ಚ್/ಏಪ್ರಿಲ್–2026ರ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳ ಕುರಿತು ಶಾಲಾ ಶಿಕ್ಷಣ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಇದೇ ಮಾರ್ಚ್ 18 ರಿಂದ ಏಪ್ರಿಲ್ 2 ರವರೆಗೆ ನಡೆಯಲಿರುವ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳನ್ನು ಯಾವುದೇ ಅಕ್ರಮ ಚಟುವಟಿಕೆಗೆ ಅವಕಾಶ ಕೊಡದೇ ಪರೀಕ್ಷಾ ನಿಯಮಗಳಂತೆ ಮತ್ತು ಪರೀಕ್ಷಾ ಮಾರ್ಗಸೂಚಿಗಳನ್ವಯ ನಡೆಸಬೇಕು. ಕೊಪ್ಪಳ ಜಿಲ್ಲೆಯಲ್ಲಿ 2026ರ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳನ್ನು ಅಚ್ಚುಕಟ್ಟಾಗಿ ಪರೀಕ್ಷೆ ಮುಖ್ಯ ಅಧೀಕ್ಷಕರು ಮಾರ್ಗಸೂಚಿಗಳನ್ನು ಓದಿಕೊಂಡು ಅದರಂತೆ ಕಾರ್ಯನಿರ್ವಹಿಸಬೇಕು. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಸೂಕ್ತ ಆಸನದ ವ್ಯವಸ್ಥೆ, ಅಗತ್ಯ ಕುಡಿಯುವ ನೀರು ಮತ್ತು ಶೌಚಾಲಯಗಳ ವ್ಯವಸ್ಥೆಯನ್ನು ಸಹ ಕಲ್ಪಿಸಬೇಕು. ಪರೀಕ್ಷೆ ಬರೆಯುವ ವಿಕಲಚೇತನ ವಿದ್ಯಾರ್ಥಿಗಳಿಗೆ ನೆಲ ಮಹಡಿಯಲ್ಲಿ ಸೂಕ್ತ ಆಸನದ ವ್ಯವಸ್ಥೆ ಮಾಡಬೇಕು. ಅಂಥ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಮತ್ತು ಬರವಣಿಗೆ ಸಹಾಯಕರ ಒಪ್ಪಿಗೆ ಪತ್ರವನ್ನು ಪರಿಶೀಲಿಸಿ ಅಗತ್ಯ ಕ್ರಮ ವಹಿಸಬೇಕು ಎಂದರು.

ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ ಬರೆಯಲು ಮೂರು ಬಾರಿ ಅವಕಾಶವಿದ್ದು, ಮೊದಲ ಪರೀಕ್ಷೆಯಲ್ಲಿ ಮಕ್ಕಳು ಭಯ ಪಡುವ ಅವಶ್ಯಕತೆಯಿಲ್ಲ. ಇದರ ಬದಲಿ ಇನ್ನೂ ಎರಡು ಬಾರಿ ಅವಕಾಶವಿದೆ ಎಂದು ಮಕ್ಕಳಿಗೆ ತಿಳಿಸಬೇಕು. ಪರೀಕ್ಷಾ ಕೇಂದ್ರದೊಳಗೆ ಯಾವುದೇ ಬಗೆಯ ಮೊಬೈಲ್ ಫೋನ್, ಕ್ಯಾಲ್ಕುಲೇಟರ್ ಅಥವಾ ಇನ್ನಿತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ತರುವುದನ್ನು ಮತ್ತು ಪರೀಕ್ಷಾ ಅವಧಿಯಲ್ಲಿ ಕೊಠಡಿ ಮೇಲ್ವಿಚಾರಕರು ಮೊಬೈಲ್ ಬಳಕೆ ಮಾಡುವುದನ್ನು ಸಹ ನಿಷೇಧಿಸಲಾಗಿದ್ದು, ಈ ಬಗ್ಗೆ ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಸೋಮಶೇಖರಗೌಡ ಪಾಟೀಲ್ ಅವರು ಮಾತನಾಡಿ, ಈ ಬಾರಿಯ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗೆ

23,001 ಹೊಸ ವಿದ್ಯಾರ್ಥಿಗಳು ಸೇರಿ ಜಿಲ್ಲೆಯ ಒಟ್ಟು 25,556 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದು, ಜಿಲ್ಲೆಯ ಗಂಗಾವತಿ ತಾಲ್ಲೂಕಿನ 23, ಕೊಪ್ಪಳ ತಾಲ್ಲೂಕಿನ 21, ಕುಷ್ಟಗಿ ತಾಲ್ಲೂಕಿನ 15 ಹಾಗೂ ಯಲಬುರ್ಗಾ

ತಾಲ್ಲೂಕಿನ 14 ಸೇರಿದಂತೆ ಒಟ್ಟು 74 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬ ಮುಖ್ಯ ಅಧೀಕ್ಷಕರು ಹಾಗೂ ಪ್ರಶ್ನೆಪತ್ರಿಕೆ ಅಭಿರಕ್ಷಕರನ್ನು ನೇಮಿಸಲಾಗಿದೆ ಹಾಗೂ ಕೊಪ್ಪಳ, ಗಂಗಾವತಿ, ಕುಷ್ಟಗಿ ಮತ್ತು ಯಲಬುರ್ಗಾ ಕ್ಷೇತ್ರ

ಶಿಕ್ಷಣಾಧಿಕಾರಿಗಳು ಆಯಾ ವಿಭಾಗಗಳ ಪ್ರಶ್ನೆ ಪತ್ರಿಕೆ ಪಾಲಕರಾಗಿರುತ್ತಾರೆ. ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು ಹಾಗೂ ವೀಕ್ಷಕರಿಗೆ ಈಗಾಗಲೇ ಮಾರ್ಗಸೂಚಿಗಳನ್ನು ನೀಡಲಾಗಿದೆ. ಪ್ರಶ್ನೆಪತ್ರಿಕೆಗಳ ಸುರಕ್ಷತೆ, ವಿದ್ಯಾರ್ಥಿಗಳ ಕುಳಿತುಕೊಳ್ಳುವ ವ್ಯವಸ್ಥೆ, ಪರೀಕ್ಷಾ ಸಾಮಗ್ರಿಗಳ ಲಭ್ಯತೆ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ, ಮುನಿರಾಬಾದ್‌ನಲ್ಲಿರುವ ಜಿಲ್ಲಾ ತರಬೇತಿ

ಲರಾದ ಅನಂತಕುಮಾರ ಸೇರಿದಂತೆ ಕ್ಷೇತ್ರಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವಿಷಯಪರಿವೀಕ್ಷಕರು, ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಎಸ್.ಎಸ್.ಎಲ್.ಸಿ

ವಾರ್ಷಿಕ ಪರೀಕ್ಷೆಯ ತಾಲ್ಲೂಕು ನೋಡಲ್ ಅಧಿಕಾರಿಗಳು, ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

# ಸ್ಥಳೀಯ ಇತಿಹಾಸ ಅರಿವು ಅಗತ್ಯ : ಮಲ್ಲೇಶಪ್ಪ

• ಮಲ್ಲಮ್ಮ ನುಡಿ ವಾರ್ತೆ ಕುರುಗೋಡು



ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಗ್ರೇಡ್ 2 ತಹಶಿಲ್ದಾರ್ ಮಲ್ಲೇಶಪ್ಪ. ಪ್ರತಿಯೊಬ್ಬರೂ ಸ್ಥಳಿಯ ಇತಿಹಾಸದ ಬಗ್ಗೆ ಅರಿಯುವುದು ಅಗತ್ಯ.

ಕನ್ನಡ ನಾಡು ನುಡಿ ,ನೆಲ ,ಜಲದ ಸಂರಕ್ಷಣೆ ಹಾಗೂ ಭಾಷೆಯ ಉಳಿವಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಕನ್ನಡಿಗರ ಕರ್ತವ್ಯ.

ಕನ್ನಡದ ಸೇವೆಗಾಗಿ ಸಾಹಿತ್ಯ ಪರಿಷತ್ತು ರಾಜ್ಯದಲ್ಲಿ ಹೆಚ್ಚಿನ ಚಟುವಟಿಕೆಗಳನ್ನು ಆಯೋಜಿಸುವುದರ ಜೊತೆಗೆ ಕನ್ನಡದ ಅಭಿವೃದ್ಧಿಗೆ ನಿರಂತರ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ. ಇದೇ ರೀತಿ ಇನ್ನೂ ಹೆಚ್ಚಿನ ಕನ್ನಡದ ಸೇವೆ ಸಲ್ಲಿಸುತ್ತಿದ್ದರೆ ಕನ್ನಡ ನಾಡಿನ ಜನರ ಧ್ವನಿಯಾಗುವುದರಲ್ಲಿ ಸಂದೇಹವೇ ಇಲ್ಲ ಎಂದರು.

ಹದಿನೆಂಟನೆಯ ಶತಮಾನದಲ್ಲಿ ಜನಸಾಮಾನ್ಯರ ಕಷ್ಟಗಳನ್ನು ಯೋಗ ಸಾಧನೆ ಮೂಲಕ ವ್ಯೂಮಕಾಯ ಸಿದ್ದಿ ಪಡೆದು ತನ್ನ ಪವಾಡದ ಮೂಲಕ ಪರಿಹರಿಸಿದ ಮಹಾಮಾತೆ, ಶರಣೆ ನೀಲಮ್ಮ ಕುರುಗೋಡು ನೀಲಮ್ಮಳಾಗಿ, ಸಿಂಧಗೇರಿ ನೀಲಮ್ಮಳಾಗಿ ಹಾಗೂ ,ಕದಡಿ ನೀಲಮ್ಮಳಾಗಿ ಜನಮಾನಸದಲ್ಲಿ ಅಚ್ಚಳಿದೆ ನೆಲೆಸಿದ್ದಾಳೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಮಸೂತಿ ನಾಗರಾಜ್ ತಿಳಿಸಿದರು.

ಅವರು ಪಟ್ಟಣದ ಸರ್ಕಾರಿ ಐ.ಟಿ.ಐ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಕುರುಗೋಡು ನೀಲಮ್ಮನ ಜೀವನ ದತ್ತಿ ಉಪನ್ಯಾಸದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಿವಶರಣರು ತಮ್ಮ ಆತ್ಮವನ್ನೆ ದೇವರೆಂದು ಅರಿತು ವಚನಗಳನ್ನು ರಚಿಸಿದರು ಅವು ಸರ್ವಕಾಲಕ್ಕೂ ಸತ್ಯವಾಗಿ ಉಳಿದಿವೆ ಎಂದರು.

ನಾಡಗೌಡರ ವೀರೇಂದ್ರಗೌಡ ಉಪನ್ಯಾಸ ನೀಡಿ ಮಾತನಾಡಿದ ಅವರು ಬಸವೇಶ್ವರ ಮತ್ತು ನೀಲಮ್ಮ ದೇವಿಯ ಪವಾಡಗಳ ಮೂಲಕ ಈ ಭಾಗದಲ್ಲಿ ಮನೆ ಮಾತಾಗಿದ್ದಾರೆ.

ನೀಲಮ್ಮದೇವಿ, ದೊಡ್ಡಬಸವೇಶ್ವರ ರಥೋತ್ಸವ ಅತ್ಯಂತ ಅದ್ದೂರಿಯಾಗಿ ಜರುತ್ತದೆ. ತಾಯಿಯ ಪವಾಡಗಳು ಅನನ್ಯ ಆದರೆ ಶಿವಶರಣರ ಮದುವೆ ಅವೈಜ್ಞಾನಿಕ. ಪರಿಷತ್ತಿನ ಚಟುವಟಿಕೆಗಳು ನಿರಂತರ ಜರುಗಲು ಆರ್ಥಿಕ ನೆರವು ಅವಶ್ಯಕ. ಹಾಗಾಗಿ ದತ್ತಿ ನಿಧಿ ಸಂಗ್ರಹಿಸಲು ಪ್ರತಿಯೊಬ್ಬ ಕನ್ನಡಿಗರ ಸಹಕಾರ ಅಗತ್ಯ. ಜೊತಗೆ ದತ್ತಿದಾನಿಗಳು ಮುಂದೆ ಬರಬೇಕು. ಆಗ ಇನ್ನೂ ಹೆಚ್ಚಿನ ಮಟ್ಟದಲ್ಲಿ ದತ್ತಿ ಉಪನ್ಯಾಸ ಕಾರ್ಯಕ್ರಮಗಳನ್ನು ಮಾಡಬಹುದು ಎಂದರು.

ಈ ಸಂದರ್ಭದಲ್ಲಿ ದತ್ತಿದಾನಿಗಳಾದ ನೀಲಮ್ಮ ವಂಶಸ್ಥರು ಶ್ರೀ ಶಾಂತನಗೌಡರು ಶ್ರೀ ಎಂ.ಆರ್ ಪಂಪನಗೌಡರು ಮಾತನಾಡಿ ನೀಲಮ್ಮನ ಚರಿತ್ರೆ ತಿಳಿಸಿದರು.

ಈ ಸಂದರ್ಭದಲ್ಲಿ ಐಟಿಐ ಕಾಲೇಜು ಪ್ರಾಂಶುಪಾಲರಾದ ಶ್ರೀ ವಿ.ತಿಮ್ಮರಾಜ ಮತ್ತು ಕಿರಿಯ ತರಬೇತಿ ಅಧಿಕಾರಿಗಳಾದ ಸತೀಶ್ ಹಾಗೂ ಸುಭಾಷ್ ಚಂದ್ರ ಗೌಡ,

# ಮಾ13 ರಂದು ಖಾಲಿ ಹುದ್ದೆಗಳಿಗಾಗಿ ನೇರ ಸಂದರ್ಶನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಮಾ.13 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 02 ಗಂಟೆಯವರೆಗೆ ನಗರದ ಹಳೆಯ ತಾಲ್ಲೂಕು ಕಚೇರಿ ಹಿಂಭಾಗದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ ಆಯೋಜಿಸಲಾಗಿದೆ.ಸಂದರ್ಶನದಲ್ಲಿ ರೀಡ್ಸ್, ಟೋಯೋಟಾ, ಕಿಯಾ, ಫೋಕ್ಸ್‌ಕಾನ್, ಐ ಫೋನ್ ಮತ್ತು ಎಲ್‌ಐಸಿ ಕಂಪನಿಗಳು ಭಾಗವಹಿಸಲಿದ್ದು, ಇವರು ತಮ್ಮಲ್ಲಿರುವ ಖಾಲಿ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕ ಮಾಡಿಕೊಳ್ಳುವರು.ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿರಬೇಕು. ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ತಮ್ಮ ಆಧಾರ್ ಕಾರ್ಡ್ ಪ್ರತಿ, ಸ್ವ–ವಿವರ ಪ್ರತಿಗಳೊಂದಿಗೆ ಭಾಗವಹಿಸಬೇಕು.

ಈ ಸಂದರ್ಶನದಲ್ಲಿ ಪುರುಷರು ಮತ್ತು ಮಹಿಳೆಯರು ಭಾಗವಹಿಸಬಹುದಾಗಿದ್ದು, ಯಾವುದೇ ಶುಲ್ಕ ಇರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ 7619207762, 9663263086, 7676774293, 6360408094 ಗೆ ಕರೆಮಾಡಿ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಹಟ್ಟಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಲಾ ಎಸ್ ಡಿ ಎಂ ಸಿ ರಚನೆ



• ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ

ತಾಲುಕಿನ ಬೆಲವಂತರ ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಎಸ್ ಡಿ ಎಂ ಸಿ ರಚಿಸಲಾಯಿತು

ಶಾಲೆಯ ಮುಖ್ಯೋಪಾಧ್ಯಾಯರಾದ ರಾಜು ಲಮಾಣಿ ಶಿಕ್ಷಕರು ಎಸ್‌ಡಿಎಂಸಿ ರಚನಾ ನಿಯಮಾವಳಿ ಹಾಗೂ ಸ್ಥಾನ ಹಂಚಿಕೆಯ ಕೋಷ್ಟಕದ ಮಾಹಿತಿಯನ್ನು ನೀಡಿ ಗ್ರಾಮಸ್ಥರು ನೂತನ ಎಸ್.ಡಿ.ಎಂಸಿ ಅಧ್ಯಕ್ಷರನ್ನಾಗಿ ಮಹದೇವ ಬಾಗಲಕೋಟಿ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ಚನ್ನಬಸವ್ವ ಬಸನಕೊಪ್ಪ ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸದಸ್ಯರನ್ನಾಗಿ ಮಾಬುಸಾಬ ಕುಂದಗೋಳ ,ಈರಪ್ಪ ಮಡಿವಾಳರ, ಶಿವಲಿಂಗಯ್ಯ ಹಿರೇಮಠ , ಚನ್ನಪ್ಪ ಶಿವಶೆಟ್ಟರ್, ಬೈಲಪ್ಪ ಅಸುಂಡಿ , ಮಲ್ಲಿಕಾರ್ಜುನಯ್ಯ ಹಿರೇಮಠ, ಚನ್ನಬಸಪ್ಪ ಆಚಗೊಂಡ, ಬಸವರಾಜ ಕಮತ, ನೇತ್ರಾ ಮೇತ್ರಿ , ಮಾಲಾ ತಳವಾರ. ಪ್ರೇಮಾ ಬಸನಕೊಪ್ಪ ಸಂಗೀತಾ ಬಸನಕೊಪ್ಪ , ಕವಿತಾ ರಡ್ಡೇರ , ಕಾವೇರಿ ಹೊಸಮನಿ , ದೀಪಾ ಬಸನಕೊಪ್ಪ , ರೇಖಾ ಪಾಟೀಲ ಆಯ್ಕೆಯಾದರು.

ಮಕ್ಕಳ ಪಾಲಕರು, ಹಿರಿಯರಾದ ಬೈಲಪ್ಪ ನಾಗನೂರ, ಈಶ್ವರಪ್ಪ ಬಸನಕೊಪ್ಪ ಮೂರುಸಾವಿರಪ್ಪ ಮಲ್ಲಪ್ಪನವರ, ಚನ್ನಪ್ಪ ಹುಲಮನಿ, ಸಂಗಮೇಶ ಹಿರೇಮಠ ಇದ್ದರು.

# ಗ್ಯಾರಂಟಿ ಯೋಜನೆ ಬಳಸಿ ಆರ್ಥಿಕ ಸಾಮಾಜಿಕ ಸಬಲರಾಗಿ

ನಿಡಗುಂದಿ:ಸರ್ಕಾರದ ಪಂಚಗ್ಯಾರಂಟಿ ಯೋಜನೆಗಳನ್ನು ಮಹಿಳೆಯರು ಪರಿಣಾಮಕಾರಿಯಾಗಿ ಬಳಸಿಕೊಂಡು ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಸಬಲತೆ ಹೆಚ್ಚಿಸಿಕೊಳ್ಳಬೇಕು ಎಂದು ನಿಡಗುಂದಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಚಂದ್ರಶೇಖರ್ ಹಳಮನಿ ಹೇಳಿದರು ಪಟ್ಟಣದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಬುಧವಾರ ಗ್ಯಾರಂಟಿ ಯೋಜನೆಗಳು ತಾಲೂಕು ಅನುಷ್ಠಾನ ಸಮಿತಿಯಿಂದ ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಗ್ಯಾರಂಟಿ ಯೋಜನೆಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದವರು ಮಹಿಳೆಯರು ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು




ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಕುಟುಂಬದ ಅಭಿವೃದ್ಧಿಗೆ ಜೊತೆಗೆ ಸಮಾಜ ಅಭಿವೃದ್ಧಿಗೂ ಕೊಡುಗೆ ನೀಡಬಹುದು ಶಿಕ್ಷಣ ಉದ್ಯೋಗ ಸ್ವಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಮುನ್ನಡೆಯುತ್ತಿರುವುದು ಶ್ಲಾಘನೀಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಮಹಿಳೆಯರ ಜೀವನಮಟ್ಟವನ್ನು ಉತ್ತಮಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ ಎಂದು ಹೇಳಿದರು ಈ ಸಂದರ್ಭದಲ್ಲಿ ತಹಶೀಲ್ದಾರ್ ಎಡಿ ಅಮರಾವದಗಿ ತಾಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ವೆಂಕಟೇಶ ವಂದಾಲ ತಾಲೂಕು ಪಂಚಾಯತ ಎಡಿ ಶರಣಬಸವ ಬಿರಾದಾರ್ ಪಟ್ಟಣ ಪಂಚಾಯತಿ ಅಧ್ಯಕ್ಷರು ಜಂಭಕ್ಕ ವಿಭೂತಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಎಸಿಡಿಪಿಓ ಪಂಚ ಗ್ಯಾರಂಟಿ ಸಮಿತಿ ಸದಸ್ಯರು ಇಲಾಖೆ ಅಧಿಕಾರಿಗಳು ಅಂಗನವಾಡಿ ಸೂಪರ್ವೈಸರ್ ಬೋರಮ್ಮ ಬಿರಾದಾರ್ ಅನೇಕ ಮಹಿಳೆಯರು ಪಾಲ್ಗೊಂಡಿದ್ದರು

# ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಜಿಲ್ಲೆಯ ಲಿಂಗಸುಗೂರಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು (ಜಿಟಿಟಿಸಿ) ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಸ್ಥೆಯಾಗಿದ್ದು, ಇಲ್ಲಿ ವಿವಿಧ ವಿಭಾಗದ ವಿಷಯಗಳನ್ನು ಬೋಧಿಸಲು ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಬಿಇ ಇನ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್ 01 ಹುದ್ದೆ, ಬಿ.ಇ ಇನ್ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ 01 ಹುದ್ದೆ, ಎಂಟೆಕ್ ಇನ್ ಮೆಕ್ಯಾನಿಕಲ್ ಎಂಜಿನಿಯರಿಂಗ್ 01 ಹುದ್ದೆ, ಎಂಟೆಕ್ ಇನ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್ 01 ಹುದ್ದೆಗೆ 01 ವರ್ಷದ ಬೋಧನೆ ಅಥವಾ ಕೈಗಾರಿಕಾ ಅನುಭವವನ್ನು ಅಭ್ಯರ್ಥಿಗಳು ಹೊಂದಿರಬೇಕು.

ಆಸಕ್ತರು ಸ್ವ–ವಿವರವನ್ನು ಕಾಲೇಜಿನ ಇಮೇಲ್ ಐಡಿ: ರಣಣಜ. ಟುಟಿರಭಿಣಾರಣಡಿ@ರಟಚುಟ.ಛಿಂಟ ಗೆ ಕಳಿಸಿ, 2026ರ ಮಾರ್ಚ್ 16ರಿಂದ ಮಾರ್ಚ್18ರವರೆಗೆ ನಡೆಯುವ ಸಂದರ್ಶನದಲ್ಲಿ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಲಿಂಗಸುಗೂರಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವನ್ನು ಕಚೇರಿಯ ಸಮಯದಲ್ಲಿ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ. ಅಥವಾ ಮೊಬೈಲ್ ಸಂಖ್ಯೆ: 8548038965ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಲಿಂಗಸುಗೂರಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಪ್ರಾಂಶುಪಾಲರಾದ ಪ್ರತೀಬಾ ಪಾಟೀಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಿಲಿಗುಂಡಗೆ ರಾಜ್ಯ ಮಟ್ಟದ ಸರ್ವೋತ್ತಮ ಕ್ರೀಡಾ ಸೇವರತ್ನ ಪ್ರಶಸ್ತಿ ಪ್ರದಾನ




• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಕಳೆದ ಹತ್ತು ವರ್ಷಗಳಿಂದ ನೂರಾರು ವಿದ್ಯಾರ್ಥಿಗಳನ್ನು ಜಿಲ್ಲಾ, ರಾಜ್ಯ, ರಾಷ್ಟ ಮಟ್ಟಕ್ಕೆ ಆಯ್ಕೆ ಯಾಗುವಲ್ಲಿ ತಿರುಪತಿ ನಾಯಕ ಪಿಲಿಗುಂಡ ತಂದೆ ಗೋವಿಂದಪ್ಪ ಇವರ ಪಾತ್ರ ಬಹು ದೊಡ್ಡದು,

ಈ ಕಾರಣಕ್ಕಾಗಿ ಇವರನ್ನು ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ನೇತ್ರ ಕಲಾ ಸಂಘ ದ 15 ನೇ ವಾರ್ಷಿಕೋತ್ಸವ ಅಂಗವಾಗಿ ಬಳ್ಳಾರಿಯ ಡಾ.ಜೋಳದ ರಾಶಿ ದೊಡ್ಡನಗೌಡ ರಂಗ ಮಂದಿರದಲ್ಲಿ ಇಂದು ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.ವಿಜಯನಗರ ಸಂಯುಕ್ತ ಪದವಿ ಪೂರ್ವ ಕಾಲೇಜು,ಮುನಿರಾಬಾದ್ ನ ದೈಹಿಕ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳನ್ನು ಕ್ರೀಡಾ ಕೂಟಕ್ಕೆ ಪಾಲ್ಗೊಳ್ಳುವ ಮೂಲಕ ಅವರನ್ನು ಕ್ರೀಡಾ ಚಟುವಟಿಕೆಗೆ ಹೆಚ್ಚಿನ ಆಸಕ್ತಿ ವಹಿಸಿಕೊಳ್ಳಲು ರೂಪಿಸಿದ್ದಾರೆ, ಎಂದರು.

ಈ ಕಾರ್ಯಕ್ರಮದಲ್ಲಿ ನೇತ್ರ ಕಲಾ ಸಂಘದ ಕಾರ್ಯದರ್ಶಿ ವಿರೇಶ ದಳವಾಯಿ, ಬಳ್ಳಾರಿ ಮಹಾನಗರ ಪಾಲಿಕೆಯ ಮಹಾಪೌರ ರಾದ ಪಿ. ಗಾದೆಪ್ಪ,ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ನಿಷ್ಟಿ ರುದ್ರಪ್ಪ,ಉದ್ಯಮೆ ಎಂ. ಚಂದ್ರಶೇಖರ ಗೌಡ, ಪೂಜ್ಯ ಡಾ.ಶಿವಕುಮಾರ ತಾತ ನವರು, ಎ.ಮಾನಯ್ಯ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷರು, ಬಿ.ನಾಗರಾಜ ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಳ್ಳಾರಿ, ಗೊವಿಂದಪ್ಪ ದೊರೆ ಪಿಲಿಗುಂಡ, ವಹನುಮಂತ ರಾಯ ದೊರೆ ರಾಜ್ಯ ಉಪಾಧ್ಯಕ್ಷರು ರೈತ ಸಂಘ ಪಿಲಿಗುಂಡ, ಮಾನಸಯ್ಯ ನಾಯಕ ತಾಲ್ಲೂಕು ಅಧ್ಯಕ್ಷರು ಮಹರ್ಷಿ ವಾಲ್ಮೀಕಿ ಮಹಾಸಭಾ ದೇವದುರ್ಗ, ಗಂಗಪ್ಪ ನಾಯಕ ಕೊರವಿಗೌಡರು ಬುದ್ದಿನ್ನಿ, ಕವಿತಾ ಶಿಕ್ಷಕಿ,ಪದ್ಮಮ್ಮ ಶಿಕ್ಷಕಿ, ಸಂತೋಷ ರೆಡ್ಡಿ ಕಲ್ಯಾಣ ಕರ್ನಾಟಕ ದೈಹಿಕ ಉಪನ್ಯಾಸಕರ ಸಂಘ ಅಧ್ಯಕ್ಷರು, ಕೊಟ್ರೇಶ ಸನ್ನದ ಕೊಪ್ಪಳ ಜಿಲ್ಲಾ ದೈಹಿಕ ಉಪನ್ಯಾಸಕರ ಸಂಘದ ಕಾರ್ಯದರ್ಶಿ, ಮೋಹನ ದೈಹಿಕ ಉಪನ್ಯಾಸಕರು ಗವಿಸಿದ್ದಪ್ಪ ಉಸಗಲಿ, ದೈಹಿಕ ಉಪನ್ಯಾಸಕರು, ಬಳ್ಳಾರಿ, ಭಾಸ್ಕರ, ಜಯಶ್ರೀ, ಶಂಕರ ಗೌಡ, ಶೇಕ್ಷಾವಲಿ, ತಿಪ್ಪೇಸ್ವಾಮಿ ದೈಹಿಕ ಉಪನ್ಯಾಸಕರು, ಸುಂಕಪ್ಪ,ಕಲಾವಿದರು, ಅಂಬಣ್ಣ ದಳವಾಯಿ, ಜಿ.ಸಂಗೀತ ಶಿಕ್ಷಕಿ,ಅಂಬಳಿ ವೀರೇಂದ್ರ ಉಪನ್ಯಾಸಕ ಉಪಸ್ಥಿತರಿದ್ದರು.

# ಅಂಬೇಡ್ಕರ್ ಹಬ್ಬ ಕಾರ್ಯಕ್ರಮ ಆಯೋಜನೆ, ಲಾಂಛನ ಬಿಡುಗಡೆ




ಮಲ್ಲಮ್ಮ ನುಡಿ ವಾರ್ತೆ

ಕಳೆದ ವರ್ಷ ಅಂಬೇಡ್ಕರ ಹಬ್ಬ ಮೊದಲ ಬಾರಿಗೆ ಮಾಡಿ ನಾಲ್ಕು ದಿನಗಳ ಕಾಲ ನಾಲ್ಕು ದಿನದ ವೈಚಾರಿಕ ಕ್ರಾಂತಿ ಮೂಡಿಸುವ ಕೆಲಸ ಆಗಿತ್ತು. ಈ ಬಾರಿ ಏ.11 ರಿಂದ 14ರ ವರೆಗೆ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಎಂದು ದಲಿತ ವಿದ್ಯಾರ್ಥಿ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಶ್ರೀನಾಥ ಪೂಜಾರಿ ಹೇಳಿದರು.

ಈ ಕುರಿತು ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡುತ್ತಾ ಇಡೀ ದೇಶದ ಜನತೆ ಅಂಬೇಡ್ಕರ್ ಅವರನ್ನು ನೆನೆಯಬೇಕಿದೆ. ಈ ಕಾರ್ಯಕ್ರಮಗಳಲ್ಲಿ ಸಂವಾದ ಗೋಷ್ಠಿಗಳು, ಯುವಜನ ಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ವೈಚಾರಿಕ ವಿಚಾರಗಳ ಕುರಿತು ಚರ್ಚೆ ನಡೆಯಲಿದೆ ಎಂದರು. ಈ ಸಂದರ್ಭದಲ್ಲಿ ಪೌರ ಕಾರ್ಮಿಕರು ಅಂಬೇಡ್ಕರ್ ಹಬ್ಬದ ಲಾಂಛನ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ವೇದ ಅಕಾಡಮಿಯ ಮುಖ್ಯಸ್ಥರಾದ ಶಿವಾನಂದ ಕೆಲೂರ ಅವರು ಮಾತನಾಡಿ, 2026 ನೇ ಸಾಲಿನ ಅಂಬೇಡ್ಕರ ಹಬ್ಬವನ್ನು ಏ.11, 12, 13, 14 ರಂದು ವಿಶಿಷ್ಠವಾಗಿ ಆಯೋಜನೆ ಮಾಡಲಾಗುತ್ತಿದೆ. ಭಾರತದ ಪ್ರಥಮ ಶಿಕ್ಷಕ ಜ್ಯೋತಿಬಾ ಪುಲೆ ಅವರ ಜನ್ಮ ದಿನಾಚರಣೆಯಿಂದ ಆರಂಭವಾಗಿ ಅಂಬೇಡ್ಕರರ 135 ನೇ ಜನ್ಮ ದಿನಾಚರಣೆಯಂದು ಕಾರ್ಯಕ್ರಮ ಸಮಾಪ್ತಿಗೊಳ್ಳಲಿದೆ.

ಈ ನಾಡಿನ ಪಂಡಿತರು, ರೈತರು, ಯುವಜನತೆ, ಸಾಹಿತಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮುಂದಿನ ಒಂದು ತಿಂಗಳ ಕಾಲ ನಿರಂತರವಾಗಿ ಸಭೆಗಳು ನಡೆಯಲಿವೆ ಎಂದರು.

ಅಂಬೇಡ್ಕರರವರನ್ನು ವಿಶಿಷ್ಠವಾಗಿ ಸ್ಮರಿಸುವ ಕೆಲಸವಾಗಲಿದೆ ಎಂದರು. ಅಂಬೇಡ್ಕರ ಅವರ ಆಶಯದಂತೆ ಜನತೆಯಲ್ಲಿ ಸಮಾನತೆಯ ಅರಿವು ಮೂಡಿಸುವ ಕೆಲಸ ಆಗಲಿದೆ. ನಾಡಿನಾದ್ಯಂತ ಇರುವ ಬುದ್ಧಿಜೀವಿಗಳು, ಪ್ರಗತಿಪರರು, ವಿದ್ಯಾರ್ಥಿಗಳು, ಜಾತಿ ಮತ ಪಂಥ ಲಿಂಗಬೇಧವಿಲ್ಲದೆ ನಾಡಿನ ಜನತೆ, ಸಂಘ ಸಂಸ್ಥೆಗಳು, ರಾಜಕಾರಣಿಗಳು ಈ ಕಾರ್ಯಕ್ರಮ ದಲ್ಲಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ 10 ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದೆ.

ಏ.11ರಿಂದ 14ರ ವರೆಗೆ ನಿತ್ಯ ಬೆಳಗ್ಗೆ 10 ಗಂಟೆಯಿಂದ ಸಾಯಂಕಾಲದ ವರೆಗೆ ನಗರದ ಕಂದಗಲ್ಲ ಹನುಮಂತರಾಯ ರಂಗಮಂದಿರಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು. ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಸಂಗಮೇಶ ಸಗರ, ಲಕ್ಷ್ಮಣ ಹಂದ್ರಾಳ, ಮಹಾದೇವ ಚಲವಾದಿ, ಬಾಲಾಜಿ ಕಾಂಬಳೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಭೂಮಿ ಜಿಂದಾಲ್‌ಗೆ ಪರಭಾರೆ ಮಾಡಿರುವುದನ್ನು ವಿರೋಧಿಸಿ ಪ್ರತಿಭಟಟೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ತಾಲೂಕಿನ ಕುಡುತಿನಿ ಬಳಿ ಲಕ್ಷ್ಮೀ ಮಿತ್ತಲ್ ಕಂಪನಿ ಉಕ್ಕು ಕಾರ್ಖಾನೆ ಸ್ಥಾಪಿಸಲೆಂದು ವಶಪಡಿಸಿಕೊಂಡ ಭೂಮಿಯನ್ನು ಜಿಂದಾಲ್ ಗೆ 200 ಎಕರೆ ಪರಭಾರೆ ಮಾಡಿರುವುದನ್ನು ವಿರೋಧಿಸಿ ಪ್ರತಿಭಟಬೆ ನಡೆಸುತ್ತಿದ್ದ ಭೂ ಸಂತಸ್ತ್ರ ಹೋರಾಟ ಸಮಿತಿ, ಪ್ರಾಂತ ರೈತ ಸಂಘ, ಸಿಐಟಿಯು, ಕನ್ನಡಪರ ಸಂಘಟನೆ ಗಳು ಜಂಟಿ ಸಮಿತಿಯ ಮುಖಂಡರನ್ನು ಪೊಲೀಸರು ಇಂದು ಬೆಳಿಗ್ಗೆ ಬಂಧಿಸಿದ್ದಾರೆ.

ಜಿಂದಾಲ್ ಸಂಸ್ಥೆಯವರು ಪೊಲೀಸ್ ಬಂದೋಬಸ್ತು ನಲ್ಲಿ ಇಂದು ಇಲ್ಲಿ ಮಣ್ಣು ಪರೀಕ್ಷೆಗೆ ಬರಲಿದ್ದಾರೆಂದು ಅದನ್ನು ವಿರೋಧಿಸಿ ಕೈಗಾರಿಕಾ ಪ್ರದೇಶದಲ್ಲಿ ನಿನ್ನೆ ಸಂಜೆಯಿಂದಲೇ ಪ್ರತಿಭಟನೆ ನಡೆದಿತ್ತು. ರಾತ್ರಿಯೂ ರೈತರು ಅಲ್ಲಿಯೇ ಇದ್ದರು. ಬೆಳಗಾಗುವುದರಲ್ಲಿ ನೂರಾರು ರೈತರು ಜಮಾಯಿಸಿದ್ದರು.

ಪ್ರತಿಭಟನೆ ಮಾಡಿ, ಆದರೆ ಇತರೇ ಕಾರ್ಯಗಳಿಗೆ ಅಡ್ಡಿ ಪಡಿಸುವಂತಿಲ್ಲ ಎಂದು ಪೊಲೀಸರು ಮನವಿ ಮಾಡಿದ್ದರು. ಆದರೆ ಪ್ರತಿಭಟನಾಕಾರರು ಯಾವುದೇ ಕಾರಣಕ್ಕೆ ಜಿಂದಾಲ್ ನವರು ಇಲ್ಲಿ ಕೈಗಾರಿಕೆ ಸ್ಥಾಪಿಸಲು ಮಣ್ಣು ಪರೀಕ್ಷೆ ಮಾಡಲು ಅವಕಾಶ ನೀಡಲ್ಲ ಎಂದಿದ್ದಕ್ಕೆ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿ ಬಳ್ಳಾರಿ ಡಿಎಆರ್ ಗ್ರೌಂಡ್ ಗೆ ಕರೆತಂದರು.

# ಉಪ ಚುನಾವಣೆ: ವಿವಿಧ ಸೆಕ್ಟರ್ ಅಧಿಕಾರಿಗಳ ಸಭೆ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬರುವ ಬಾಗಲಕೋಟೆ ವಿಧಾನಸಭೆ ಉಪ ಚುನಾವಣೆಗೆ ಸಂಬಂಧಿಸಿದಂತೆ, ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ಸಂಗಪ್ಪ ಅವರ ಅಧ್ಯಕ್ಷತೆಯಲ್ಲಿ ಸೆಕ್ಟರ ಅಧಿಕಾರಿ ಹಾಗೂ ಸೆಕ್ಟರ ಪೊಲೀಸ್ ಅಧಿಕಾರಿಗಳ ಸಭೆ ಮಂಗಳವಾರ ಜರುಗಿತು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಜರುಗಿದ ಸೆಕ್ಟರ ಅಧಿಕಾರಿಗಳ ಸಭೆಯಲ್ಲಿ ದುರ್ಬಲ ಪ್ರದೇಶ ಗುರುತಿಸಲು ತಂಡಗಳು ರಚಿಸಿ, ನೇಮಿಸಲಾದ ಸೆಕ್ಟರ ಮತಗಟ್ಟೆಗಳನ್ನು ಹಾಗೂ ಮತಗಟ್ಟೆ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಿಗೆ ಭೇಟಿ ನೀಡಿ ಮತದಾರರನ್ನು, ಮತದಾನದ ದಿನದಂದು ಭೀತಿಗೊಳಪಡಿಸಿ ಮತದಾನವನ್ನು ಮಾಡುವಂತೆ ಒತ್ತಾಯಿಸುವವ್ಯಕ್ತಿಗಳಮಾಹಿತಿಯನ್ನು ಪಡೆಯುವ ಕುರಿತು ಅಗತ್ಯ ಕ್ರಮವಹಿಸುವಂತೆ ಸೂಚನೆ ನೀಡಿದರು.

ಸೆಕ್ಟರ ಅಧಿಕಾರಿಗಳು ತಮಗೆ ನೇಮಿಸಲಾದ ಮತಟ್ಟೆಗಳನ್ನು ಭೇಟಿ ನೀಡಿ ಎಲ್ಲ ಮೂಲಭೂತ ಸೌಕರ್ಯಗಳು ಇರುವದನ್ನು ಖಚಿತಪಡಿಸಿಕೊಳ್ಳಬೇಕು. ಮತಗಟ್ಟೆಗಳಲ್ಲಿ ಕುಡಿಯುವ ನೀರು, ಶೌಚಾಲಯ, ವಿದ್ಯುತ್, ರ್‍ಯಾಂಪ್ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳ ವ್ಯವಸ್ಥೆ ಇರಬೇಕು. ಅಲ್ಲದೇ ಮತದಾರರಿಗೆ ಯಾವುದೇ ತೊಂದರೆ ಆಗದಂತೆ ವ್ಯವಸ್ಥೆ ಮಾಡಲು ತಿಳಿಸಿದರು.

ಚುನಾವಣೆಯಲ್ಲಿ

ಸೆಕ್ಟರ ಅಧಿಕಾರಿಗಳ ಪಾತ್ರ ಅತೀ ಮಹತ್ವದ್ದಾಗಿದ್ದು, ಯಾವುದೇ ಲೋಪ ಆಗದಂತೆ ಕರ್ತವ್ಯವನ್ನು ಅಚ್ಚುಕಟ್ಟಾಗಿ, ಯಾವುದೇ ಪಕ್ಷದ ಪರವಾಗಿ ಕಾರ್ಯನಿರ್ವಹಿಸದೇ ನಿಷ್ಪಕ್ಷಪಾತವಾಗಿಕಾರ್ಯನಿರ್ವಹಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ, ಡಿವಾಯ್‌ಎಸ್‌ಪಿ ಗಜಾನನ ಸುತಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ತೋಟಗಾರಿಕೆ ತರಬೇತಿಗೆ ಅರ್ಜಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ತೋಟಗಾರಿಕೆ ಇಲಾಖೆಯಿಂದ 2026-27ನೇ ಸಾಲಿಗೆ ಜಿಲ್ಲೆಯ ಪುರುಷ ಮತ್ತು ಮಹಿಳಾ ರೈತ ಅಭ್ಯರ್ಥಿಗಳಿಗೆ ಬೆಳಗಾವಿ ಜಿಲ್ಲೆಯ ಹಿಡಕಲ್ ಡ್ಯಾಂ ತರಬೇತಿ ಕೇಂದ್ರದಲ್ಲಿ ಮೇ 2, 2026 ರಿಂದ ಫೆಬ್ರವರಿ 28, 2027 ವರೆಗೆ 10 ತಿಂಗಳ ತೋಟಗಾರಿಕೆ ತರಬೇತಿ ಕಾರ್ಯಕ್ರಮ

ಹಮ್ಮಿಕೊಳ್ಳಲಾಗಿದ್ದು, ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಗೆ 15 ಅಭ್ಯರ್ಥಿಗಳ ಗುರಿ ನಿಗದಿಪಡಿಸಲಾಗಿದೆ. ಅರ್ಜಿ ಸಲ್ಲಿಸುವವರು ಎಸ್.ಎಸ್.ಎಲ್.ಸಿ ಪಾಸಾಗಿದ್ದು, ಅರ್ಜಿಯ ಜೊತೆಗೆ ಪಹಣಿ,

ಹಿಡುವಳಿ ದೃಡೀಕರಣ ಪತ್ರ, ಎಸ್.ಎಸ್.ಎಲ್.ಸಿ ಅಂಕಪಟ್ಟಿ ನಕಲು ಪ್ರತಿ ಹಾಗೂ ಪರಿಶಿಷ್ಟ ಜಾತಿ ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ ಮತ್ತು ಅರ್ಜಿ ಶುಲ್ಕವನ್ನು ಪೋಸ್ಟಲ್ ಆರ್ಡರ್, ಕೆ-2 ಪೇಮೆಂಟ್ ಚಲನ ಮುಖಾಂತರ ಇಲ್ಲವೇ ಅಕೌಂಟ್ ರಹಿತ ಡಿಸಿ ಮುಖಾಂತರ ಸಲ್ಲಿಸಬೇಕು.

ಅರ್ಜಿ ಶುಲ್ಕ ಸಾಮಾನ್ಯ ಅಭ್ಯರ್ಥಿಗೆ 30 ರೂ. ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ 15 ರೂ. ಇರುತ್ತದೆ. ಶುಲ್ಕವನ್ನು ತೋಟಗಾರಿಕೆ ಜಂಟಿ ನಿರ್ದೇಶಕರು, ಜಿ.ಪಂ ಬಾಗಲಕೋಟೆ ಇವರ ಹೆಸರಿನಲ್ಲಿ ಪಡೆಯಬೇಕು.

ಅರ್ಜಿ ನಮೂನೆಯನ್ನು ವೆಬ್‌ಸೈಟ್ http://horticulturedir.karnataka.gov.in ಮೂಲಕ ಮಾರ್ಚ 12 ರಿಂದ ಎಪ್ರೀಲ್ 13 ವರೆಗೆ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯೊಂದಿಗೆ ಅಗತ್ಯ ದಾಖಲೆಗಳ ಲಗತ್ತಿಸಿ ಎಪ್ರೀಲ್ 15 ರಂದು ಸಂಜೆ 5.30 ಗಂಟೆಯೊಳಗಾಗಿ ತೋಟಗಾರಿಕೆ ಜಂಟಿ ನಿರ್ದೇಶಕರು, ಬಾಗಲಕೋಟೆ,

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯ ವಲಯ ಬಾಗಲಕೋಟೆ ಕಚೇರಿಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಮೊನಂ.6361518830, 8050577457ಗೆ ಸಂಪರ್ಕಿಸಬಹುದಾಗಿದೆ.

ಪ್ರಶಸ್ತಿಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬಾಗಲಕೋಟೆ: ಮಾರ್ಚ 11 (ಕರ್ನಾಟಕ ವಾರ್ತೆ) : ಸಮಾಜ ಕಲ್ಯಾಣ ಇಲಾಖೆಯಿಂದ 2026-27ನೇ ಸಾಲಿಗೆ ನೀಡಲಾಗುತ್ತಿರುವ ಡಾ.ಬಾಬು ಜಗಜೀವನರಾಂ ಹಾಗೂ

ಡಾ.ಬಿ.ಆರ್.ಅಂಬೇಡ್ಕರ ಹೆಸರಿನಲ್ಲಿ ನೀಡಲಾಗುತ್ತಿರುವ ರಾಜ್ಯ ಮಟ್ಟದ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಮಾರ್ಚ 15 ವರೆಗೆ ವಿಸ್ತರಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಮೇಶ ಚವ್ಹಾಣ ಪ್ರಮಟಣೆಯಲ್ಲಿ ತಿಳಿಸಿದ್ದಾರೆ.

# ವಿಶ್ವ ಗ್ರಾಹಕರ ದಿನಾಚರಣೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ರಾಯಚೂರು ಇಲ್ಲಿನ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಮಾರ್ಚ್ 16ರ ಬೆಳಿಗ್ಗೆ 10 ಗಂಟೆಗೆ ನಗರದ ಅಂಬೇಡ್ಕರ್ ವೃತ್ತದ ಹತ್ತಿರದ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ವಿಶ್ವ ಗ್ರಾಹಕರ ದಿನಾಚರಣೆ-2026ರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುದ್ಧದ ಪರಿಸ್ಥಿತಿ : ಸಿಲಿಂಡರ್ ವಿತರಣೆಯಲ್ಲಿ ತೊಂದರೆ ಇಲ್ಲ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜಾಗತಿಕಮಟ್ಟದಲ್ಲಿನಡೆಯುತ್ತಿರುವ ಯುದ್ಧಪರಿಸ್ಥಿತಿಗಳಹಿನ್ನಲೆಯಲ್ಲಿಕೇಂದ್ರ ಸರಕಾರದ ಮಾರ್ಗಸೂಚಿಯನ್ವಯ ಎಲ್.ಪಿ.ಜಿ ಗ್ಯಾಸ್ ವಿತರಣೆಗೆ ಕ್ರಮಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು. ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಬುಧವಾರ ಜಿಲ್ಲೆಯ ಎಲ್.ಪಿ.ಜಿ ವಿತರಕರ ಹಾಗೂ ಸೇಲ್ಸ್ ಅಧಿಕಾರಿಗಳ ಜೊತೆ ಹಮ್ಮಿಕೊಂಡ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರಗಳ ಸಮರ್ಪಕ ಸಂಗ್ರಹವಿದ್ದು, ಸರಬರಾಜು ಸರಾಗವಾಗಿ ನಡೆಯುತ್ತಿದೆ. ಸಾರ್ವಜನಿಕರು ಯಾವುದೇ ರೀತಿಯ ಆಂತಕಕ್ಕೊಳಗಾಗದೆ, ಅಗತ್ಯವಿರುವಷ್ಟು ಸಿಲಿಂಡರ ಪಡೆಯುವಂತೆ ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದಾರೆ.

ಕೆಲವೊಂದು ಕಡೆಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ



ಮಾಹಿತಿಯಿಂದ ಜನರಲ್ಲಿ ಅನಗತ್ಯ ಗೊಂದಲ ಸೃಷ್ಠಿಯಾಗುತ್ತಿದೆ. ಆದರೆ ಜಿಲ್ಲೆಯಲ್ಲಿ ಅನೀಲ ಸರಬರಾಜು ವ್ಯವಸ್ಥೆ ಸಮರ್ಪಕವಾಗಿದ್ದು, ಯಾವುದ ಕೊರತೆ ಇರುವದಿಲ್ಲ. ಸಿಲಿಂಡರ ವಿತರಣಾ ಸಂಸ್ಥೆಗಳಿಗೂ ಸರಬರಾಜು ನಿರಂತರವಾಗಿ ನಡೆ-ಯುತ್ತಿದ್ದು, ಜನಸಾಮಾನ್ಯರು ಆತಂಕಪಡಬೇಕಾದ ಅಗತ್ಯವಿಲ್ಲ. ಅನಾವಶ್ಯಕವಾಗಿ ಹೆಚ್ಚಿನ ಪ್ರಮಾಣದಲ್ಲಿ ಸಿಲಿಂಡರ ಸಂಗ್ರಹಿಸಿಕೊಳ್ಳಬಾರದು. ಆದರೆ ಗೃಹ ಬಳಕೆಯ ಸಿಲೆಂಡರ ಬುಕ್ಕಿಂಗ್ ಅವಧಿಯನ್ನು 21 ದಿನದಿಂದ 25 ದಿನಗಳ ವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ತಿಳಿಸಿದರು. ಸಿಲಿಂಡರ ಪೂರೈಕೆಯನ್ನು ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆ ಹಾಗೂ ಇಂದಿರಾ ಕ್ಯಾಂಟಿನ್‌ಗಳಂತಹ ಅಗತ್ಯ ವಲಯಗಳಿಗೆ ಅನುಗುಣವಾಗಿ ಆದ್ಯತೆ ನೀಡಲು ಜಿಲ್ಲೆಯ ಎಲ್ಲ ಎಲ್‌ಪಿಜಿ ವಿತರಕರಿಗೆ ಸೂಚನೆ ನೀಡಿದರು. ಇದಲ್ಲದೇ ಸಾರ್ವಜನಿಕರ ಹಿತದೃಷ್ಠಿಯಿಂದ ಬಸ್, ರೈಲು ನಿಲ್ದಾಣಗಳಲ್ಲಿ ಇರುವ ಹೋಟೆಲ್ ಮತ್ತು ಕ್ಯಾಂಟಿನ್‌ಗಳಿಗೆ ಆದ್ಯತೆ ಮೇಲೆ ವಿತರಣೆ ಮಾಡಲು ತಿಳಿಸಿದಿರು. ಗೃಹ ಬಳಕೆಯ ಸಿಲಿಂಡರಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಕೆ ಮಾಡುವುದು ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮಕೈಗೊಳ್ಳಲಾಗುವುದು. ತಾಲೂಕಾ ಮಟ್ಟದ ತಂಡಗಳು ತಮ್ಮ ವ್ಯಾಪ್ತಿಯ ಹೋಟೆಲ್

ಎಲ್‌ಪಿಜಿ ಸೇಲ್ಸ್ ಅಧಿಕಾರಿಗಳ ವಿವರ

"ಜಿಲ್ಲೆಗೆ ಎಲ್‌ಪಿಜಿ ಸರಬರಾಜು ವಿತರಣೆಯಲ್ಲಿ ಹಾಗೂ ಬುಕ್ಕಿಂಗ್ ತಂತ್ರಾಂಶದಲ್ಲಿ ತೊಂದರೆ ಉಂಟಾದಲ್ಲಿ ಎಲ್‌ಪಿಜಿ ವಿತರಕರು ವಿವಿಧ ಕಂಪನಿಗಳ ಸೇಲ್ಸ್ ಅಧಿಕಾರಿಗಳ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ. ಎಚ್‌ಪಿಎಸ್ ಕಂಪನಿ ಸೇಲ್ಸ್ ಅಧಿಕಾರಿ ಅಸಿಸ್ ದುಬೆ (9425140800), ಬಿಪಿಸಿ ಕಂಪನಿಯ ಸೇಲ್ಸ್ ಅಧಿಕಾರಿ ಅಸಿಸ್ ಅಗರವಾಲ್ (9131115185), ಐಓಸಿ ಕಂಪನಿಯ ಸೇಲ್ಸ್ ಅಧಿಕಾರಿ ಅಶೋಕ ಕೋಳಿ (9958980557).

ಮತ್ತು ದಾಬಾಗಳಿಗೆ ನಿರಂತರ ದಾಳಿ ನಡೆಸಬೇಕು. ದಾಳಿಯಲ್ಲಿ ಅನಧಿಕೃತ ಸಿಲೆಂಡರ ಬಳಕೆ ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮಕೈಗೊಳ್ಳಲು ಸೂಚಿಸಿದರು. ಜಿಲ್ಲೆಯಲ್ಲಿ 4,78,596 ಗೃಹ ಬಳಕೆಯ ಕನೆಕ್ಷನ್‌ಗಳಿದ್ದು, ಇದರ ಜೊತೆಗೆ 74 ಸಾವಿರ ಎಲ್‌ಪಿಜಿ ಸಿಲಿಂಡರಗಳನ್ನು ಸರಕಾರದ ವಿವಿಧ ಯೋಜನೆಗಳಿಗೆ ನೀಡಲಾಗುತ್ತಿದೆ ಎಂದು ಸಭೆಗೆ ತಿಳಿಸಲಾಯಿತು.

ಜಿಲ್ಲೆಗೆ ಎಚ್.ಪಿ.ಸಿ, ಬಿಪಿಸಿ ಹಾಗೂ ಐಓಸಿ ಕಂಪನಿಗಳ ಮೂಲಕ ಎಲ್‌ಪಿಜಿ ಸಿಲಿಂಡರಗಳು ಸರಬರಾಜು ಆಗುತ್ತಿವೆ. ಕಂಪನಿಗಳು ಜಿಲ್ಲೆಗೆ ಪ್ರತಿ ತಿಂಗಳು ಸರಬರಾಜು ಮಾಡುವ ಎಲ್‌ಪಿಜಿ ಮಾಹಿತಿಯನ್ನು ಜಿಲ್ಲಾಡಳಿತಕ್ಕೆ ನೀಡಬೇಕು. ಬುಕ್ಕಿಂಗ್‌ನಲ್ಲಿ ತಾಂತ್ರಿಕ ದೋಷ ಇರುವ ಬಗ್ಗೆ ಎಲ್‌ಪಿಜಿ ವಿತರಕರು ಸಭೆಗೆ ತಿಳಿಸಿದಾಗ ತಾಂತ್ರಿಕ ದೋಷವನ್ನು ತಕ್ಷಣ ಸರಿಪಡಿಸುವ ಕೆಲಸವಾಗಬೇಕು. ವಿವಿಧ ಕಂಪನಿಯ ಸೇಲ್ಸ್ ಅಧಿಕಾರಿಗಳು ಅಗತ್ಯವಿರುವ ಅನಿಲ ಪೂರೈಕೆಗೆ ಕ್ರಮಕೈಗೊಳ್ಳಲು ತಿಳಿಸಿದರು.

ಸಭೆಯಲ್ಲಿ ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಸೇರಿದಂತೆ ಜಿಲ್ಲೆಯ ಎಲ್ಲ ಆಹಾರ ಶಿರಸ್ತೇದಾರರು ಹಾಗೂ ಆಹಾರ ನಿರೀಕ್ಷಕರು ಉಪಸ್ಥಿತರಿದ್ದರು.

# ತೋಟಗಾರಿಕೆ ತರಬೇತಿಗೆ ಅರ್ಜಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ತೋಟಗಾರಿಕೆ ಇಲಾಖೆಯಿಂದ 2026-27ನೇ ಸಾಲಿಗೆ ಜಿಲ್ಲೆಯ ಪುರುಷ ಮತ್ತು ಮಹಿಳಾ ರೈತ ಅಭ್ಯರ್ಥಿಗಳಿಗೆ ಬೆಳಗಾವಿ ಜಿಲ್ಲೆಯ ಹಿಡಕಲ್ ಡ್ಯಾಂ ತರಬೇತಿ ಕೇಂದ್ರದಲ್ಲಿ ಮೇ 2, 2026 ರಿಂದ ಫೆಬ್ರವರಿ 28, 2027 ವರೆಗೆ 10 ತಿಂಗಳ ತೋಟಗಾರಿಕೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಗೆ 15 ಅಭ್ಯರ್ಥಿಗಳ ಗುರಿ ನಿಗದಿಪಡಿಸಲಾಗಿದೆ. ಅರ್ಜಿ ಸಲ್ಲಿಸುವವರು ಎಸ್.ಎಸ್.ಎಲ್.ಸಿ ಪಾಸಾಗಿದ್ದು, ಅರ್ಜಿಯ ಜೊತೆಗೆ ಪಹಣಿ, ಹಿಡುವಳಿ ದೃಡೀಕರಣ ಪತ್ರ, ಎಸ್.ಎಸ್.ಎಲ್.ಸಿ ಅಂಕಪಟ್ಟಿ ನಕಲು

ಪ್ರತಿ ಹಾಗೂ ಪರಿಶಿಷ್ಟ ಜಾತಿ ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ ಮತ್ತು ಅರ್ಜಿ ಶುಲ್ಕವನ್ನು ಪೋಸ್ಟಲ್ ಆರ್ಡರ್, ಕೆ-2 ಪೇಮೆಂಟ್ ಚಲನ ಮುಖಾಂತರ ಇಲ್ಲವೇ ಅಕೌಂಟ್ ರಹಿತ ಡಿಸಿ ಮುಖಾಂತರ ಸಲ್ಲಿಸಬೇಕು. ಅರ್ಜಿ ಶುಲ್ಕ ಸಾಮಾನ್ಯ ಅಭ್ಯರ್ಥಿಗೆ 30 ರೂ. ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ 15 ರೂ. ಇರುತ್ತದೆ. ಶುಲ್ಕವನ್ನು ತೋಟಗಾರಿಕೆ ಜಂಟಿ ನಿರ್ದೇಶಕರು, ಜಿ.ಪಂ ಬಾಗಲಕೋಟೆ ಇವರ ಹೆಸರಿನಲ್ಲಿ ಪಡೆಯಬೇಕು.

ಅರ್ಜಿ ನಮೂನೆಯನ್ನು ವೆಬ್‌ಸೈಟ್ http://horticulturedir.karnataka.gov.in ಮೂಲಕ ಮಾರ್ಚ 12 ರಿಂದ ಎಪ್ರೀಲ್ 13 ವರೆಗೆ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯೊಂದಿಗೆ ಅಗತ್ಯ ದಾಖಲೆಗಳ ಲಗತ್ತಿಸಿ ಎಪ್ರೀಲ್ 15 ರಂದು ಸಂಜೆ 5.30 ಗಂಟೆಯೊಳಗಾಗಿ ತೋಟಗಾರಿಕೆ ಜಂಟಿ ನಿರ್ದೇಶಕರು, ಬಾಗಲಕೋಟೆ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯ ವಲಯ ಬಾಗಲಕೋಟೆ ಕಚೇರಿಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಮೊನಂ.6361518830, 8050577457ಗೆ ಸಂಪರ್ಕಿಸಬಹುದಾಗಿದೆ.

# ಸಂಸ್ಕೃತಿ, ಪರಂಪರೆಯ ರಾಯಭಾರಿಗಳು: ಜಿಲ್ಲಾಧಿಕಾರಿ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಪ್ರವಾಸಿ ಮಾರ್ಗದರ್ಶಿಗಳು ಕೇವಲ ಮಾಹಿತಿ ನೀಡುವವರಲ್ಲ, ಅವರು ನಮ್ಮ ಜಿಲ್ಲೆಯ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯನ್ನು ಜಗತ್ತಿಗೆ ಪರಿಚಯಿಸುವ ರಾಯಭಾರಿಗಳು, ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅವರು ಬಣ್ಣಿಸಿದರು. ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 87 ಪ್ರವಾಸಿ ಮಾರ್ಗದರ್ಶಿಗಳಿಗೆ ಶೂ ಮತ್ತು ಜಾಕೆಟ್‌ಗಳನ್ನು ವಿತರಿಸಿ ಅವರು ಮಾತನಾಡಿದರು. ಇಂದು ವಿತರಿಸಲಾದ ಸಮವಸ್ತ್ರಗಳು ಕೇವಲ ಸೌಲಭ್ಯವಲ್ಲ, ಬದಲಿಗೆ ಮಾರ್ಗದರ್ಶಿಗಳ ವೃತ್ತಿಪರತೆಯ ಗುರುತಾಗಿದೆ. ಸಮವಸ್ತ್ರ ಧರಿಸುವುದರಿಂದ ಪ್ರವಾಸಿಗರಲ್ಲಿ ವಿಶ್ವಾಸ ಮೂಡುವುದಲ್ಲದೆ, ಸುರಕ್ಷಿತ ಭಾವನೆ ಉಂಟಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಕಡ್ಡಾಯವಾಗಿ ಸಮವಸ್ತ್ರ ಬಳಸಬೇಕು. ಪ್ರವಾಸೋದ್ಯಮ ಕ್ಷೇತ್ರವು ದಿನೇ ದಿನೇ ಬೆಳೆಯುತ್ತಿದೆ. ಮಾರ್ಗದರ್ಶಿಗಳು ಸಹ ಕೇವಲ ಹಳೆಯ ಇತಿಹಾಸಕ್ಕೆ ಸೀಮಿತವಾಗದೆ, ಜಿಲ್ಲೆಯ ಹೊಸ ಪ್ರವಾಸಿ ತಾಣಗಳ ಬಗ್ಗೆಯೂ ನಿಖರ ಹಾಗೂ ಆಸಕ್ತಿದಾಯಕ ಮಾಹಿತಿ ಹೊಂದಿರಬೇಕು. ಈ ನಿಮ್ಮ ಆಸಕ್ತಿದಾಯಕ ಮಾರ್ಗದರ್ಶನ ಮತ್ತು ಜಿಲ್ಲೆಯ ಆತಿಥ್ಯದಿಂದ ಪ್ರಭಾವಿತರಾದ ಪ್ರವಾಸಿಗರು ಪುನಃ ಭೇಟಿ ನೀಡುವಂತಾಗಬೇಕು. ಆಗ ಮಾತ್ರ ಜಿಲ್ಲೆಯ ಪ್ರವಾಸೋದ್ಯಮದ ನೈಜ ಅಭಿವೃದ್ಧಿ ಸಾಧ್ಯ ಎಂದರು. ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರಾದ ಪ್ರಭುಲಿಂಗ ತಳಕೇರಿ ಹಾಗೂ ಇಲಾಖೆಯ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ತರಬೇತಿಗೆ : ಅರ್ಜಿ ಆಹ್ವಾನ

ವಿಜಯನಗರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ವತಿಯಿಂದ ವಿಜಯನಗರ ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತರಿಗೆ ಸ್ವಯಂ ಉದ್ಯೋಗ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಸ್ವಯಂ ಉದ್ಯೋಗ ತರಬೇತಿ ಅವಧಿಯಲ್ಲಿ 34 ದಿನಗಳ ಬ್ಯೂಟಿಪಾರ್ಲರ್ ತರಬೇತಿ ನೀಡಲಾಗುದು. ಗ್ರಾಮೀಣ ಅಭ್ಯರ್ಥಿಗಳಿಗೆ ಮೊದಲ ಆಧ್ಯತೆ ನೀಡಲಾಗುವುದು. ತರಬೇತಿ ವೇಳೆಯಲ್ಲಿ ಊಟದ ವ್ಯವಸ್ಥೆಯೂ ಸಹ ಒದಗಿಸಲಾಗುತ್ತದೆ.

ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆ: ಅರ್ಜಿದಾರರು 18 ವರ್ಷದ ಮೇಲ್ಪಟ್ಟಿರಬೇಕು. 50 ವರ್ಷಗಳ ಮೀರಿರಬಾರದು. ಕನಿಷ್ಠ 8ನೇ ತರಗತಿ ವಿದ್ಯಾಭ್ಯಾಸ ಹೊಂದಿರಬೇಕು. ಜಿಲ್ಲೆಯ ಗ್ರಾಮೀಣ ಭಾಗದವರಾಗಿರುವುದರ ಜತೆಗೆ ಸ್ವಯಂ ಉದ್ಯೋಗದಲ್ಲಿ ಆಸಕ್ತಿ ಹೊಂದಿರಬೇಕು. ತರಬೇತಿಯು ಇದೇ ಮಾರ್ಚ್ 10 ರಿಂದ ಆರಂಭವಾಗಲಿದ್ದು, ಮಾರ್ಚ್ 08 ರಂದು ಸಂದರ್ಶನ ದಿನಾಂಕ ನಿಗಧಿಪಡಿಸಲಾಗಿದೆ.

# ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಬಂದ್ ಯಶಸ್ವಿ

• ಮಲ್ಲಮ್ಮ ನುಡಿ ವಾರ್ತೆ, ಹುಣಸಗಿ

ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಮಾದಿಗ ಸಂಘಟನೆಗಳು ಕರೆ ನೀಡಿದ್ದ ಹುಣಸಗಿ ಬಂದ್ ಯಶಸ್ವಿಯಾಯಿತು. ಪಟ್ಟಣದ ಸಾರ್ವಜನಿಕರು ಹಾಗೂ ವ್ಯಾಪಾರಿಗಳು ಸ್ವಯಂಪ್ರೇರಿತವಾಗಿ ಬಂದ್‌ಗೆ ಬೆಂಬಲ ನೀಡಿದ ಪರಿಣಾಮ ಪಟ್ಟಣದ ಅಂಗಡಿಮಳಿಗೆಗಳು ಹಾಗೂ ಸಾರಿಗೆ ಸೇವೆಗಳು ಸ್ಥಗಿತಗೊಂಡಿದ್ದವು. ಔಷಧ ಅಂಗಡಿಗಳು ಮತ್ತು ತುರ್ತು ಸೇವೆಗಳು ಮಾತ್ರ ಎಂದಿನಂತೆ ಕಾರ್ಯನಿರ್ವಹಿಸಿದವು.

ಮಹಾಂತಸ್ವಾಮಿ ವೃತ್ತದಿಂದ ಆರಂಭವಾದ ಪ್ರತಿಭಟನೆ ತಮಟೆ ಸದ್ದಿನೊಂದಿಗೆ ವೀರರಾಣಿ ಚನ್ನಮ್ಮ ವೃತ್ತ ಮಾರ್ಗವಾಗಿ ಡಾ. ಬಾಬು ಜಗಜೀವನರಾಂ ವೃತ್ತದವರೆಗೆ ಸಾಗಿತು. ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಒಳಮೀಸಲಾತಿ ತಕ್ಷಣ ಜಾರಿಗೊಳಿಸುವಂತೆ ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಸಮಾಜದ ಮುಖಂಡ ಹಾಗೂ ನ್ಯಾಯವಾದಿ ನಂದಕುಮಾರ ಬಾಂಬೇಕರ್, ಹಲವು ವರ್ಷಗಳಿಂದ ಮಾದಿಗ ಸಮುದಾಯ ಒಳಮೀಸಲಾತಿಗಾಗಿ ಹೋರಾಟ ನಡೆಸುತ್ತಿದ್ದು, ಜನಸಂಖ್ಯೆ ಅನುಗುಣವಾಗಿ ಶೇ.6 ಮೀಸಲಾತಿ



ನೀಡಬೇಕು ಎಂದು ಒತ್ತಾಯಿಸಿದರು.

ಯುವ ಮುಖಂಡ ಬಸವರಾಜ್ ಕಾಮನಟಗಿ ಮಾತನಾಡಿ, ಎಲ್ಲ ಕ್ಷೇತ್ರಗಳಲ್ಲಿಯೂ ಒಳಮೀಸಲಾತಿ ಜಾರಿಗೊಳಿಸಬೇಕು ಹಾಗೂ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿದರು. ಹಿರಿಯ ಮುಖಂಡ ಅಂಬ್ಲಪ್ಪಹಳ್ಳಿ ಸರ್ಕಾರದ ವಿಳಂಬ ನೀತಿಯನ್ನು ಖಂಡಿಸಿದರು.

ನಂತರ ಮುಖ್ಯಮಂತ್ರಿಗಳಿಗೆ ಬರೆದ ಮನವಿಯನ್ನು ತಹಶೀಲ್ದಾರ ಎಂ. ಬಸವರಾಜ್ ಅವರಿಗೆ ಸಲ್ಲಿಸಲಾಯಿತು. ಸಿಪಿಐ ರವಿಕುಮಾರ ಹಾಗೂ ಪಿಎಸ್‌ಐ ರಾಹುಲ್ ಪವಾಡೆ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದ್ದು, ಯಾವುದೇ ಅಹಿತಕರ ಘಟನೆಗಳಿಲ್ಲದೆ ಪ್ರತಿಭಟನೆ ಶಾಂತಿಯುತವಾಗಿ ನಡೆಯಿತು.

ಸಮಾಜದ ಮುಖಂಡರಾದ ತಿಪ್ಪಣ್ಣ ಕಡಿಮನಿ, ಮಾನಪ್ಪ ಕಟ್ಟಿಮನಿ, ಶಿವಪ್ಪ ಸದಬ, ನಂದಪ್ಪ ಪೀರಾಪುರ, ಮಲ್ಲಣ್ಣ ದೊಡ್ಡಮನಿ ವಜ್ಜಲ್, ಶಾಂತಪ್ಪ ಹಗರಟಗಿ, ಬಸವರಾಜ್ ದೊಡ್ಡಮನಿ ಕೊಡೇಕಲ್, ಸಿದ್ದು ಮೇಲಿನಮನಿ, ಮಹಾಂತೇಶ ದೊಡ್ಡಮನಿ, ನಾಗರಾಜ್ ಕೊಡೇಕಲ್, ಪವಾಡೆಪ್ಪ ಮ್ಯಾಗೇರಿ, ಬಸಪ್ಪ ಕಟ್ಟಿಮನಿ ಕೊಡೇಕಲ್, ಸಂಗಣ್ಣ ಅಗ್ನಿ, ಹುಲಗಪ್ಪ ಬೈಲಕುಂಟಿ, ದೇವಪ್ಪ ಮಂಜಲಾಪುರ, ಬಸವರಾಜ್ ಹಳ್ಳಿ, ಯಮನಪ್ಪ ಚನ್ನೂರ, ಭೀಮಣ್ಣ ಬಲಶೆಟ್ಟಿಹಾಳ, ಮಹೇಶ ಚನ್ನೂರು, ಪ್ರಭು ಕಚಕನೂರು, ಮಂಜು ನಾರಾಯಣಪುರ, ಭೀಮಣ್ಣ ಹೆಬ್ಬಾಳ, ಬಸವರಾಜ್ ಹಗರಟಗಿ, ಲೋಟಪ್ಪ ಗ್ಯಾಂಗಮನ್, ಮಲ್ಲು ವಜ್ಜಲ್, ನಿಂಗರಾಜ್ ದ್ಯಾಮನಾಳ, ದೇವರಾಜ್ ಹೊರಹಟ್ಟಿ, ರಾಜಪ್ಪ ಮಾಳನೂರು, ಹರೀಶ ಸದಬ, ತಾಯಪ್ಪ ಕನ್ನೆಳ್ಳಿ, ಭೀಮಣ್ಣ ಹುಬ್ಬಳ್ಳಿ, ಮಾನಪ್ಪ ಯಡಳ್ಳಿ, ದಾನಪ್ಪ ಕಡಿಮನಿ, ಪರಮಣ್ಣ ಬೈಲಾಪುರ, ಸಿದ್ದು ಬಾವಿಮನಿ, ಸಂಗಮೇಶ ಮಾಸ್ತರ ಕೊಡೇಕಲ್, ಹಣಮಂತ ಬೊಮ್ಮನಳ್ಳಿ ಸೇರಿದಂತೆ ಅನೇಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಕಾಂಗ್ರೇಸ ವಿರುದ್ಧ 12 ರಂದು ಬೃಹತ್ ಪ್ರತಿಭಟನೆ: ಮೂರ್ತಿ

ಪೀಣ್ಯ ದಾಸರಹಳ್ಳಿ.

ಒಳ ಮೀಸಲಾತಿಯಿಲ್ಲದೇ ಉದ್ಯೋಗ ಭರ್ತಿ ಮಾಡುವ ಕಾಂಗ್ರೆಸ್ ಸರ್ಕಾರದ ಮಹಾದ್ರೋಹ ಖಂಡಿಸಿ 12 ರಂದು ಗುರುವಾರ ಫ್ರೀಡಂ ಪಾರ್ಕ್, ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ದಲಿತ ಸಂಘರ್ಷ ಸಮಿತಿಯ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಹೆಗ್ಗನಹಳ್ಳಿಯ ಜಿ ಮೂರ್ತಿ ಪತ್ರಿಕಾ ಘೋಷ್ಠಿಯಲ್ಲಿ ಹೇಳಿದರು.

ಕಳೆದ 35 ವರ್ಷಗಳಿಂದ ಮೀಸಲಾತಿಯ ಹೋರಾಟದಲ್ಲಿ



ಸಕ್ರಿಯರಾಗಿ ಪಾಲ್ಗೊಂಡಿದ್ದು ಈಗಾಗಲೇ ಹೆಗ್ಗನಹಳ್ಳಿ, ಪೀಣ್ಯ ದಾಸರಹಳ್ಳಿ ಭಾಗದಲ್ಲಿರುವ ಸಾವಿರಾರು ಜನಸಂಖ್ಯೆಯಲ್ಲಿರುವ ದಲಿತರಿಗೆ ಕರಪತ್ರ ಹಂಚಿ ಮನವರಿಕೆ ಮಾಡಿ ಕೊಟ್ಟಿದ್ದು ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದ್ದು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿಲಿದ್ದಾರೆ ಜಿ.ಮೂರ್ತಿ ಹೇಳಿದರು.

ಒಳ ಮೀಸಲಾತಿ ವಿಧೇಯಕವು ರಾಜ್ಯಪಾಲರ ಸಹಿ ಪಡೆದು ಅನುಮೋದನೆಗೊಂಡಿದೆ ಎಂದು ಸಂತೋಷಪಡುವ ಸಂದರ್ಭದಲ್ಲಿ ಒಳ ಮೀಸಲಾತಿ ಅನ್ವಯವಾಗದಂತೆ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂಬ ಫೆಬ್ರವರಿ 26ರ ಸಚಿವ ಸಂಪುಟದ ತೀರ್ಮಾನ ಸಂವಿಧಾನ ಮತ್ತು ಸಾಮಾಜಿಕ ನ್ಯಾಯಕ್ಕೆ ಬಗೆದ ಘೋರ ಅನ್ಯಾಯವಾಗಿದೆ. ಆ ಮೂಲಕ 35 ವರ್ಷಗಳ ಒಳ ಮೀಸಲಾತಿ ಹೋರಾಟಕ್ಕೆ ಮಹಾದ್ರೋಹ ಎಸಗಲಾಗಿದೆ.

# ಪ್ರಶಸ್ತಿಗೆ ಅರ್ಜಿ ಸಲ್ಲಿಕೆ, ಅವಧಿ ವಿಸ್ತರಣೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಸಮಾಜ ಕಲ್ಯಾಣ ಇಲಾಖೆಯಿಂದ 2026-27ನೇ ಸಾಲಿಗೆ ನೀಡಲಾಗುತ್ತಿರುವ ಡಾ.ಬಾಬು ಜಗಜೀವನರಾಂ ಹಾಗೂ ಡಾ.ಬಿ.ಆರ್. ಅಂಬೇಡ್ಕರ ಹೆಸರಿನಲ್ಲಿ ನೀಡಲಾಗುತ್ತಿರುವ ರಾಜ್ಯ ಮಟ್ಟದ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಮಾರ್ಚ 15 ವರೆಗೆ ವಿಸ್ತರಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಮೇಶ ಚವ್ಹಾಣ ಪ್ರಮಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯುತ್ ವ್ಯತ್ಯಯ

ರಾಯಚೂರು ಇಲ್ಲಿನ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ವ್ಯಾಪ್ತಿಯ ಮಾಟಮಾರಿ 110/11 ಕೆವಿ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಮಾರ್ಚ್ 12ರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ಮಟಮಾರಿ, ಗಾರಲದಿನ್ನಿ, ಆರೋಳ್ಳಿ, ನಾಗಲಾಪೂರ, ಪುರತಿಪ್ಲಿ, ಹೀರಾಪುರ, ಗಟ್ಟುಬಿಚ್ಚಾಲಿ, ಕಟಕ್ನೂರ್, ರಾಜೋಳ್ಳಿ, ಜುಕುರ್ ವ್ಯಾಪ್ತಿಯಲ್ಲಿ

ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಐಟಿಐ : ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ನಗರದ ಜಂಬುನಾಥಹಳ್ಳಿ ರಸ್ತೆಯಲ್ಲಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದ ಅಭ್ಯರ್ಥಿಗಳಿಂದ 2025ನೇ ಸಾಲಿಗೆ ಖಾಸಗಿ ಅಭ್ಯರ್ಥಿಯಾಗಿ ಐಟಿಐ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಈ ಸಂಬಂಧ ನೊಂದಾಯಿತ ಉದ್ಯಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಸಕ್ತ ಅರ್ಹ ಅಭ್ಯರ್ಥಿಗಳು ಆಫ್‌ಲೈನ್‌ನಲ್ಲಿ ಮಾರ್ಚ್ 20ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರನ್ನು ಅಥವಾ ದೂ.ಸಂ: 9448173151 ಗೆ ಸಂಪರ್ಕಿಸಬದುದು ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುಂದುಕೊರತೆ ಸಭೆ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಜೆಸ್ಕಾಂ ನಿಂದ ನಗರದ ಕಾರ್ಯ ಮತ್ತು ಪಾಲನೆ ವಿಭಾಗ ಕಚೇರಿಯಲ್ಲಿ ಕಾರ್ಯ ಮತ್ತು ಪಾಲನೆ ಅಧೀಕ್ಷಕ ಅಭಿಯಂತರರ ಅಧ್ಯಕ್ಷತೆಯಲ್ಲಿ ಮಾರ್ಚ್ 13 ರಂದು ಮಧ್ಯಾಹ್ನ 3 ಗಂಟೆಗೆ ಗ್ರಾಹಕರ ಕುಂದು ಕೊರತೆ ಸಭೆ ಆಯೋಜಿಸಲಾಗಿದೆ. ನಗರ ಉಪ-ವಿಭಾಗ 1 ಮತ್ತು 2 ಹಾಗೂ ಗ್ರಾಮೀಣ ಉಪವಿಭಾಗ ವ್ಯಾಪ್ತಿಯಲ್ಲಿ ಬರುವ ಜೆಸ್ಕಾಂ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಕುಂದು ಕೊರತೆ ಪರಿಹರಿಸಿಕೊಳ್ಳಬಹುದು ಎಂದು ಜೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂಗಡಿ ನಿಯಮ ಉಲ್ಲಂಘನೆ



**ಸಿಂಧನೂರು:** ತಾಲ್ಲೂಕಿನ ಅಂಗಡಿ ಸಂಖ್ಯೆ 99–ಗುಂಜಳ್ಳಿ ಕ್ಯಾಂಪ್ ನ್ಯಾಯಬೆಲೆ ಅಂಗಡಿಯಲ್ಲಿ ಹೆಚ್ಚುವರಿ ದಾಸ್ತಾನು ಇರುವ ಕುರಿತು ಬಂದಿರುವ ಬಾತ್ಮೀ ಮೇರೆಗೆ ದಿನಾಂಕ 11.03.2026 ರಂದು ನ್ಯಾಯಬೆಲೆ ಅಂಗಡಿಗೆ ಆಹಾರ ಶಿರಸ್ತೇದಾರರು ಭೇಟಿ ನೀಡಿ ಪರಿಶೀಲಿಸಿದರು.

ಅಂಗಡಿ ಸಂಖ್ಯೆ 99 ಗುಂಜಳ್ಳಿ ಕ್ಯಾಂಪ್ ನ್ಯಾಯಬೆಲೆ ಅಂಗಡಿ ಹಚ್ಚುವರಿ ಲಗತ್ತು ರಾಜಶೇಖರ ತುರ್ವಿಹಾಳ ಅಂಗಡಿಗೆ ಇದ್ದು ಅಂಗಡಿ ಸಂಖ್ಯೆ 99– ಗುಂಜಳ್ಳಿ ಕ್ಯಾಂಪ್ ನ್ಯಾಯಬೆಲೆ ಅಂಗಡಿಯಲ್ಲಿ ಪರಿಶೀಲನಾ ಸಮಯದಲ್ಲಿ ನ್ಯಾಯಬೆಲೆ ಅಂಗಡಿ ನಾಮಫಲಕ ಇರುವುದು ಕಂಡಿರುತ್ತದೆ, ದಾಸ್ತಾನು ಫಲಕ ಕಾಲೋಚಿತ ಗೊಳಿಸದಿರುವುದು ಹಾಗೂ ಜಾಗೃತ ಸಮಿತಿ ಸದಸ್ಯರ ವಿವರಗಳನ್ನು ಪ್ರಚಾರ ಪಡಿಸದಿರುವುದು ಕಂಡುಬಂದಿರುತ್ತದೆ, ಅದೇರೀತಿಯಾಗಿ ದೈಹಿಕ ದಾಸ್ತಾನು ಪರಿಶೀಲಿಸಲಾಗಿ ಒಟ್ಟು 255 ಚೀಟಲಗಳ ಅಕ್ಕಿ ಇದ್ದು ಅಂದಾಜು 127.50 ಕ್ವಿಂಟಾಲ್ ಇರುತ್ತದೆ.

ಸದರಿ ದಿನದ ಅಂಗಡಿಯ ಆನ್‌ಲೈನ್ ದಾಸ್ತಾನು ಪರಿಶೀಲಿಸಲಾಗಿ ಪ್ರಾರಂಭಿಕ ದಾಸ್ತಾನು ಒಟ್ಟು 81.990 ಅಕ್ಕಿ ಇರುತ್ತದೆ, ದೈಹಿಕ ದಾಸ್ತಾನು ಹಾಗೂ ಆನ್‌ಲೈನ್ ದಾಸ್ತಾನು ತಾಳೆ ಮಾಡಲಾಗಿ ಒಟ್ಟು 45.51 ಕ್ವಿಂಟಾಲ್ ಅಕ್ಕಿ ಹೆಚ್ಚುವರಿ ಇರುವುದು ಕಂಡುಬಂದಿರುತ್ತದೆ.

ಪಂಚನಾಮೆ ಸಮಯದಲ್ಲಿ ಹಾಗೂ ದಾಖಲೆಗಳ ಪರಿಶೀಲನಾ ಸಮಯದಲ್ಲಿ ಈ ಕೆಳಗಿನ ಅಂಶಗಳು ಕಂಡುಬಂದಿರುತ್ತವೆ. ದಾಸ್ತಾನು ಫಲಕ ಕಾಲೋಚಿತ ಗೊಳಿಸಿರುವುದಿಲ್ಲ.ಜಾಗೃತ ಸಮಿತಿ ಸದಸ್ಯರ ವಿವರಗಳನ್ನು ಪ್ರಚುರಪಡಿಸಿರುವುದಿಲ್ಲ.

ದೈಹಿಕ ದಾಸ್ತಾನು 127.50 ಕ್ವಿಂಟಾಲ್ ಆನ್‌ಲೈನ್ ದಾಸ್ತಾನು 81.990 ಇದ್ದು ಅಂದಾಜು 45.9 ಕ್ವಿಂಟಾಲ್ ಹೆಚ್ಚುವರಿ ಇರುವುದು ಕಂಡುಬಂದಿರುತ್ತದೆ. ಸದರಿ ನ್ಯಾಯಬೆಲೆ ಅಂಗಡಿ ಸಂಚಾಲಕರು ಕರ್ನಾಟಕ ಅಗತ್ಯವಸ್ತುಗಳ ಕಾಯ್ದೆ(ಸಾವಿಪ) ನಿಯಂತ್ರಣ ಆದೇಶ 2016 ಕ್ಲಾಜ್ 4(3) ನಲ್ಲಿನ ಷರತ್ತುಗಳು ಹಾಗೂ ನಿಯಮಗಳ ಕ್ರಮ ಸಂಖ್ಯೆ 7,8, ಮತ್ತು 11 ನ್ನು ಉಲ್ಲಂಘನೆ ಮಾಡಿರುವುದು ಮೇಲ್‌ನೋಟಕ್ಕೆ ಕಂಡುಬಂದಿದೆ. ಈ ಹಿನ್ನಲೆಯಲ್ಲಿ, ವರದಿಯನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ ಎಂದು ಆಹಾರ ಶಿರಸ್ತೇದಾರ್ ಆನಂದ ಮೋಹನ್ ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದರು.

# ವಿಶಾಲಾಕ್ಷಮ್ಮ ಹಿರೇಮಠ ನಿಧನ



**ಕಂಪ್ಲಿ:** ಪಟ್ಟಣದ ವೀರಶೈವ ಜಂಗಮ ಸಮಾಜದ ಪ್ರಮುಖರು, ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಲಿಂ.ಶ್ರೀ ಶ್ರೀ ಶ್ರೀ 1008 ಮರುಳಸಿದ್ಧ ಶಿವಾಚಾರ್ಯರ ಪೂರ್ವಾಶ್ರಮದ ಹಿರಿಯ ಸಹೋದರಿ, ಸಚ್ಚಿದಾನಂದ ಹಿರೇಮಠ್ ದೃಶ್ಯ ಮಾಧ್ಯಮ ವರದಿಗಾರರವರ ತಾಯಿ ವಿಶಾಲಾಕ್ಷಮ್ಮ ಹಿರೇಮಠ(85)ಅನಾರೋಗ್ಯದಿಂದ ಮಂಗಳವಾರ ನಿಧನರಾದರು. ಮೃತರಿಗೆ ಮೂವರು ಪುತ್ರರು, ಒಬ್ಬ ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 12ಗಂಟೆಗೆ ಕಂಪ್ಲಿಯ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದ. ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದು, ಬಳ್ಳಾರಿಯ ವಿಮ್ಸ್‌ನ ನಿತ್ಯಜ್ಯೋತಿ ನೇತ್ರ ಭಂಡಾರಕ್ಕೆ ಮರಣೋತ್ತರ ನೇತ್ರದಾನ ಮಾಡಿದ್ದಾರೆ.

# ಜನರನ್ನು ಕಾಂಗ್ರೆಸ್ ವಂಚಿಸುತ್ತಿದೆ



**ಬೆಂಗಳೂರು:** ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಜ್ಯದಲ್ಲಿ ನಡೆದ ನೇಮಕಾತಿಗಳನ್ನು ಕಾಂಗ್ರೆಸ್ ಸರ್ಕಾರ ತಾವು ಮಾಡಿದ್ದು ಎಂದು ಹೇಳಿಕೊಳ್ಳುತ್ತಿದೆ. ನಮ್ಮ ಸರ್ಕಾರದ ಸಾಧನೆಯನ್ನು ಅವರ ಸಾಧನೆಗಳಂತೆ ಪಟ್ಟಿ ಮಾಡಿ ಇಡೀ ರಾಜ್ಯದ ಜನರನ್ನು ವಂಚನೆ ಮಾಡುತ್ತಿದೆ ಎಂದು ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆರೋಪಿಸಿದರು.

ವಿಧಾನಸೌಧ ಬಳಿ ಇಂದು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ನೇಮಕಾತಿ ಸಂಬಂಧ ಸರ್ಕಾರ ಸದನಕ್ಕೆ ತಪ್ಪು ಮಾಹಿತಿಯನ್ನು ಮುಖ್ಯಮಂತ್ರಿಗಳು ಹಾಗೂ ಸಚಿವರು ನೀಡುತ್ತಿರುವುದು ವಿಪರ್ಯಾಸ. ಸರ್ಕಾರವೇ ಜನರಿಗೆ ವಂಚನೆ ಮಾಡಲು ಮುಂದಾದರೆ ಯಾರು ಉತ್ತರ ಕೊಡ್ತಾರೆ, ನ್ಯಾಯ ಕೊಡ್ತಾರೆ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಯುವಕರಿಗೆ ಉದ್ಯೋಗ ನೀಡದೆ ಸರ್ಕಾರ ಅನ್ಯಾಯ, ಮೋಸ ಮಾಡಿದೆ. ಹುದ್ದೆ ಯಾಕೆ ತುಂಬಿಲ್ಲ ಎಂಬುದನ್ನು ವಿಧಾನ ಪರಿಷತ್‌ನಲ್ಲಿ ನಿಲುವಳಿ ಸೂಚನೆ ಮೂಲಕ ಪ್ರಶ್ನೆ ಮಾಡಿದ್ದೇವೆ ಎಂದು ನುಡಿದರು.

ರಾಜ್ಯದ ವಿದ್ಯಾವಂತ ನಿರುದ್ಯೋಗಿಗಳ ಪರವಾಗಿ ಬಿಜೆಪಿ ನಿಲ್ಲಲಿದೆ. ಸರ್ಕಾರದ ಕಿವಿ ಹಿಂಡುವ ಕೆಲಸವನ್ನೂ ಮಾಡುತ್ತೆ. ಈ ಸರ್ಕಾರದಿಂದ ದಲಿತರಿಗೂ ದೋಖಾ ಆಗಿದೆ, ಯುವಜನರಿಗೂ ದೋಖಾ ಆಗಿದೆ, ವಿದ್ಯಾರ್ಥಿಗಳಿಗೆ ದೋಖಾ ಆಗಿದೆ. ಒಟ್ಟಾರೆ ಇದೊಂದು ದೋಖಾ ಸರ್ಕಾರ ಎಂದು ಹೇಳಿದರು.

ಇಡೀ ರಾಜ್ಯದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾದಂತೆ ಈ ಸರ್ಕಾರ, ಅವರನ್ನು ವಂಚಿಸುವ ಕೆಲಸವನ್ನು ಮಾಡ್ತಾ ಇದೆ. ರಾಜ್ಯದಲ್ಲಿ ಖಾಲಿ ಇರುವ 2.84 ಲಕ್ಷ ಹುದ್ದೆಗಳನ್ನು ತುಂಬಬೇಕು ಎಂದು ಆಗ್ರಹಿಸಿ ಬಿಜೆಪಿ ರಾಜ್ಯದಲ್ಲಿ ಯುವಕರ ಪರವಾಗಿ ಹೋರಾಟ ಮಾಡುತ್ತಿದೆ ಎಂದು ವಿವರಿಸಿದರು. ಧಾರವಾಡದಲ್ಲಿ ಕಳೆದ ತಿಂಗಳು ಉದ್ಯೋಗಕ್ಕಾಗಿ ಬೃಹತ್ ಪ್ರತಿಭಟನೆ ನಡೆಯಿತು. 50 ಸಾವಿರಕ್ಕೂ ಹೆಚ್ಚು ಯುವಕರು ಬೀದಿಗಿಳಿದು ಪ್ರತಿಭಟನೆ ಮಾಡಿದಾಗ ನಾನೂ ಬೆಂಬಲ ನೀಡಿದ್ದೆ. ಬಿಜೆಪಿ ಹೋರಾಟಕ್ಕೆ ಧುಮುಕಿದ ಕೂಡಲೇ ಸರ್ಕಾರ ತರಾತುರಿಯಲ್ಲಿ 56 ಸಾವಿರ ಹುದ್ದೆ ಭರ್ತಿ ಮಾಡುತ್ತೇವೆ ಎಂದು ಹೇಳಿ ಒಂದು ತಿಂಗಳ ಗಡುವಿನ ವಾಗ್ದಾನ ನೀಡಿದ್ದರು ಎಂದು ನೆನಪಿಸಿದರು. ಬೆಳಗಾವಿ ಅಧಿವೇಶನದಲ್ಲಿ ನಾವು ಪ್ರಶ್ನೆ ಮಾಡಿದಾಗ 30 ರಿಂದ 35 ಸಾವಿರ ಹುದ್ದೆ ತುಂಬಿದ್ದೇವೆ ಅಂತ ಸದನಕ್ಕೆ ತಪ್ಪು ಮಾಹಿತಿ ನೀಡಿದ್ದರು. 2025 ರ ರವರೆಗೆ ಈ ಕಾಂಗ್ರೆಸ್ ಸರ್ಕಾರ ಒಂದು ಹುದ್ದೆಯನ್ನೂ ತುಂಬಿರಲಿಲ್ಲ. ನೇಮಕಾತಿ ಬಗ್ಗೆ ಕೇಳಿದರೆ ಪರೀಕ್ಷೆ ನಡೆಯುತ್ತಿದೆ, ಪರೀಕ್ಷೆ ನಿಗದಿಯಾಗಿದೆ ಎಂಬ ಬೇರೆ ಬೇರೆ ಸಬೂಬನ್ನು ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನೆ ಮಾಡಬೇಕು ಎಂಬ ಒಂದೇ ಕಾರಣದಿಂದ ರಸ್ತೆಯಲ್ಲಿ ಅಡುಗೆ ಮಾಡ್ತ ಇದ್ದಾರೆ. ಅವರಿಗೆ ಮನೆಯಲ್ಲಿ ಅಡುಗೆ ಮಾಡಿ ಗೊತ್ತಿಲ್ಲ. ಅಡುಗೆ ಅನಿಲ ಸಮಸ್ಯೆಯನ್ನು ರಾಜಕೀಯಕ್ಕೆ ಬಳಸಿಕೊಂಡ ಪ್ರಜ್ಞಾಹೀನ ಕಾಂಗ್ರೆಸ್ ಇದು ಎಂದು ದೂರಿದರು.

# ಸರ್ಕಾರದ ಕೆಲಸ: ಕೂಲಿಕಾರ್ಮಿಕರು ಮಾದರಿ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ನಿತ್ಯ ಕಷ್ಟಪಟ್ಟು ಬೆವರು ಹರಿಸಿ ದುಡಿಯುವ ಆಟೋಚಾಲಕರು, ಪೇಂಟಿಂಗ್ ಕಾರ್ಮಿಕರು, ಸೆಂಟ್ರಿಂಗ್ ಕೆಲಸಗಾರರನ್ನೊಳಗೊಂಡ ಸಮಾನ ಮನಸ್ಕ ಮುಸ್ಲಿಂ ಗೆಳೆಯರ ಬಳ 'ಸರ್ಕಾರ' ಮಾಡಬೇಕಾದ ಕೆಲಸವನ್ನು ಮಾಡಿ ಅಪೂರ್ವ ಸಮಾಜ ಸೇವೆಗೆ ಸಾಕ್ಷಿಯಾಗಿ ನಿಂತಿದೆ.

ಬಡವರಿಗಾಗಿ ಮಿಡಿಯುವ ಹೃದಯಹೊಂದಿದ ಈ ತಂಡದ ಸದಸ್ಯರು ತಮಗೆ ಬರುವ ಅಲ್ಪ ಕೂಲಿಯಲ್ಲಿಯೇ ಒಂದಿಷ್ಟು ಹಣವನ್ನು ಬಡವರಿಗಾಗಿ ಮೀಸಲಿರಿಸಿ ನೆರವಾಗುತ್ತಿರುವುದು ಶಹಾಪೇಟಿಯ ಮುಸ್ಲಿಂ ಬಿಜಾಪುರ ಯೂತ್ ಕವರೇಜ್ ತಂಡವು ಹಿಂದೂ ವಿಧವೆಗೆ ಮನೆ ನಿರ್ಮಾಣ ಮಾಡಿ ಮಾದರಿಯಾಗಿದ್ದಾರೆ.

ಶಹಾಪೇಟಿ ಭಾಗದಲ್ಲಿ ಒಂದು ಬಡ ಕುಟುಂಬ, ಕೆಲವೇ ದಿನಗಳ ಹಿಂದಷ್ಟೇ ಆ ಕುಟುಂಬದ ಯಜಮಾನ ಇಹಲೋಕ ತ್ಯಜಿಸಿದ್ದಾನೆ, ಅತ್ತ ಎರಡು ಮಕ್ಕಳನ್ನು ಕಟ್ಟುಕೊಂಡು ಪಾರ್ಶ್ವವಾಯು ಪೀಡಿತರಾಗಿ ಮುರುಕ ಮನೆಯಲ್ಲಿ ಮರುಕಮಯವಾದ ಜೀವನ ಸಾಗಿಸುತ್ತಿದ್ದ ವಿಧವೆಯ ಕಷ್ಟನೋಡಿದರೆ ಪ್ರತಿಯೊಬ್ಬರ ಕಣ್ಣಾಲಿಗಳಲ್ಲಿ ನೀರು ಜಿನುಗುವುದು ಸತ್ಯ.

ಬಡ ವಿಧವೆಯ ಕಷ್ಟ ನೋಡಲಾಗದೇ ಈ ಶಹಾಪೇಟಿಯ ತಂಡ ಬಿಜಾಪುರ ಯೂತ



ಕವರೇಜ್ ತಂಡವು ಬಡ ವಿಧವೆಗೆ ಒಂದೂವರೆ ಲಕ್ಷ ರೂ. ಖರ್ಚು ಮಾಡಿ ಕಚ್ಚಾ ಮನೆಯನ್ನು ನಿರ್ಮಿಸಿ ಹಸ್ತಾಂತರಿಸಿದೆ.

ಶಹಾಪೇಟಿ ಬಡಾವಣೆಯಲ್ಲಿ ಬಡ ವಿಧವೆ ಮಹಿಳೆ ಕಸ್ತೂರಿ ರೂಡಗಿ ಸಂಕಷ್ಟದ ದಿನಗಳನ್ನು ಎದುರಿಸುತ್ತಿದ್ದರು. ಮಳೆ, ಬಿಸಿಲಿಗೆ ರಕ್ಷಣೆ ಇಲ್ಲದೇ ಒಂದರ್ಥದಲ್ಲಿಗೋಡೆಯೂ ಇಲ್ಲದೇ ಚಿಕ್ಕಮಕ್ಕಳೊಂದಿಗೆ ದಯನೀಯ ಸ್ಥಿತಿಯಲ್ಲಿ ವಾಸಿಸುತ್ತಿದ್ದ ಈ ಮಹಿಳೆಗೆ ಈಗ ಸುಸಜ್ಜಿತ ಮನೆ ನಿರ್ಮಿಸಿಕೊಟ್ಟಿದ್ದಾರೆ.

ಫಯಾಜ್ ಹೊನ್ನುಟಗಿ, ಮೈಬುಬ್ ಬಾಗವಾನ್, ಬಾಬುಲಾಲ್ ಚೌದರಿ, ಮತ್ತಿನ್



ಮೀರದೆ, ಬಾಬಾಜಾನ್ ಉಕ್ಕಲಿ, ಕಮ್ಮು ಉಕ್ಕಲಿ, ಸಾಧೀಕ್ ಚೌದರಿ, ಜೂಬೇರ್ ಮೊಗರೆ ಒಳಗೊಂಡ ತಂಡವು ಸುಮಾರು ನೂರಕ್ಕಿಂತ ಹೆಚ್ಚಿನ ಸದಸ್ಯರು ಸಮಾಜ ಮುಖಿ ಕಾರ್ಯ ಶ್ಲಾಘನೀಯ.

ತಂಡದಲ್ಲಿದ್ದ ಕೆಲವರು ತಮಗೆ ಬರುವ ಸೆಂಟ್ರಿಂಗ್ ಕೆಲಸವನ್ನು ಉಚಿತವಾಗಿ ಮಾಡಿದರೆ, ತಂಡದಲ್ಲಿದ್ದ ಕೆಲವು ಗೌಂಡಿ, ಮೇಸ್ತ್ರಿಗಳು ಗೋಡೆ ಕಟ್ಟುವ ಕಾರ್ಯ ಉಚಿತವಾಗಿ ಮಾಡಿದ್ದಾರೆ, ಇನ್ನೊಂದಿಷ್ಟು ಹಣವನ್ನು ದಾನಿಗಳಿಂದ ಸಂಗ್ರಹಿಸಿದ್ದಾರೆ, ಈ ಪವಿತ್ರ ಕಾರ್ಯಕ್ಕೆ ದಾನಿಗಳು ಸಹ ಉದಾರ ಮನಸ್ಸಿನಿಂದ ಸಹಕರಿಸಿದ್ದುಂಟು.

**ಇನ್ನೊಬ್ಬರ ನೋವಿಗೆ ಸ್ಪಂದಿಸುವುದು ಮಾನವೀಯ ಧರ್ಮ, ಜಾತಿ, ಧರ್ಮ ನಮಗೆ ಮುಖ್ಯವಲ್ಲ, ಎಲ್ಲಾ ಸಮಾಜದ ಜನರು ನಮ್ಮ ಜೊತೆ ಇದ್ದಾರೆ, ಆಟೋಚಾಲಕರು, ಕಾರಪೇಂಟರ್, ಗ್ಯಾರೇಜ್ ಹೀಗೆ ಅಲ್ಪ ಆದಾಯದ ಗಳಿಸುವ ಆದರೆ ಹೃದಯ ಸಿರಿವಂತಿಕೆಯ ಸದಸ್ಯರು ತಂಡದಲ್ಲಿದ್ದಾರೆ, ಅನೇಕ ದಾನಿಗಳು ಬಡ ವಿಧವೆಗೆ ಮನೆ ಕಟ್ಟಿಸುವಲ್ಲಿ ನೆರವಾಗಿದ್ದಾರೆ, ಸಮಾಜಕ್ಕೆ ಒಳಿತಾಗಲಿ ಎಂಬುದೇ ನಮ್ಮ ಭಾವನೆ, ಇದು ಪ್ರಚಾರಕ್ಕಾಗಿ ನಾವು ಮಾಡುತ್ತಿಲ್ಲ.**

**–ಫಯಾಜ್, ಮೈಬುಬ ಸದಸ್ಯರು. ಬಿಜಾಪುರ ಯೂತ ಕವರೇಜ್. ವಿಜಯಪುರ**

ಉಳ್ಳವರು ದಾನ ಮಾಡುವುದು ಸಹಜ, ಆದರೆ ತಾವೇ ಕಷ್ಟಪಟ್ಟು ತುತ್ತಿನ ಚೀಲ ಸಂಪಾದಿಸುವ ಈ ತಂಡದ ಸದಸ್ಯರು ಇನ್ನೊಬ್ಬರ ಸಂಕಷ್ಟಕ್ಕೆ ಸ್ಪಂದಿಸಿದ್ದು ಮಾತ್ರ ಮಾನವೀಯತೆಯ ಪ್ರತಿಬಿಂಬ.

**ಪ್ರತಿ ತಿಂಗಳು ರೇಷನ್!**

ಇದು ಒಂದೇ ಸಮಾಜ ಕಾರ್ಯಕ್ಕೆ ಈ ತಂಡ ಸೀಮಿತವಾಗಿಲ್ಲ. ಪ್ರತಿ ತಿಂಗಳು ತಮಗೆ ಬರುವ ಅಲ್ಪ ಆದಾಯದಲ್ಲಿಯೇ ಪ್ರತಿ ತಿಂಗಳು 100 ರೂ. ಸಂಗ್ರಹಿಸುತ್ತಾರೆ, ಎಲ್ಲರೂ ಸಂಗ್ರಹಿಸಿ ಪ್ರತಿ ತಿಂಗಳು ಐದು ಬಡ ಕುಟುಂಬಗಳಿಗೆ ಒಂದು ತಿಂಗಳಿಗೆ ಬೇಕಾಗುವ ದಿನಸಿ ಪದಾರ್ಥಗಳನ್ನು ನೀಡುವುದುಂಟು.

# ಮೋದಿ ಟ್ರಂಪ್ ಗುಲಾಮ ಅಲ್ಲ: ಸಜ್ಜನಶೆಟ್ಟಿ

• ಮಲ್ಲಮ್ಮ ನುಡಿ ವಾರ್ತೆ ಚಿತ್ತಾಪುರ

ರಾಜ್ಯಸಭಾ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ಟ್ರಂಪ್ ಗುಲಾಮ ಎಂದು ಹೇಳಿ ಅವಮಾನಿಸಿದ್ದು ಖಂಡನೀಯ, ಮೋದಿ ಟ್ರಂಪ್ ಗುಲಾಮ ಅಲ್ಲ ಮಲ್ಲಿಕಾರ್ಜುನ ಖರ್ಗೆ ಅವರೇ ಸೋನಿಯಾ ಗಾಂಧಿ ಗುಲಾಮರಾಗಿದ್ದಾರೆ ಎಂದು ಬಿಜೆಪಿ ತಾಲೂಕು ಅಧ್ಯಕ್ಷ ರವೀಂದ್ರ ಸಜ್ಜನಶೆಟ್ಟಿ ತಿರುಗೇಟು ನೀಡಿದರು.

ಬಿಜೆಪಿ ಕಚೇರಿಯಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ ಅವರೇ ಗುಲಾಮರಾಗಿದ್ದು ಮೋದಿ ಟ್ರಂಪ್ ಗುಲಾಮರೆಂದು ಹೇಳಿರುವುದಕ್ಕೆ ಸಂವಿಧಾನದತ್ತ ಪ್ರಮುಖವಾದ ಪ್ರಧಾನ ಮಂತ್ರಿ ಹುದ್ದೆಗೆ ಅಗೌರವವಾಗಿ ಏಕ ವಚನದಲ್ಲಿ ಮಾತನಾಡುವುದು ಖರ್ಗೆ ಅವರಿಗೆ ಶೋಭೆ ತರುವುದಿಲ್ಲ ಉಗ್ರವಾಗಿ ಖಂಡಿಸಲಾಗುವುದು ಎಂದು ಹೇಳಿದರು.



ಅಂದು ಭಾನುವಾರ ಇದ್ದರೂ ಸಹ ತಾಲೂಕು ಮಟ್ಟದ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಎಲ್ಲಾ ಸಿಬ್ಬಂದಿಗಳು ಭಾಗವಹಿಸಬೇಕೆಂದು ಹೇಳಿ ವಾಮಮಾರ್ಗದಿಂದ ಜನರನ್ನು ಸೇರಿಸಿದ್ದಾರೆ.

ಸಾವಿರ ಮನೆಗಳ ಉದ್ಘಾಟನೆ ಮತ್ತು ಹಕ್ಕು ಪತ್ರ ವಿತರಣೆ ನಾಲ್ಕು ಬಾರಿ ಮಾಡಿ ಜನರಿಗೆ ದಿಕ್ಕು ತಪ್ಪಿಸಿದ್ದಾರೆ. ಮಾಡಿದ ಅಡಿಗಲ್ಲು ಮತ್ತೆ ಮತ್ತೆ ಉದ್ಘಾಟಿಸುತ್ತಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಮಲ್ಲಿಕಾರ್ಜುನ ಎಮ್ಮೆನೋರ್, ಚಂದ್ರಶೇಖರ ಅವಂಟಿ, ನಾಗರಾಜ ಭಂಕಲಗಿ ಇತರರಿದ್ದರು.

# ಮಹಿಳೆಯರು ಅಬಲೆಯರಲ್ಲ, ಸಾಧಕರು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ತೊಟ್ಟಿಲು ತೂಗುವ ಕೈ ದೇಶವನ್ನೂ ಆಳಬಲ್ಲದು ಎಂಬುದನ್ನು ಇಂದಿರಾಗಾಂಧೀ ಅವರು ನಿರೂಪಿಸಿದ್ದು, ಇಂದು ಎಲ್ಲ ಕ್ಷೇತ್ರದಲ್ಲೂ ಪುರುಷನಿಗೆ ಸಮನಾಗಿ ಸಾಧಿಸುತ್ತಿರುವ ಮಹಿಳೆಯರು ಅಬಲೆಯರಲ್ಲ, ಬದಲಾಗಿ ಸಾಧಕರು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದರು.

ಅರಣ್ಯ ಇಲಾಖೆಯ ವತಿಯಿಂದ ಇಂದು ಆಯೋಜಿಸಲಾಗಿದ್ದ ಮಹಿಳಾ ದಿನದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಪದ್ಮಶ್ರೀ ಪುರಸ್ಕೃತೆ ಡಾ. ಎಸ್.ಜಿ. ಸುಶೀಲಮ್ಮ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ. ಇಂದು ಅರಣ್ಯ ಇಲಾಖೆಯಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಅಧಿಕಾರಿಗಳು, ಸಿಬ್ಬಂದಿ ಇದ್ದು, ರಾಜ್ಯ ಅರಣ್ಯ ಇಲಾಖೆಯ ಅತ್ಯುನ್ನತ "ಅರಣ್ಯ ಪಡೆ ಮುಖ್ಯಸ್ಥ"ರ ಹುದ್ದೆಯನ್ನೇ ಮಹಿಳೆ ನಿರ್ವಹಿಸುತ್ತಿದ್ದಾರೆ ಎಂದರು.



**ತಾಯಿಯ ಪಾತ್ರ ಹಿರಿದು:** ಮನೆಯಲ್ಲಿ ಮಕ್ಕಳಿಗೆ ತಾಯಿಯಾಗಿ, ಸೋದರಿಯಾಗಿ, ಪತಿಗೆ ಮಡದಿಯಾಗಿ ಶ್ರಮಿಸುವ ಮಹಿಳೆ ಕಚೇರಿಯಲ್ಲೂ ಕಾರ್ಯ ನಿರ್ವಹಿಸುವ ಮೂಲಕ, ಸಂಸಾರದ ರಥ ಎಳೆಯುತ್ತಾರೆ, ಮಹಿಳೆಯರಿಗೆ ತಾಳ್ಮೆ ಹೆಚ್ಚು. ಅದಕ್ಕೇ ಕ್ಷಮಯಾ ಧರಿತ್ರೀ ಎನ್ನುವುದು. ತಾಯಿಯಾಗಿ ನೀವೆಲ್ಲರೂ ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ಮಾಡಿ, ಕೆಲಸದಲ್ಲಿ ಶ್ರದ್ಧೆ, ಪ್ರಾಮಾಣಿಕತೆಯಿಂದ ರಾಜ್ಯದ ಮತ್ತು ಆ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸಿ ಎಂದರು.

# ಹಿರಿಯ ವಕೀಲ ಹಾಗೂ ಅವರ ಪತ್ನಿ ಮೇಲೆ ಹಲ್ಲೆ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಪರಣ್ಣ ಮುನವಳ್ಳಿ ಮಾಜಿ ಶಾಸಕರು ನಗರ ಠಾಣೆಗೆ ಆಗಮಿಸಿ.ಹಿರಿಯ ವಕೀಲರಾದ ಪ್ರಭಾಕರ್ ಹೊಸಕೇರ ಹಾಗೂ ಅವರ ಪತ್ನಿ ಅನುಸುಯ್ಯನವರ ಮೇಲೆ ಹಲ್ಲೆ ಮಾಡಿದ್ದಾರೆ ಹಲ್ಲೆ ಮಾಡಿದ ಜಮೀರ್ ಎಂಬಾತನ ಮೇಲೆ ಗಂಗಾವತಿ ನಗರ ಠಾಣೆಯಲ್ಲಿ ಎಫ್‌ಐರ್ ದಾಖಲು ಮಾಡಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಿವರಾಮೇಗೌಡ ಮಾಜಿ ಸಂಸದರು. ಪ್ರತ್ಯಕ್ಷ ದರ್ಶಿಗಳು. ಹಾಗೂ ಹಿರಿಯ ಮುಖಂಡರುಗಳಾದ ಶಂಕ್ರಪ್ಪ ಹೊಸಳ್ಳಿ. ಸಂತೋಷ್ ಕೆಲೋಜಿ. ಜೋಗುದ್ ನಾರಾಯಣಪ್ಪ ನಾಯಕ. ಹನುಮಂತಪ್ಪ ನಾಯಕ. ಅಯ್ಯನಗೌಡ.ಶ್ರೀಕಾಂತ್. ಹಾಗೂ ಹಿರಿಯ ವಕೀಲರು.ಯುವಕರು.

ಹಾಗೂ ಅನೇಕರು ಗಂಗಾವತಿ ಹಿರಿಯ ವಕೀಲರ ಮೇಲೆ ಹಲ್ಲೆ ಆರೋಪಿ ಬಂಧನಕ್ಕೆ ಆಗ್ರಹಿಸಿ ಪೊಲೀಸ್ ಠಾಣೆಗೆ ಮುತ್ತಿಗೆ



ರಸ್ತೆ ಬದಿ ಬೀದಿಯಲ್ಲಿ ಸಾರ್ವಜನಿಕವಾಗಿ ಮೂತ್ರ ವಿಸರ್ಜನೆ ಮಾಡುವುದನ್ನು ಪ್ರಶ್ನಿಸಿದ ಹಿರಿಯ ನ್ಯಾಯವಾದಿಗಳ ಮೇಲೆ ಹಾಗೂ ಅವರ ಪತ್ನಿಯ ಮೇಲೆ ಯುವಕನೋರ್ವ ಹಲ್ಲೆ ಮಾಡಿರುವ ಘಟನೆ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆದಿದೆ. ಈ ಘಟನೆಯನ್ನು ಖಂಡಿಸಿ ಮಂಗಳವಾರ ರಾತ್ರಿ ನೂರಾರು ಸಂಖ್ಯೆಯ ವಕೀಲರು ಹಾಗೂ ಸಾರ್ವಜನಿಕರು ನಗರ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

**ಘಟನೆಯ ವಿವರ:** ನಗರದ ಹಿರಿಯ ನ್ಯಾಯವಾದಿ ಪ್ರಭಾಕರ್ ಅವರು ತಮ್ಮ ಪತ್ನಿಯೊಂದಿಗೆ ತೆರಳುತ್ತಿದ್ದಾಗ, ರಸ್ತೆ ಬದಿ ಸಾರ್ವಜನಿಕವಾಗಿ ಮೂತ್ರ ವಿಸರ್ಜನೆ ಮಾಡುತ್ತಿದ್ದ ಜಮೀರ್ ಎಂಬ ಯುವಕನನ್ನು ಪ್ರಶ್ನಿಸಿದ್ದಾರೆ. "ಸಾರ್ವಜನಿಕ ಸ್ಥಳದಲ್ಲಿ ಹೀಗೆ ಮಾಡುವುದು ಸರಿಯಲ್ಲ" ಎಂದು ಬುದ್ಧಿವಾದ ಹೇಳಿದ್ದಕ್ಕೆ ಆಕ್ರೋಶಗೊಂಡ ಜಮೀರ್, ನ್ಯಾಯವಾದಿ ಪ್ರಭಾಕರ್ ಮತ್ತು ಅವರ ಪತ್ನಿಯ ಮೇಲೆ ಏಕಾಏಕಿ ಹಲ್ಲೆ ನಡೆಸಿದ್ದಾನೆ ಎಂದು ವರದಿಯಾಗಿದೆ.

**ವಕೀಲರ ಆಕ್ರೋಶ:** ಘಟನೆಯ ವಿಷಯ ತಿಳಿಯುತ್ತಿದ್ದಂತೆ ಗಂಗಾವತಿ ವಕೀಲರ ಸಂಘದ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದರು.ಹಿರಿಯ ವಕೀಲರ ಮೇಲಿನ ಹಲ್ಲೆಯನ್ನು ಖಂಡಿಸಿ ನಗರ ಠಾಣೆಯ ಮುಂದೆ ಪ್ರತಿಭಟನೆ ನಡೆಸಿದ ವಕೀಲರು, ಆರೋಪಿ ಜಮೀರ್ ನನ್ನು ಕೂಡಲೇ ಬಂಧಿಸಿ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಕಾನೂನು ಅರಿವಿರುವ ಹಿರಿಯ ವಕೀಲರಿಗೇ ರಕ್ಷಣೆ ಇಲ್ಲದಂತಾಗಿದೆ. ಸಾರ್ವಜನಿಕ ಸ್ಥಳದಲ್ಲಿ ಅಸಭ್ಯವಾಗಿ ವರ್ತಿಸುವುದನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆ ಮಾಡಿರುವುದು ಖಂಡನೀಯ. ಆರೋಪಿಯನ್ನು ತಕ್ಷಣವೇ ಬಂಧಿಸದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು, ಎಂದು ಪ್ರತಿಭಟನಾ ನಿರತ ವಕೀಲರು ಎಚ್ಚರಿಸಿದ್ದಾರೆ.

# ಪ್ರಗತಿ ವಂಚಿತ ರಾಜ್ಯದ 55 ತಾಲೂಕು



**ಜನಪರ–ಕನಿಕರ**

**● ಅಕ್ರಂ ಖಾನ್**

**ಹೋರಾಟ ಸಮಿತಿ ಅಧ್ಯಕ್ಷ**

ರಾಜ್ಯದ 55 ಹೊಸ ತಾಲೂಕುಗಳು ಕೇವಲ ಘೋಷಣೆಗೆ ಸೀಮಿತವಾಗಿದ್ದು, ಬಹುತೇಕ ಕಡೆ ಅಭಿವೃದ್ಧಿಗೆ ಗ್ರಹಣ ಹಿಡಿದಿದೆ.

ಬೆಂಗಳೂರು ಜಿಲ್ಲೆಯ ಸುತ್ತಲಿನ ಜಿಲ್ಲೆಗಳನ್ನು ಹೊರತು ಪಡಿಸಿ ಕಲ್ಯಾಣ ಮತ್ತು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಅಧಿಕಾರಿಗಳಿಗೆ ಸಮರ್ಪಕ ಕಚೇರಿ ಮಾತ್ರ ವಲ್ಲದೆ ಸೌಲಭ್ಯಗಳಿಲ್ಲದ ಸ್ಥಿತಿಯಿದೆ.

ಇಂದು ಸಾಕಷ್ಟು ಸಮಸ್ಯೆಗಳನ್ನ ಎದುರಿಸಲಾಗುತ್ತಿದೆ. ಹೀಗಾಗಿ, ಈ ಬಜೆಟ್ ನಲ್ಲಾದರೂ ತಾಲೂಕು ಅಭಿವೃದ್ಧಿಗೆ ಅನುದಾನ ಸಿಗಬಹುದು ಎಂಬುದು ಜನರ ನಿರೀಕ್ಷೆ ಇದೆ. ಜಗದೀಶ ಶೆಟ್ಟರ್ ಸರಕಾರಾವಧಿಯಲ್ಲಿ 43 ಹೊಸ ತಾಲೂಕು ಘೋಷಿಸಿತ್ತು. ಆದರೆ, 2017–18 ರಲ್ಲಿ ಕಾಂಗ್ರೆಸ್ ಸರಕಾರ 43ಕ್ಕೆ ಇನ್ನು 6 ಪಟ್ಟಣ ಸೇರಿಸಿ ಒಟ್ಟು 49 ಹೊಸ ತಾಲೂಕು ಘೋಷಣೆ ಮಾಡಲಾಯಿತು. ಹೊಸ ತಾಲೂಕು ಅಭಿವೃದ್ಧಿಗೆ ತಲಾ 25 ಕೋಟಿಯಂತೆ 2000 ಕೋಟಿ ಅನುದಾನ ಅಂದಾಜಿಸಲಾಗಿತ್ತು. ಸರಕಾರಗಳ ಬದಲಾವಣೆಯಿಂದ ಹೊಸ ತಾಲೂಕುಗಳಿಗೆ ಅನುದಾನ ಬಿಡುಗಡೆಗೆ ಬ್ರೇಕ್ ಬಿದ್ದು, ಅಭಿವೃದ್ಧಿಯಿಂದ ವಂಚಿತ ವಾಗಿವೆ.

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಹೊಸ ತಾಲ್ಲೂಕು ಹೆಸರಿಗೆ ಮಾತ್ರ ಆಗಿದೆ. ಒಂದು ಕಾಲದಲ್ಲಿ ಕೈಗಾರಿಕೆಗಳಿಗೆ ಹಬ್ ಆಗಿತ್ತು. ಈಗ ಬದಲಾದ ಸಮಯದಲ್ಲಿ ಸಾಕಷ್ಟು ಪ್ರವಾಸೋದ್ಯಮ ಬೆಳೆದಿದೆ. ಆದರೆ ಮೂಲಭೂತ ಸೌಕರ್ಯಗಳೇ ಇಲ್ಲ.

ತಹಸೀಲ್ದಾರ ಹಾಗೂ ತಾಲೂಕು ಪಂಚಾಯತ ಕಚೇರಿ ಬಿಟ್ಟರೆ ಸರಿಯಾಗಿ ರಸ್ತೆ, ತಾಲೂಕು ಆಸ್ಪತ್ರೆ, ಕ್ಷೇತ್ರ ಶಿಕ್ಷಣ ಇಲಾಖೆ ಲೋಕೋಪಯೋಗಿ ಇಲಾಖೆ, ಸಬ್ ರಿಜಿಸ್ಟರ್ ಇಲ್ಲವೇ ಇಲ್ಲ. ದಾಂಡೇಲಿ ತಾಲೂಕು ನಗರ ಯೋಜನಾ ಪ್ರಾಧಿಕಾರ ಕಚೇರಿ ಇದ್ದ ಕಚೇರಿ ಶಿರಸಿಗೆ ಸ್ಥಳಾಂತರ ಮಾಡಲಾಗಿದೆ. ಈಗಾಗಲೇ ಸಾಕಷ್ಟು ಕಂದಾಯ, ಜಿಲ್ಲಾ ಉಸ್ತುವಾರಿ ಹಾಗೂ ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಏನು ಪ್ರಯೋಜನ ಇಲ್ಲ. ಇದರ ಜೊತೆಗೆ ಬೇರೆ ತಾಲೂಕುಗಳ ಕಥೆ ಸಹ ಇದೇ ರೀತಿ ಇವೆ.

**ಎಲ್ಲೆಲ್ಲಿ ಹೇಗಿದೆ ಪರಿಸ್ಥಿತಿ ?**

ಬೆಂಗಳೂರು, ಕೋಲಾರ ಜಿಲ್ಲೆಗಳ ಹೊಸ ತಾಲೂಕು ಹೊರತುಪಡಿಸಿ, ವಿಜಯಪುರದ ಬಬಲೇಶ್ವರ, ನಿಡಗುಂದಿ, ತ್ರಿಕೋಟ, ದೇವರಹಿಪ್ಪರಗಿ, ತಾಳಿಕೋಟೆ, ಚಟ ಚಣ, ಕೋಲ್ಹಾರ, ಹಾವೇರಿಯ ರಟ್ಟೆ–ಹಳ್ಳಿ, ಮೈಸೂರಿನ ಸರಗೂರು, ಚಿಕ್ಕಮಗಳೂರಿನ ಅಜ್ಜಂಪುರ, ಉತ್ತರಕನ್ನಡದ ದಾಂಡೇಲಿ, ದಕ್ಷಿಣ ಕನ್ನಡದ ಮೂಡಬಿದಿರೆ, ಕಡಬ, ಉಡುಪಿಯ ಬ್ರಹ್ಮಾವರ, ಕಾಪು, ಬೆಂದೂರು, ಕೊಪ್ಪಳದ ಕುಕನೂರು, ಕನಕಗಿರಿ, ಕಾರಟಗಿ ಗದಗದ ಗಜೇಂದ್ರಗಡ, ಲಕ್ಷ್ಮೇಶ್ವರ, ಧಾರವಾಡದ ಅಣ್ಣಿಗೇರಿ, ಅಳ್ನಾವರ, ಹುಬ್ಬಳ್ಳಿ ನಗರ, ದಾವಣಗೆರೆಯ ನ್ಯಾಮತಿ ತಾಲೂಕುಗಳ ಸ್ಥಿತಿಯೂ ಬದಲಾಗಿಲ್ಲ. ಜತೆಗೆ, ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಘೋಷಿತ ರಾಮನಗರದ ಹಾರೋಹಳ್ಳಿ, ಚಿಕ್ಕಬಳ್ಳಾಪುರದ ಚೇಳೂರು, ಬಾಗಲಕೋಟೆಯ ತೇರದಾಳ, ಚಿಕ್ಕಮಗಳೂರಿನ ಕಳಸ, ಕೊಡಗಿನ ಪೊಣಟಿಜಜಜಿಟಿಜಜನ್ನಂಪೇಟೆ, ಕುಶಾಲನಗರ, ವಿಜಯಪುರದ ಅಲಮೇಲ, ದಕ್ಷಿಣ ಕನ್ನಡದ ಮುಲ್ಕಿ ಮತ್ತು ಉಲ್ಲಾಳ, ಮೈಸೂರಿನ ಸಾಲಿಗ್ರಾಮ, ಹಾಸನದ ಶಾಂತಿಗ್ರಾಮ, ಬೆಳಗಾವಿಯ ಯರಗಟ್ಟಿ ತಾಲೂಕು ಗಳಲ್ಲಿ ಯಾವುದೇ ಪ್ರಕ್ರಿಯೆಗಳೇ ಚಾಲನೆಗೊಂಡಿಲ್ಲ. ರಾಜ್ಯ ಸರಕಾರ ಬಜೆಟ್ ಮಂಡನೆಗೆ ಸಜ್ಜಾಗುತ್ತಿದೆ. ಆದರೆ 2013ರಲ್ಲಿ ರಾಜ್ಯದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ 47 ಹೊಸ ತಾಲೂಕುಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ನೇಮಕ ಕಡೆಗಣಿಸಿದ್ದು, ಈ ಬಜೆಟ್ ನಲ್ಲಿ ಹೊಸ ತಾಲೂಕುಗಳಿಗೆ ಬಿಇಓ ಕಚೇರಿ ಮಂಜೂರು ಮಾಡುವುದರ ಮೂಲಕ ಬಿಇಓ ಗಳನ್ನು ನೇಮಕ ಮಾಡಬೇಕೆಂಬ ಹಕ್ಕೊತ್ತಾಯ ಶಿಕ್ಷಣ ಇಲಾಖೆ ಯಿಂದ ಮೊಳಗಿದೆ.

2018ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯಾ ಹೊಸ ತಾಲೂಕುಗಳನ್ನು ಘೋಷಿಸಿ ಹಲವು ವರ್ಷಗಳು ಉರುಳಿವೆ. ಆದರೆ ಅಸ್ತಿತ್ವಕ್ಕೆ ಬಂದ ತಾಲೂಕುಗಳಿಗೆ ತಹಸೀಲ್ದಾರ್ ಗಳನ್ನು ನೇಮಕ ಮಾಡಿದ ರಾಜ್ಯ ಸರಕಾರ ಮಾತ್ರ ಕ್ಷೇತ್ರ ಶಿಕ್ಷಣಾಧಿಕಾ ರಿಗಳನ್ನು ನೇಮಕ ಮಾಡದೇ ಶಿಕ್ಷಣ ಇಲಾಖೆಯನ್ನು ಸಂಪೂರ್ಣ ಅಲಕ್ಷಿಸಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಹೊಸ ತಾಲೂಕು ಕೇಂದ್ರಗಳಲ್ಲಿ ಶೈಕ್ಷಣಿಕ ಹಿತದೃಷ್ಟಿಯಿಂದ ಬಿಇಓ ಕಚೇರಿ ಆರಂಭಿಸಲಿಕ್ಕೆ ರಾಜ್ಯ ಸರಕಾರ ಮೀನ–ಮೇಷ ಮಾಡುತ್ತಿರುವುದರಿಂದ ಆಯಾ ತಾಲೂಕು ವ್ಯಾಪ್ತಿಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಜಿಲ್ಲಾ ಕೇಂದ್ರಕ್ಕೆ ಪರದಾಡುವುದು ಮಾತ್ರ ನಿಂತಿಲ್ಲ.

**ನಿಲ್ಲದ ಅಲೆದಾಟ:** ಸರಕಾರದ ಈ ಮೊಂಡು ಧೋರಣೆ ಯಿಂದಾಗಿ ಹೊಸ ತಾಲೂಕು ಕೇಂದ್ರಗಳಲ್ಲಿ ಟಿಸಿ, ಗ್ರಾಮೀಣ ಪ್ರಮಾಣ ಪತ್ರ, ದಾಖಲೆ ಪರಿಶೀಲನೆಗೆ ಹಳೆ ತಾಲೂಕಿನ ಬಿಇಓ ಕಚೇರಿಗಳಿಗೆ ಅಲೆ ದಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಜೊತೆಗೆ ಶಿಕ್ಷಕರು ತಮ್ಮ ಪಾಠ–ಪ್ರವಚನಕ್ಕೆ ಗುಡ್ ಬೈ ಹೇಳಿ ದೂರದ ಹಳೇ ತಾಲೂಕು ಬಿಇಓ ಕಚೇರಿಗೆ ಅಲೆದಾಡು ವಂತಾಗಿದೆ. ಇದರ ಜೊತೆಗೆ ಜನಸಾಮಾನ್ಯರಿಗೆ ಆಸ್ಪತ್ರೆ ಅತ್ಯವಶ್ಯಕ ಆಗಿದ್ದು ಸರಿಯಾಗಿ ಆಸ್ಪತ್ರೆ ಹೊಸ ತಾಲೂಕುಗಳಲ್ಲಿ ಇಲ್ಲ ದಾಂಡೇಲಿಯ ಜನರು ಪ್ರತಿನಿತ್ಯ ಪಕ್ಕದ ಜೋಯಿಡಾ ಅಥವಾ ಹಳಿಯಾಳಕ್ಕೆ ಹೋಗಬೇಕು. ಪ್ರತಿನಿತ್ಯ ಆಸ್ಪತ್ರೆಗಾಗಿ ಹೆಣಗಾಟ ನಡೆಸುತ್ತಾ ಇದ್ದಾರೆ.

ರಾಜ್ಯ ಸರ್ಕಾರ ಹೊಸ ತಾಲೂಕು ಗಳನ್ನ ಘೋಷಣೆ ಮಾಡಿ ಹಲವಾರು ವರ್ಷಗಳು ಆದವು ಆದರೆ ಅಭಿವೃದ್ಧಿ ಮಾತ್ರ ಆಗಿಲ್ಲ ಆದ್ದರಿಂದ ಈಗ ಸಿಎಂ ಸಿದ್ದರಾಮಯ್ಯ ನವರು ಬಜೆಟ್ ಮಂಡನೆ ಮಾಡುತ್ತಾ ಇದ್ದಾರೆ. ಈಗಲಾದರೂ ಬಜೆಟ್ ನಲ್ಲಿ ಹೊಸ ತಾಲೂಕುಗಳ ಅಭಿವೃದ್ಧಿಗೆ ಅನುದಾನ ಮೀಸಲು ಇರಿಸಬೇಕು ಇದರ ಜೊತೆಗೆ ಬಜೆಟ್ ನಲ್ಲಿ ಘೋಷಣೆ ಮಾಡಿ ಕೂಡಲೇ ಅನುದಾನ ಬಿಡುಗಡೆ ಮಾಡ ಬೇಕು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)